


ಅಖಿಲ ಭಾರತ ಪತ್ರಿಕೆ
ಡಿಸೆಂಬರ್ 2022


# ಅಮರತ್ವದೊಡನೆ ಅನುಸಂಧಾನ

ಬೆಲೆ : 15/-



ಆತ್ಮದಾಭೀಪ್ಸೆಯಲಿ ಅವನು ಹೀಗೆ ಮೃಣ್ಮಯದ ಜೀವವನ್ನು
ವಿವರ್ಜಿತದಲ್ಲಿ ಉತ್ತರೋತ್ತರಕೆ ಎತ್ತರಿಸಿಕೊಂಡನಿನ್ನು,
ಅವನಾತ್ಮವೀಗ ಹೊಸ–ಹುಟ್ಟಿಗಾಗಿ ವೈರಾಜ್ಯ ವ್ಯಾಪ್ತಿಯೊಳಗೆ
ತಾ ಸ್ಪಂದಗೊಳಲು ನೆಲೆ ನಿಂತನೀಗ ಅವನಾಗ ವ್ಯಾಪ್ತದೊಳಗೆ
ಜಡದ–ಜಂಜಡದ ನಶ್ವರದ ವಸ್ತು–ವಿಷಯಗಳ ಮಧ್ಯೆ ರಕ್ತಿ
ಅದರೊಳಗೆ ಸಿಲುಕಿ ತಾ ಕರಗದಂತೆ ಪಡೆದಿಹನು ಈಗ ಮುಕ್ತಿ
ಮತ್ತಿದೋ ಚಲಿಸಿ ಪರಿಶುದ್ಧ ಭೂಮ–ಚಿನ್ಮಯದ –ಭುವನದೊಳಗೆ
ಅಪರೂಪದುಸಿರ ಸಮತಾಪನೀಯ–ಮಂಡಲದಿ ನೆಲೆಸಿ ಬೆಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 2 ಪುಟ 486)**

**ಅಖಿಲ ಭಾರತ ಪತ್ರಿಕೆ**

**ಡಿಸೆಂಬರ್ 2022**

ಸಂಪುಟ: 33 ಸಂಚಿಕೆ: 12


**ಪರಿವಿಡಿ**


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ:**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ಅಮರತ್ವದೊಡನೆ ಅನುಸಂಧಾನ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಸಾವಿನ ನಾಲ್ಕು ಭಯಗಳು ಮತ್ತು ಸಾವನ್ನು ಗೆಲ್ಲುವ ನಾಲ್ಕು ವಿಧಾನಗಳು** 6
ಅನು: ಡಾ॥ ಮಹಾದೇವ ಸಕ್ರಿ

**ದೇಹದ ಸೀಮಿತತೆ** 15
ಅನು: ನಾಗಜ್ಯೋತಿ ಮಾನ್ವಿ

**ಪ್ರಾಚೀನ ಧರ್ಮ ಗ್ರಂಥಗಳಲ್ಲಿ ಅಮರತ್ವ** 19
ಅನು: ಡಾ॥ ಬಿ.ಆರ್. ಭೀಡ್

**ಅಮರತ್ವ ಎಂದರೆ ಏನು?** 26
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 34
ಅನು: ಜಾನ್ವಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 43
ಅನು: ಡಾ॥ ಬಿ.ಆರ್. ಭೀಡ್

**ಸಾವು; ಒಂದು ವೈಜ್ಞಾನಿಕ ವಿಶ್ಲೇಷಣೆ** 48
ಅನು: ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 60

## ಸಂಪಾದಕರ ಟಿಪ್ಪಣಿ

ಜನನ–ಮರಣ, ಮತ್ತೆ ಮತ್ತೆ ಜನನ–ಮರಣ–ಜನನ ಎನ್ನುವ ಮಾತು ಯುಗಯುಗಳಿಂದಲೂ ಕೇಳುತ್ತಲೇ ಇದೆ. ನಮ್ಮ ಚಿಂತನ ಮತ್ತು ನಮ್ಮ ಚೇತನವು ಮೇಲ್ನೋಟಕ್ಕೇ ಕಾಣುವ ಹಾಗೆ ಎರಡು ವೈರುದ್ಧತೆಗಳಿಂದಲೇ ಕೂಡಿದೆ; ಆದರೆ ಎಲ್ಲಿಯವರೆಗೂ ಈ ರಹಸ್ಯದ ಪುಟಗಳನ್ನು ಹಾಗೆಯೇ ಉಳಿಸಿಕೊಳ್ಳುವದು, ಅಲ್ಲಿ ಹುದುಗಿಸಲ್ಪಟ್ಟಿರುವ ಸತ್ಯಗಳನ್ನು ಮುಕ್ತಗೊಳಿಸಿಕೊಳ್ಳಬೇಕಿದೆ. ಕೇವಲ ಜೀವನವು ಮಾತ್ರವೋ ಅಥವಾ ಸಾವು ಎನ್ನುವದು ಜೀವವನ್ನು ಅಂತರ್ಗತಗೊಳಿಸಿ–ಕೊಂಡಿರುವದೋ ಎನ್ನುವದನ್ನು – ಸಾವಿನ ನಂತರದಲ್ಲಿಯೂ ಸಹಿತ ನಿಗದಿತ ಅವಧಿಯ ನಂತರ ಮತ್ತೆ ಜೀವನದ ಬಗೆಗೆ ಎಂದೆಂದಿಗೂ ಅಚ್ಚರಿ ಇದ್ದೇ ಇರುತ್ತದೆ. [ಎಐಎಮ್]

## ಸಂಪಾದಕೀಯ

**ಜೀವನವು ದಿವ್ಯವಾದರೆ ಮರಣವು ದಿವ್ಯತ್ವವಾಗಿದೆ.** ದಿವ್ಯಕ್ಕೂ ಭವಕ್ಕೂ ಅವಿನಾಭಾವವಾದ ಸಂಬಂಧವಿದೆ, ಆದರೆ ದಿವ್ಯತ್ವವು ಮಾತ್ರ ಸದಾ ಅವಕಾಶವನ್ನೇ ಆಧರಿಸಿಕೊಂಡಿರಲು ಅಭೀಪ್ಸೆ ಪಡುತ್ತದೆ. ಆದರೆ ಈ ಅಭೀಪ್ಸೆ ಈಡೇರಬೇಕೆಂದರೆ ಅದು 'ಜೀವನದ ಅನುಭವದ'ಲ್ಲಿಯೇ ಪಕ್ವವಾಗಿ ಪೂರ್ಣಗೊಳ್ಳಬೇಕಾಗುತ್ತದೆ. ಹೀಗಾಗಿ ಜನನ ಆಕಸ್ಮಿಕ; ಮರಣ ಖಚಿತ ಎನ್ನುವ ಮಾತನ್ನು ಮತ್ತೊಮ್ಮೆ ನಿಕಷಕ್ಕೆ ಒಡ್ಡಬೇಕಾಗಿದೆ. ಮರಣದ ಖಚಿತತೆ ಮಾನವ ಚಿಂತನೆಯ ಊಹೆ. ಆದರೆ ಇದೇ ಆಧಾರದಲ್ಲಿಯೇ ಜನನವೂ ಖಚಿತ ಎನ್ನುವ ಹಂತ ಗೋಚರಿಸುತ್ತದೆ. ಈ ಎರಡೂ ಹಂತಗಳು ವಿಕಾಸದ ಪಥದಲ್ಲಿ ನಡೆಯುವ, ಪರಿಪೂರ್ಣತೆಗಾಗಿ ಪಯಣಿಸುತ್ತಿರುವ ಪ್ರಕ್ರಿಯೆಗಳಾಗಿವೆ. ಹೀಗಾಗಿ ಜನನ–ಮರಣಗಳೆರಡೂ ರೂಪಾಂತರದ ಹಂತಗಳು ಎನ್ನುವದು 'ಅಮರತ್ವದ ಸಾರ'ವಾಗಿದೆ.

ಸಾವು ಎನ್ನುವದು ಸಗುಣ ಬ್ರಹ್ಮನಿಗೂ ತಪ್ಪಿಲ್ಲ. ಇದನ್ನೇ ಶಂಕರಾಚಾರ್ಯರೂ ಸಹಿತ 'ಬ್ರಹ್ಮನೂ ಸಹಿತ ಪಂಚತ್ವವನ್ನು ಹೊಂದುತ್ತಾನೆ' – ಎಂದು ಸೌಂದರ್ಯ ಲಹರಿಯಲ್ಲಿ ಹೇಳುತ್ತಾರೆ. ಅಂದರೆ ಯಾವುದು 'ರೂಪಧಾರಿ'ಯಾಗುತ್ತದೆಯೋ, ಆ ರೂಪಕ್ಕೆ ಕಾಲವು/ಸಮಯವು ನಿಗದಿಯಾಗುವದರಿಂದ, ಆ ರೂಪವು

ಪರಿವರ್ತನೆ ಹೊಂದಲೇಬೇಕಾಗುತ್ತದೆ. ಈ ಪರಿವರ್ತನೆಯನ್ನು ಮಾನವ ಕುಲವು 'ಮರಣ'ವೆಂದು ಪರಿಗಣಿಸಿಕೊಂಡಿದೆ. ಅಂದರೆ ರೂಪ ಮಾತ್ರ ಬದಲಾಗುವದರಿಂದ ಇದನ್ನು 'ಸಾವು' ಎನ್ನುವ ಬದಲು 'ರೂಪಾಂತರ' ಎನ್ನುವದು ಸೂಕ್ತವಾಗುತ್ತದೆ.

ಆದರೆ ಸಾವನ್ನು ಧೈರ್ಯವಾಗಿ ಎದುರಿಸಿದ ಕೇವಲ ಮೂರು ಘಟನೆಗಳು ಮಾತ್ರ ಇಂದಿಗೂ ಜನಜನಿತವಾಗಿದೆ. ಮೊದಲನೇಯದು ನಚೀಕೇತನ ವಿಷಯ. ಎರಡನೇಯದು ಮಾರ್ಕಾಂಡೇಯ. ಮೂರನೇಯದು 'ಸತ್ಯವಾನ–ಸಾವಿತ್ರಿ'. ಮಾರ್ಕಾಂಡೇಯನಾದರೋ ಶಿವನ ಸಹಾಯದಿಂದ ಸಾವನ್ನು ದೂರ ಮಾಡಿಕೊಂಡವನು. ನಚೀಕೇತನ ವಿಷಯದಲ್ಲಿ ನೇರವಾಗಿ ಸಾವಿನೊಡನೆ ಸಂಭಾಷಿಸಿ ರಹಸ್ಯವನ್ನರಿಯಲು ಯತ್ನಿಸಿದ ಘಟನೆ. ಆದರೆ ಸಾವಿತ್ರಿ ಮಾತ್ರ ತನ್ನ ಪತಿಯ ಸಲುವಾಗಿ ಮೃತ್ಯು ದೇವತೆಯನ್ನೇ ಸೋಲಿಸಿ, ಅಮರತ್ವದ ಪಥವನ್ನು ತೋರಿದವಳು. ಪ್ರಾಣವು ದೇಹದಿಂದ ಹೊರಟ ನಂತರದಲ್ಲಿ, ಅದು ಅಮರತ್ವವಾಗುವ ಎಲ್ಲ ಹಂತಗಳನ್ನೂ 'ಸಾವಿತ್ರಿ'ಯಲ್ಲಿ ಕಾಣುತ್ತೇವೆ.

ಆದರೆ ಸಾವಿನ ಬಗೆಗೆ ಇರುವ ಭಯದಿಂದ, ನಮ್ಮದೇ ಗ್ರಂಥವಾಗಿರುವ 'ಗರುಡ ಪುರಾಣ'ವನ್ನೂ ಸಹಿತ ಅಧ್ಯಯನ ಪರಂಪರೆಯಿಂದ ದೂರವೇ ಇಟ್ಟಿದ್ದೇವೆ. ಆದರೆ ಶ್ರೀ ಅರವಿಂದರು ಈ 'ಜನನ–ಮರಣಗಳ' ಚಕ್ರದಾಚೆ ಅಮರತ್ವ ನೆಲೆಯಲ್ಲಿ ಶಾಶ್ವತವಾಗುವ ಪಥವನ್ನು ತೋರಿಸಿದ್ದಾರೆ.

ನಾನು ಸತ್ತಿದ್ದೇನೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ; ಅದೇ ರೀತಿಯಲ್ಲಿ "ನಾನು ಸತ್ತಿದ್ದೇನೆಯೇ" ಎಂದು ಪ್ರಶ್ನೆ ಕೇಳಲೂ ಸಹಿತ ಸಾಧ್ಯವಿಲ್ಲ. ಬೇರೆ ಯಾರಾದರೂ 'ಆ ವ್ಯಕ್ತಿಯ ಆ ಸ್ಥಿತಿಯ' ಬಗೆಗೆ ಹೇಳಬೇಕಾಗಿದೆ. ಹೀಗಾಗಿ "ಅವನು ಸತ್ತಿದ್ದಾನೆ" ಎನ್ನುವ ಹೇಳಿಕೆ ಬರುತ್ತದೆ. ಆದರೆ ಈ 'ಅವನು ಸತ್ತಿದ್ದಾನೆ' ಎನ್ನುವ ಮಾತನ್ನು ಕೇಳಿದ ಆತ್ಮವು ನಗೆಯಾಡುತ್ತದೆಯಂತೆ. ಹೀಗಾಗಿ 'ಸಾವಿನ ಸ್ವಯಂ' ಅನುಭವವು ಸಾಧ್ಯವಿಲ್ಲ. ಮತ್ತೊಬ್ಬರ 'ಸಾವಿನ' ಮೂಲಕವೇ 'ಸಾವಿನ ರಹಸ್ಯ'ವನ್ನು ಅರಿಯಬೇಕಾದ ಅಪರೂಪದ ಸಂದರ್ಭವಿದೆ.

ಇಲ್ಲಿ ಸತ್ಯವಾನನ ಸಾವಿನ ಮೂಲಕವೇ 'ಸಾವಿನ ರಹಸ್ಯದ' ಬಗೆಗೆ 'ಸಾವಿತ್ರಿ' ತಿಳಿಸುತ್ತಾಳೆ. ಆದರೆ ಈ 'ಸಾವಿನ ರಹಸ್ಯ'ವನ್ನು ಅರಿತುಕೊಳ್ಳುವ, ಅದನ್ನು 'ಧರಿಸಿಕೊಳ್ಳುವ ಸಾಮರ್ಥ್ಯ' ಇರುವದು 'ಚೈತನ್ಯಕ್ಕೆ' ಮಾತ್ರ. ಹೀಗಾಗಿ ಇಲ್ಲಿ 'ಸಾವಿತ್ರಿ'ಯನ್ನು ಚೈತನ್ಯವಾಗಿ, ಸತ್ಯವಾನನ್ನು 'ಸಾಕಾರವಾಗಿ' ಅಧ್ಯಯನ


ಮಾಡಬೇಕಿದೆ. ಈ ವಿಷಯಕ್ಕೆ ಪೂರವಾಗುವಂತೆ "ಚೈತನ್ಯ"ದ ಭಾಷೆ ಮತ್ತು ಸಾಕಾರದ ಭಾಷಾ ವ್ಯವಸ್ಥೆಯನ್ನೂ ಅರಿತುಕೊಳ್ಳಬೇಕಿದೆ. ಜಗತ್ತಿನಾದ್ಯಂತ 'ಸಾವಿನ ಭಯ' ಇದ್ದೇ ಇದೆ. ಆದರೆ ಸಾವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಉದಾಹರಣೆಗಳು ಕಡಿಮೆ. ನಮ್ಮ 'ಗರುಡ ಪುರಾಣ', ಈಜಿಪ್ತಿನ 'ಕಾ' ಗ್ರಂಥ, ಹಾಗೂ "ಟಿಬೇಟಿನ ಬುಕ್ ಆಫ್ ಡೆಥ್"ದಂತಹ ಕೆಲವೇ ಕೃತಿಗಳು ಈ ವಿಷಯವಾಗಿ ವಿವರಣೆಗಳನ್ನು ಒದಗಿಸುತ್ತಿವೆ.

ಆದರೆ 'ಸಾವಿತ್ರಿ' ಈ 'ಸಾವಿನ ರಹಸ್ಯವನ್ನು' ಹಾಗೂ ಅದನ್ನು ಗೆಲ್ಲುವ ಸೂತ್ರವನ್ನು ತೋರುತ್ತಿದೆ. ಇದನ್ನು ಸ್ಪಷ್ಟವಾಗಿ;

'ಕಾಲದಂಚಿನಲಿ ಹುಟ್ಟು–ಸಾವಿನಾ ಸಂಕೇತ ತೋರುತಲ್ಲಿ
ಅದು ಚಲಿಸುತಿಹುದು ಅದು ಸುತ್ತುತಿಹುದು ಮಿನುಮಿನುಗು ರೂಪದಲ್ಲಿ
ಜ್ಞಾತ ವಿಶ್ವದಾ ಅಂಚಿನಾಚೆಯಲಿ ಘನನಿಶೆಯ ಒಡಲಿನೊಳಗೆ
ಧಗಧಗಿಸಿ ಸತತ ಜ್ವಾಲೆಯದು ಪ್ರಬಲ ಕ್ರಿಯೆಯನ್ನು ಗೋಳದೊಳಗೆ'
[ಸಾವಿತ್ರಿ; ಪುಟ 56]

ಎಂದು ವಿವರಣೆ ಇದೆ. ಇದು ಕೇವಲ ಕಾವ್ಯ ಪ್ರತಿಮೆಗಾಗಿ ಸೃಷ್ಟಿಗೊಂಡ ಶಬ್ದಪುಂಜಗಳಲ್ಲ. ಏಕೆಂದರೆ "Mighty Action-Blaze" ಎನ್ನುವದು ನಿಜವಾಗಿಯೂ ಅಸ್ತಿತ್ವದಲ್ಲಿದೆ. ನಮ್ಮ ಆಕಾಶ ಗಂಗೆಯ ವ್ಯಾಪ್ತಿಯ ಆಚೆ ದೂರದಲ್ಲಿ ಇರುವ ತೀವ್ರಾತಿ ತೀವ್ರವಾದ ಕಾಂತಿ ತೇಜವನ್ನು ಬೀರುತ್ತಿರುವ 'ಕ್ವೆಸಾರ್' ಮಾದರಿಯ ಆಕಾಶಕಾಯವೊಂದಿದೆ. ಬಹುತೇಕವಾಗಿ ಲಕ್ಷಣಾತೀತವಾಗಿರುವ ಹಂತದ ಇದನ್ನು 1961 ರಲ್ಲಿ ಗುರುತಿಸಲಾಗಿದೆ. 1930 ರ ಸಮಯಕ್ಕೆ ಇದು ಸಾವಿತ್ರಿಯಲ್ಲಿ 'ವ್ಯಾಕೋಚ ವಿಶ್ವದ ಸ್ವರೂಪದ ಸಿದ್ಧಾಂತ'ಕ್ಕೆ ಪುರಾವೆ ಒದಗಿಸಿದೆ. ಇದು ನಕ್ಷತ್ರಗಳ ಜನನದ ತೊಟ್ಟಿಲು ಎಂದೂ ಗುರುತಿಸಲಾಗುತ್ತಿದೆ.

ಈ ಎಲ್ಲ ಆಯಾಮಗಳಲ್ಲಿ ಈ ಸಂಚಿಕೆಯಲ್ಲಿ 'ಸಾವಿನ ಸ್ವರೂಪ ಹಾಗೂ ಅಮರತ್ವದ ನೆಲೆಯ' ಕುರಿತು ವೈಜ್ಞಾನಿಕ ಸ್ವರೂಪದ ಅಧ್ಯಯನದ ಆಯಾಮದ ಚಿಂತನಾ ಸ್ವರೂಪವನ್ನೂ ರೂಪಿಸಲಾಗಿದೆ. 'ದಿವ್ಯ ಜೀವನ'ದಲ್ಲಿ ಶ್ರೀ ಅರವಿಂದರು ರೂಪಿಸಿರುವ 'ಅಮರತ್ವದ' ಕುರಿತ ಮಾಹಿತಿಗಳನ್ನು 'ದಿವ್ಯ ಜೀವನ' ಲೇಖನ ಸರಣಿಯಲ್ಲಿ ನಿರೂಪಿಸಲಾಗಿದೆ. (ಪಿಪಿಕೆ)



**ಸಾವಿನ ಭಯ**

ನಮ್ಮ ಜೀವನದಿ ತನ್ನಿಚ್ಛೆಯಂತೆ ಅಲೆತದಲಿ ಮೃತ್ಯು–ನೃತ್ಯ
ನಮ್ಮೊಳಗಿನುಸಿರ ಉಸಿರಿನಲಿ ಮಧುರ ಲಯದ–ಮರಣ –ಕೃತ್ಯ
ಸದಾ ತತ್ಪರತೆಯಲಿ ಇದುವು ಹೀಗೆ ಪ್ರತಿಸ್ಪಂದಗೊಳುತ ನಿನದ
ಏಕಿಂತು ಹೀಗೆ ಈ ಸಾವಿಗಂಜಿ ದೂರವಿರುವೆ ಅವಳಿಂದ
ಇದೋ ನೋಡಿಲ್ಲಿ ಅವಳ ಆ ಮಂದಹಾಸದಲಿ ಇರುವವದನ
ಪ್ರಫುಲ್ಲತೆಯಲ್ಲಿ ಕೃಪೆಯೀಗ ನಿತ್ಯ ಉಲ್ಲಸಿತ ಬೆಳಗು ಹಾದಿ
ಅರುಣ ವರ್ಣದಲಿ ವರ್ಣವರ್ಣಗಳ ಆ ಶೋಭೆ ಶೋಭಿತದಿ!
ದಯೆಯಲ್ಲಿ ಮತ್ತೆ ಪ್ರೇಮದಲಿ ಪ್ರಥಮ ಆಯ್ಕೆಯಲಿ ಆಯ್ದುಕೊಳುವ
ಸಂಕಲಿತ ಪುಷ್ಪಸಂಕುಲವು ನಿತ್ಯ ಪುಲಕಿತದ ಮೋದ ಭಾವ
ಮಧುರ ವನದಲ್ಲಿ ಮಧು–ವಸಂತ–ಸಂತಸದ ಸಿಂಫನಿಗಳಲ್ಲಿ
ನಿನ್ನ ಅಂಜಿಕೆಯು ಇಂಥ ವಿಷಯಕ್ಕೆ? ನವ ದುರ್ಗೆ ತೇಜದಲ್ಲಿ

ಲೋಕ–ಲೋಕಗಳ ದಿವ್ಯ ಬೆಳಕನ್ನು ನಮ್ಮಾತ್ಮಗಳಿಗೆ ತೋರಿ
ತಿರುಚಿ ಹೋಗಿರುವ ಕಾಂಡವಿದು ಖಚಿತದಲಿ ಸ್ಪರ್ಶಗೊಳಲು ಎಂದು
ಕುಸುಮಕೋಮಲದ ಕರಗಳಲ್ಲೀಗ ವೈಭವವು ಕಳೆಯೆ ನೋವು?
ಪುಷ್ಪಗಳು ಇರದೆ ಮುರುಟಿ ಮಂಕಾದ ಕಾಂಡದಿಂದೇನು ಏನು
ವಿಕರಾಳವಿದ್ದರೂ ಸಹಿತ ಇನಿತು ರಮಣೀಯವಿಹುದು ತಾನು
ಇಲ್ಲದಿರೆ ಇದುವು ಪ್ರಮುಖದ್ವಾರದಲಿ ಕರ್ಕಶದ ಭೀತ ಸ್ವರವೊ
ನಿಮಗೆ ಈಗಿದೋ ಕಂಪಿತಕೆ ಆತ್ಮ, ದುರ್ಬಲದಿ ಸ್ಥೈರ್ಯ ಕುಸಿದು?
ಸಾವೆಂಬುದಿದುವು ಪರಿವರ್ತನೀಯ ನಿಲುವಂಗಿ ತೆರದಿ ನಮಗೆ
ಶಾಶ್ವತದ ದ್ವಾರದಲಿ ಹೀಗೆ ವಸ್ತ್ರ ಸಂಲಗ್ನಗೊಳುವ ಹಾಗೆ

**– ಅನುವಾದ: ಪುಟ್ಟು ಕುಲಕರ್ಣಿ**

[ಇದು ಶ್ರೀ ಅರವಿಂದರು 1900–1909ರ ಅವಧಿಯಲ್ಲಿ ಬಡೋದಾ ಮತ್ತು ಬಂಗಾಲದಲ್ಲಿ ಇದ್ದಾಗ ಬರೆದ ಕವನಗಳ ಸಂಗ್ರಹದಲ್ಲಿದೆ.]

## ಮೃತ್ಯುವಿನ ಭಯ ಮತ್ತು ಅದನ್ನು ಜಯಿಸುವ ನಾಲ್ಕು ವಿಧಾನಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

### ಭಯವು ಅತಿದೊಡ್ಡ ಅಡಚಣೆಯಾಗಿದೆ

... ಬಹುಶಃ ಮನುಷ್ಯನ ಪ್ರಗತಿ ಪಥದಲ್ಲಿ ಇರುವಂಥ ಅತಿ ದೊಡ್ಡ ವಿಘ್ನವೆಂದರೆ ಭಯ. ಅದು ಬಹು ವಿಧವಾಗಿರುವಂಥ, ಬಹು ರೂಪಿಯಾದಂಥ, ವಿರೋಧಾತ್ಮಕವಾದಂಥ, ಸ್ವ–ವಿರುದ್ಧವಾದಂಥ (ವಿರೋಧಾಭಾಸದ), ಅತಾರ್ಕಿಕ–ವಾದಂಥ, ಅಕಾರಣವಾದಂಥ ಮತ್ತು ಸಾಮಾನ್ಯವಾಗಿ ಅನಗತ್ಯವಾದಂಥ ಭಯವಾಗಿದೆ. ಎಲ್ಲ ಭಯಗಳಲ್ಲಿ ಅತ್ಯಂತ ಸೂಕ್ಷ್ಮವಾದದ್ದು ಮತ್ತು ಅತ್ಯಂತ ಹಟಮಾರಿಯಾದದ್ದು ಸಾವಿನ ಭಯವಾಗಿದೆ. ಅದು ಸುಪ್ತದಲ್ಲಿ ಆಳವಾಗಿ ಬೇರೂರಿದೆ ಮತ್ತು ಸುಲಭವಾಗಿ ಅದನ್ನು ಕಿತ್ತು ಎಸೆಯಲಾಗದು. ಅದು ನಿಸ್ಸಂಶಯವಾಗಿಯೂ, ಆಂತರಿಕವಾಗಿ ಹೆಣೆದುಕೊಂಡ ಅನೇಕ ಅಂಶಗಳಿಂದ ಮಾಡಲ್ಪಟ್ಟಿದೆ. ಅವುಗಳು ಯಾವವೆಂದರೆ: ಪ್ರಜ್ಞೆಯ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಸಂಪ್ರದಾಯವಾದದ ಚೇತನ ಮತ್ತು ಸ್ವ–ರಕ್ಷಣೆಗಾಗಿ ಕಾಳಜಿ, ಅಪರಿಚಿತ ಘಟನೆಯ ಮುಂಚಿನ ಹಿಂಜರಿಕೆ, ನಿರೀಕ್ಷಿಸಲಾರದ್ದರಿಂದ

ಮತ್ತು ಊಹಿಸಲಾರದ್ದರಿಂದ ಉಂಟಾಗುವ ಇರುಸುಮುರುಸು, ಹಾಗೂ ಬಹುಶಃ ಅವೆಲ್ಲವುಗಳ ಹಿಂದೆ, ಕೋಶಗಳ ಆಳದಲ್ಲಿ ಅವಿತಿರುವ, ಮೃತ್ಯು ಅನಿವಾರ್ಯವಲ್ಲವೆಂಬ ಮತ್ತು ಕೆಲ ನಿಯಮಗಳನ್ನು ಇಡೇರಿಸಿದರೆ ಸಾವನ್ನು ಗೆಲ್ಲಬಹುದೆಂಬ ಸ್ವಭಾವ; ಆದಾಗ್ಯೂ, ವಾಸ್ತವವಾಗಿ, ಆ ಜಯಕ್ಕೆ ಇರುವಂಥ ದೊಡ್ಡ ಅಡಚಣೆ ಯಾವುದೆಂದರೆ; ಭಯ. ನಾವು ಯಾವುದರಿಂದ ಭಯಪಡುತ್ತೇವೊ ಅದನ್ನು ಜಯಿಸುವುದಿಲ್ಲ ಮತ್ತು ಸಾವಿಗೆ ಹೆದರುವವರು, ಅದಾಗಲೇ ಅದರಿಂದ (ಸಾವಿನಿಂದ) ಜಯಿಸಲ್ಪಟ್ಟಿರುತ್ತಾರೆ.

ಈ ಭಯವನ್ನು ನಾವುಗಳು ಹೇಗೆ ಸೋಲಿಸಬಹುದು? ಅದಕ್ಕಾಗಿ ಹಲವಾರು ವಿಧಾನಗಳನ್ನು ಬಳಸಬಹುದು. ಆದರೆ, ಅದಕ್ಕೂ ಮುಂಚೆ, ಈ ಪ್ರಯತ್ನದಲ್ಲಿ ನಮಗೆ ಸಹಾಯವಾಗಬಹುದಾದ ಕೆಲವು ಮೂಲಭೂತ ವಿಚಾರಗಳನ್ನು ನಾವು ತಿಳಿದುಕೊಳ್ಳಬೇಕು. ಮೊದಲನೆಯದು ಹಾಗೂ ಅತ್ಯಂತ ಮಹತ್ವದ ಅಂಶವೆಂದರೆ, ಈ ಜೀವ(ನ) ಒಂದು, ಮತ್ತು ಅವಿನಾಶಿ. ಬೇಗ ಕಳೇದುಹೋಗುವ/ಸ್ಥಿರವಲ್ಲದ ಅದರ ರೂಪಗಳು ಅಸಂಖ್ಯವಾಗಿವೆ ಎಂಬ ಜ್ಞಾನವನ್ನು ನಾವು ಮನಸ್ಸಿನಲ್ಲಿ ಭದ್ರವಾಗಿ ಮತ್ತು ಶಾಶ್ವತವಾಗಿ ಸ್ಥಾಪಿಸಿಕೊಳ್ಳಬೇಕು ಮತ್ತು ನಮ್ಮ ಪ್ರಜ್ಞೆಯನ್ನು, ಸಾಧ್ಯವಾದಷ್ಟು, ಆ ಅಸಂಖ್ಯ ರೂಪಗಳಿಂದ ಸ್ವತಂತ್ರವಾದ ಆದರೆ ಎಲ್ಲ ರೂಪಗಳಲ್ಲಿ ಅಭಿವ್ಯಕ್ತಗೊಳ್ಳುವ ಆ ಅನಂತ ಜೀವದೊಡನೆ ತಾದಾತ್ಮ್ಯಗೊಳಿಸಿ–ಕೊಳ್ಳಬೇಕು. ಇರುವಂಥ ಸಮಸ್ಯೆಯನ್ನು ಎದುರಿಸಲು ಅತ್ಯವಶ್ಯಕವಾಗಿ ಬೇಕಾದಂಥ ಮನೋವೈಜ್ಞಾನಿಕ ಆಧಾರವನ್ನು ಈ ಅಂಶವು ನಮಗೆ ಒದಗಿಸಿ ಕೊಡುತ್ತದೆ. ಎಲ್ಲ ಭಯವನ್ನು ಮೆಟ್ಟಿ ನಿಲ್ಲಲು ಬೇಕಾದ ಸಾಕಷ್ಟು ಅರಿವನ್ನು ಅಂತಃಪುರುಷನು ಹೊಂದಿದ್ದರೂ, ಆ ಭಯವು ಅಸ್ಪಷ್ಟವಾಗಿ, ಸಹಜವಾಗಿ, ಕಾರಣಾತೀತವಾಗಿ, ಅಜಾಗೃತವಾಗಿ ದೇಹದ ಕೋಶಗಳಲ್ಲಿ ಇನ್ನೂ ಅವಿತುಕೊಂಡಿರುತ್ತದೆ. ಈ ಅಸ್ಪಷ್ಟವಾದ ಆಳಗಳಲ್ಲಿ ನಾವು ಅದನ್ನು ಕಂಡುಹಿಡಿಯಬೇಕು, ಅದನ್ನು ಹಿಡಿದುಕೊಳ್ಳಬೇಕು ಮತ್ತು ಅದರ ಮೇಲೆ ಜ್ಞಾನದ ಹಾಗೂ ಮನೋವೃತ್ತಿಯ ಬೆಳಕನ್ನು ಚೆಲ್ಲಬೇಕು.

## ಜೀವ(ನ) ಕಾಲವಾಗುವುದಿಲ್ಲ, ರೂಪಗಳು ಮಾತ್ರ ಮಾಯವಾಗುತ್ತವೆ

ಜೀವ(ನ) ಕಾಲವಾಗುವುದಿಲ್ಲ, ಆದರೆ ರೂಪವು ಲೀನವಾಗುತ್ತದೆ ಮತ್ತು ಈ ಲೀನವಾಗುವಿಕೆ ಭೌತಿಕ ಪ್ರಜ್ಞೆಯು ಭಯಪಡುವಂತೆ ಮಾಡುತ್ತದೆ. ರೂಪವು

ನಿರಂತರವಾಗಿ ಬದಲಾಗುತ್ತಿದ್ದರೂ, ಈ ಬದಲಾಗುವಿಕೆಯು ಮುಂದು– ವರೆಯುವುದನ್ನು ಯಾವುದೂ ತಡೆಯಲಾರದು. ಈ ಪ್ರಗತಿಶೀಲ ಬದಲಾವಣೆಯು ಮೃತ್ಯುವನ್ನು ಇನ್ನು ಮುಂದೆ ಅನಿವಾರ್ಯವಾಗಿಸಬಹುದು, ಆದರೆ ಅದನ್ನು ಸಾಧಿಸುವುದು ತುಂಬಾ ಕಷ್ಟದ ಕೆಲಸ. ಏಕೆಂದರೆ ಅದು ಕೆಲವೇ ಜನರು ಪೂರೈಸಲು ಸಾಧ್ಯವಾಗುವ ಷರತ್ತುಗಳನ್ನು ಕೋರುತ್ತದೆ. ಹೀಗಾಗಿ ಸಾವಿನ ಭಯವನ್ನು ಹೋಗಲಾಡಿಸಲು ಅನುಸರಿಸಬೇಕಾದ ವಿಧಾನವು ಪ್ರಕರಣದ ಸ್ವರೂಪ ಮತ್ತು ಪ್ರಜ್ಞೆಯ ಸ್ಥಿತಿಗೆ ಅನುಗುಣವಾಗಿ ಭಿನ್ನವಾಗಿರುತ್ತದೆ. ಈ ವಿಧಾನಗಳನ್ನು ನಾಲ್ಕು ಪ್ರಮುಖ ವಿಧಗಳಾಗಿ ವರ್ಗೀಕರಿಸಬಹುದು, ಆದಾಗ್ಯೂ ಪ್ರತಿಯೊಂದೂ ಹೆಚ್ಚಿನ ಸಂಖ್ಯೆಯ ಪ್ರಭೇದಗಳನ್ನು ಒಳಗೊಂಡಿದೆ; ವಾಸ್ತವವಾಗಿ, ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ವ್ಯವಸ್ಥೆಯನ್ನು/ವಿಧಾನವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.

**ಭಯವನ್ನು ದುರ್ಬಲಗೊಳಿಸು**

ಮೊದಲ ವಿಧಾನವು ವಿವೇಚನೆಗೆ/ವಿವೇಕಕ್ಕೆ (reason ಎಂಬ ಪದದ ಅರ್ಥಗಳು ಹಲವು: ಲಕ್ಷಣ, ಅಂಶ, ತತ್ವಾಧಾರ, ಆಲೋಚನೆ, ವಿಚಾರ, ತರ್ಕ, ಪ್ರೇರಣೆ, ವಿವೇಕ, ವಿವೇಚನೆ) ಮನವಿ ಅಥವಾ ಪ್ರಸ್ತಾಪ ಮಾಡುತ್ತದೆ. ಪ್ರಪಂಚದ ಇಂದಿನ ಸ್ಥಿತಿಯಲ್ಲಿ ಸಾವು ಅನಿವಾರ್ಯ ಎಂದು ನಾವು ಹೇಳಬಹುದು; ಜನ್ಮ ಪಡೆದ ದೇಹವು ಒಂದಾನೊಂದು ದಿನ ಸಾಯುತ್ತದೆ, ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಸಾವು ಸಂಭವಿಸಬೇಕಾದಾಗ ಸಂಭವಿಸಿಯೇ ತೀರುತ್ತದೆ: ಅದು ಸಂಭವಿಸುವುದನ್ನು ತ್ವರಿತಗೊಳಸಲು ಅಥವಾ ವಿಳಂಬಗೊಳಿಸಲು ನಮಗೆ ಸಾಧ್ಯವಿಲ್ಲ. ಸಾವಿಗಾಗಿ ಹಾತೊರೆಯುವವರು ಅದನ್ನು ಪಡೆದುಕೊಳ್ಳಲು ದೀರ್ಘಕಾಲ ಕಾಯಬೇಕಾಗುತ್ತದೆ ಮತ್ತು ಅದರಿಂದ ಭಯಪಡುವವರು ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಾಗಲೂ ಸಾವು ಅವರಿಗೆ ಪೆಟ್ಟು ಕೊಡುತ್ತದೆ. ಆದ್ದರಿಂದ ಮರಣದ ಸಮಯವು ನಿಷ್ಠುರವಾಗಿ ಸ್ಥಿರವಾಗಿದೆ ಎಂದು ತೋರುತ್ತದೆ (ಮಾನವ ಜನಾಂಗವು ಸಾಮಾನ್ಯವಾಗಿ ಆಜ್ಞಾಪಿಸದೆ ಇರುವ ಸಾಮರ್ಥ್ಯವನ್ನು ಹೊಂದಿರುವ ಕೆಲವೇ ವ್ಯಕ್ತಿಗಳನ್ನು ಹೊರತುಪಡಿಸಿ). ನಾವು ತಪ್ಪಿಸಲು ಸಾಧ್ಯವಾಗದ ಯಾವುದರಿಂದಲಾದರೂ ಭಯಪಡುವುದು ಅಸಂಬದ್ಧ ಎಂದು ವಿವೇಕವು ನಮಗೆ ಕಲಿಸುತ್ತದೆ. ನಾವು ಮಾಡಬೇಕಾದ ಉತ್ತಮ ಕೆಲಸವೇನೆಂದರೆ, ಸಾವಿನ ಕಲ್ಪನೆಯನ್ನು ಒಪ್ಪಿಕೊಳ್ಳುವುದು ಮತ್ತು ಸದ್ದಿಲ್ಲದೆ

ದಿನದಿಂದ ದಿನಕ್ಕೆ, ಗಂಟೆಯಿಂದ ಗಂಟೆಗೆ, ಏನಾಗಲಿದೆ ಎಂಬುದರ ಬಗ್ಗೆ ಚಿಂತಿಸದೆ ಇರುವುದು. ಈ ಪ್ರಕ್ರಿಯೆಯು ತರ್ಕಬದ್ಧ ನಿಯಮಗಳ ಪ್ರಕಾರ ಕಾರ್ಯ ನಿರ್ವಹಿಸುವ ಬುದ್ಧಿಜೀವಿಗಳಿಂದ ಬಳಸಿದಾಗ ಬಹಳ ಪರಿಣಾಮಕಾರಿಯಾಗಿರುತ್ತದೆ; ಆದರೆ ತಮ್ಮ ಭಾವನೆಗಳಲ್ಲಿ ಜೀವಿಸುವ ಮತ್ತು ಅವುಗಳಿಗೆ(ಭಾವನೆಗಳಿಗೆ) ತಮ್ಮನ್ನು ತಾವು ಆಳಿಕೊಳ್ಳಲು ಅವಕಾಶ ನೀಡುವ ಭಾವನಾತ್ಮಕ ಜನರಲ್ಲಿ ಇದು ಕಡಿಮೆ ಯಶಸ್ವಿಯಾಗುತ್ತದೆ.

**ಚೈತ್ಯ ಪುರುಷನಿಗಾಗಿ ಹುಡುಕಿರಿ**

ನಿಸ್ಸಂದೇಹವಾಗಿ, ಈ ಜನರು ಎರಡನೇ ವಿಧಾನದ (ಆಂತರಿಕ ಅನ್ವೇಷಣೆಯ ವಿಧಾನದ) ಆಶ್ರಯವನ್ನು/ನೆರವನ್ನು ಹೊಂದಿರಬೇಕು. ಎಲ್ಲಾ ಭಾವನೆಗಳನ್ನು ಮೀರಿ, ನಮ್ಮ ಇರುವಿಕೆಯ ಮೌನ ಮತ್ತು ಪ್ರಶಾಂತ ಆಳದಲ್ಲಿ, ನಿರಂತರವಾಗಿ ಪ್ರಕಾಶಿಸುವ ಬೆಳಕಿದೆ, ಚೈತ್ಯ ಪ್ರಜ್ಞೆಯ ಬೆಳಕಿದೆ. ಈ ಬೆಳಕನ್ನರಸಲು ಹೋಗಿ, ಅದರ ಮೇಲೆ ಕೇಂದ್ರೀಕರಿಸಿ; ಅದು ನಿಮ್ಮೊಳಗಿದೆ. ಪರಿಶ್ರಮದಿಂದ ನೀವು ಅದನ್ನು ಕಂಡುಕೊಳ್ಳುವುದು ಖಚಿತ ಮತ್ತು ನೀವು ಅದರೊಳಗೆ ಪ್ರವೇಶಿಸಿದಾಕ್ಷಣ, ನೀವು ಅಮರತ್ವದ ಭಾವನೆಯಲ್ಲಿ ಜಾಗೃತಗೊಳ್ಳುತ್ತೀರಿ. ನೀವು ಯಾವಾಗಲೂ ಬದುಕಿದ್ದೀರಿ, ನೀವು ಯಾವಾಗಲೂ ಬದುಕುತ್ತೀರಿ; ನಿಮ್ಮ ದೇಹದಿಂದ ನೀವು ಸಂಪೂರ್ಣವಾಗಿ ಸ್ವತಂತ್ರರಾಗುತ್ತೀರಿ; ನಿಮ್ಮ ಜಾಗೃತಾವಸ್ಥೆಯು ಅದರ ಮೇಲೆ ಅವಲಂಬಿತವಾಗಿರುವುದಿಲ್ಲ; ಮತ್ತು ಈ ದೇಹವು ನೀವು ಪ್ರಕಟಗೊಂಡ ಅಸ್ಥಿರ ರೂಪಗಳಲ್ಲಿ ಒಂದಾಗಿದೆ. ಇನ್ನು ಮುಂದೆ, ಸಾವು ಅಳಿಯುವ ವಿಷಯವಲ್ಲ, ಅದೊಂದು ಪರಿವರ್ತನೆ ಮಾತ್ರ. ಎಲ್ಲಾ ಭಯವು ತಕ್ಷಣವೇ ಕಣ್ಮರೆಯಾಗುತ್ತದೆ ಮತ್ತು ನೀವು ಮುಕ್ತ ಮನುಷ್ಯನ ಶಾಂತ ದೃಢತೆಯೊಂದಿಗೆ ಜೀವನದಲ್ಲಿ ಮುನ್ನಡೆಯುತ್ತೀರಿ.

**ನಂಬಿಕೆಯ ವಿಧಾನ**

ಮೂರನೆಯ ವಿಧಾನವು ದೇವರಲ್ಲಿ (ತಮ್ಮ ದೇವರಲ್ಲಿ) ನಂಬಿಕೆಯಿರುವವರಿಗಾಗಿ, ಮತ್ತು ಆತನಿಗೆ ತಮ್ಮನ್ನು ಅರ್ಪಿಸಿಕೊಂಡವರಿಗಾಗಿ. ಅವರು ಸಂಪೂರ್ಣವಾಗಿ ಅವನಿಗೆ(ದೇವರಿಗೆ) ಸೇರಿದವರಾಗಿದ್ದಾರೆ; ಅವರ

ಜೀವನದ ಎಲ್ಲಾ ಘಟನೆಗಳು ದೈವೀ ಚಿತ್ತದ ಅಭಿವ್ಯಕ್ತಿಗಳಾಗಿವೆ ಮತ್ತು ಅವರು ಅವುಗಳನ್ನು ಕೇವಲ ಶಾಂತ ಸಮರ್ಪಣ ಭಾವದಿಂದ ಸ್ವೀಕರಿಸುವುದು ಮಾತ್ರವಲ್ಲದೆ ಕೃತಜ್ಞತೆಯಿಂದಲೂ ಸ್ವೀಕರಿಸುತ್ತಾರೆ, ಏಕೆಂದರೆ ಎಲ್ಲ ಘಟನಾವಳಿಗಳು ಅವರ ಒಳ್ಳೆಯದಕ್ಕಾಗಿಯೆ ಸಂಭವಿಸುತ್ತಲಿವೆ ಎಂದು ಅವರಿಗೆ ಮನದಟ್ಟಾಗಿರುತ್ತದೆ. ಅವರು ತಮ್ಮ ದೇವರಲ್ಲಿ ಮತ್ತು ಅವನೊಂದಿಗಿನ ಅವರ ವೈಯಕ್ತಿಕ ಸಂಬಂಧದಲ್ಲಿ ಅಲೌಕಿಕವಾದ ನಂಬಿಕೆಯನ್ನು ಹೊಂದಿದ್ದಾರೆ. ಅವರು ತಮ್ಮ ಇಚ್ಛೆಯನ್ನು ಸಂಪೂರ್ಣವಾಗಿ ಆತನ(ದೇವರ) ಇಚ್ಛೆಗೆ ಸಮರ್ಪಿಸಿಕೊಂಡಿದ್ದಾರೆ ಮತ್ತು ಜೀವನ ಹಾಗೂ ಸಾವಿನ ಅಪಘಾತಗಳಿಂದ ಸಂಪೂರ್ಣವಾಗಿ ಸ್ವತಂತ್ರವಾದ ಅವನ ಬದಲಾಗದ ಪ್ರೀತಿಯನ್ನು ಮತ್ತು ರಕ್ಷಣೆಯನ್ನು ಅನುಭವಿಸುತ್ತಾರೆ. ಸಂಪೂರ್ಣ ಸ್ವಯಂ–ಶರಣಾಗತಿಯಲ್ಲಿ ತಮ್ಮ ದೇವನ ಪ್ರಿಯ ಪಾದಗಳ ಮೇಲೆ ನೆಲೆಸಿರುವ ಅಥವಾ ಅವನ ತೋಳ ತೊಟ್ಟಿಲಿನಲ್ಲಿ ತೂಗಾಡುವ ಮತ್ತು ಪರಿಪೂರ್ಣ ರಕ್ಷಣೆಯನ್ನು ಆನಂದಿಸುವ ನಿರಂತರ ಅನುಭವವನ್ನು ಅವರು ಹೊಂದಿರುತ್ತಾರೆ. ಭಯ, ಆತಂಕ ಅಥವಾ ಹಿಂಸೆ ಇವುಗಳಗೆ ಇನ್ನು ಮುಂದೆ ಅವರ ಪ್ರಜ್ಞೆಯಲ್ಲಿ ಯಾವುದೇ ಸ್ಥಳವಿಲ್ಲ; ಅದೆಲ್ಲವನ್ನೂ ಪ್ರಶಾಂತತೆಯಿಂದ ಮತ್ತು ಆನಂದದಿಂದ ಬದಲಾಯಿಸಲ್ಪಟ್ಟಿದೆ.

ಆದರೆ ನೆನಪಿರಲಿ, ಪ್ರತಿಯೊಬ್ಬರೂ ಒಬ್ಬ ಅಲೌಕಿಕ ಪುರುಷನಾಗುವ ಒಳ್ಳೆಯ ಅದೃಷ್ಟವನ್ನು ಹೊಂದಿರುವುದಿಲ್ಲ.

**ಯೋಧನ ವಿಧಾನ**

ಯೋಧರಾಗಿ ಜನಿಸಿದವರು ಬಹಳಷ್ಟಿದ್ದಾರೆ. ಅವರು, ಜೀವನವನ್ನು ಅದು ಇದ್ದ ಹಾಗೆ ಸ್ವೀಕರಿಸುವುದಿಲ್ಲ. ಅವರು, ಒಂದು ಸಮಗ್ರವಾದ ಹಾಗೂ ಪ್ರಾಪಂಚಿಕ ಅಮರತ್ವದ ಹಕ್ಕಿಗಾಗಿ ಸ್ಪಂದಿಸುತ್ತಿರುವ ಭಾವವನ್ನು ತಮ್ಮೊಳಗಡೆ ಹೊಂದಿರುತ್ತಾರೆ. ಸಾವು ಒಂದು ಕೆಟ್ಟ ಅಭ್ಯಾಸವಲ್ಲದೆ ಬೇರೇನೂ ಅಲ್ಲವೆಂಬ ಒಂದು ರೀತಿಯ ಅರ್ಥಗರ್ಭಿತ ಜ್ಞಾನವನ್ನು ಅವರು ಹೊಂದಿದ್ದಾರೆ; ಅದನ್ನು ವಶಪಡಿಸಿಕೊಳ್ಳುವ(ಜಯಿಸುವ) ಸಂಕಲ್ಪದೊಂದಿಗೆ ಅವರು ಜನಿಸಿದ್ದಾರೆಂದು ತೋರುತ್ತದೆ. ಆದರೆ ಈ ವಿಜಯವು ಉಗ್ರ ಮತ್ತು ಸೂಕ್ಷ್ಮ ಆಕ್ರಮಣಕಾರಿ ಸೈನ್ಯದ ವಿರುದ್ಧ ನಿರಂತರವಾಗಿ, ಪ್ರತಿ ನಿಮಿಷವೂ ಹೋರಾಡಬೇಕಾದ ಯುದ್ಧವನ್ನು

ಅಗತ್ಯವಾಗಿಸುತ್ತದೆ. ಅದಮ್ಯ ಚೈತನ್ಯವನ್ನು ಹೊಂದಿರುವವರು ಮಾತ್ರ ಅದನ್ನು ಪ್ರಯತ್ನಿಸಬೇಕು. ಯುದ್ಧವು ಅನೇಕ ಮುಂಚೂಣಿಗಳನ್ನು ಹೊಂದಿದೆ; ಈ ಯುದ್ಧವನ್ನು ಒಂದಕ್ಕೊಂದು ಬೆರೆಯುವ ಮತ್ತು ಪೂರಕವಾಗಿರುವ ಹಲವಾರು ಸ್ಥರಗಳಲ್ಲಿ ಮಾಡಬೇಕಾಗುತ್ತದೆ.

## ಮನಸ್ಸಿನಲ್ಲಿ ಯುದ್ಧ

ಹೋರಾಡಬೇಕಾದಂಥ ಮೊದಲ ಯುದ್ಧವು ಈಗಾಗಲೇ ಭಯಾನಕವಾಗಿದೆ: ಇದು ಬೃಹತ್ತಾದ, ಅಗಾಧವಾದ, ಬಲವಾದ ಸಾಮೂಹಿಕ ಸೂಚನೆಯ, ಸಹಸ್ರಾರು ವರುಷಗಳ ಅನುಭವದ ಮೇಲೆ ಆಧಾರಿತ ಸಲಹೆಯ, ಈಗಲೂ ಯಾವುದೇ ಆಕ್ಷೇಪಣೆ ಹೊಂದಿಲ್ಲವೆಂದು ತೋರುವ ಪ್ರಕತಿಯ ನಿಯಮದ ಮೇಲೆ ಆಧಾರಿತ ಸಲಹೆಯ ವಿರುದ್ಧದ ಮಾನಸಿಕ ಯುದ್ಧವಾಗಿದೆ. ಇದು ತನ್ನನ್ನು ತಾನು ಈ ಮೊಂಡುತನದ ಪ್ರತಿಪಾದನೆಯಲ್ಲಿ ವ್ಯಾಖ್ಯಾನಿಸುತ್ತದೆ: ಇದು ಯಾವಾಗಲೂ ಆ ತೆರನಾಗಿದೆ ಭಿನ್ನವಾಗಿರಲು ಸಾಧ್ಯವಿಲ್ಲ; ಸಾವು ಅನಿವಾರ್ಯ ಮತ್ತು ಅದು ಬೇರೆ ಏನಾದರೂ ಆಗಿರಬಹುದು ಎಂದು ಭಾವಿಸುವುದು ಹುಚ್ಚುತನ. ಹೊಂದಿಕೆಯು (ನಮ್ಮ ಮತ್ತು ಸಾವಿನ ನಡುವಿನ) ಸರ್ವಸಮ್ಮತವಾಗಿದೆ ಮತ್ತು ಇಲ್ಲಿಯವರೆಗೆ ಅತ್ಯಂತ ಮುಂದುವರೆದ ವಿಜ್ಞಾನಿಗಳೂ ಸಹ ಭಿನ್ನಾಭಿಪ್ರಾಯವನ್ನು ಧ್ವನಿಸುವ ಸಾಹಸವನ್ನು ಮಾಡಿಲ್ಲ, ಇದೊಂದು ಭವಿಷ್ಯದ ಭರವಸೆ. ಧರ್ಮಗಳಿಗೆ ಸಂಬಂಧಿಸಿದಂತೆ, ಅವುಗಳಲ್ಲಿ ಹೆಚ್ಚಿನವು ತಮ್ಮ ಕ್ರಿಯೆಯ ಶಕ್ತಿಯನ್ನು ಸಾವಿನ ಸತ್ಯದ ಅಂಶದ ಮೇಲೆ ಆಧರಿಸಿದವುಗಳಾಗಿವೆ ಮತ್ತು ದೇವರು ಮನುಷ್ಯನನ್ನು ಮರ್ತ್ಯನಾಗಿ ಸೃಷ್ಟಿಸಿದಾಗಿನಿಂದ ಅವನು ಸಾಯಬೇಕೆಂದು ಬಯಸುತ್ತಾನೆಂದು ಅವುಗಳು(ಧರ್ಮಗಳು) ಪ್ರತಿಪಾದಿಸುತ್ತವೆ. ಅವುಗಳಲ್ಲಿ(ಧರ್ಮಗಳಲ್ಲಿ) ಹಲವು, ಸಾವನ್ನು ಒಂದು ಬಿಡುಗಡೆಯಾಗಿ, ಮೋಕ್ಷವಾಗಿ, ಕೆಲವೊಮ್ಮೆ ಪುರಸ್ಕಾರವನ್ನಾಗಿಯೂ ಸಹ ಮಾಡುತ್ತವೆ. ಅವುಗಳ ಆದೇಶವೇನೆಂದರೆ: ಅತ್ಯಂತ ಉನ್ನತವಾದುದರ ಸಂಕಲ್ಪಕ್ಕೆ ತಲೆಬಾಗುವುದು, ಪ್ರತಿಭಟನೆ ಇಲ್ಲದೆ ಸಾವಿನ ಕಲ್ಪನೆಯನ್ನು ಸ್ವೀಕರಿಸುವುದು, ಆಗ ನೀವು ಶಾಂತಿಯನ್ನು ಮತ್ತು ಆನಂದವನ್ನು ಹೊಂದುವಿರಿ. ಹೀಗಿದ್ದರೂ, ನಮ್ಮ ಮನಸ್ಸು ತನ್ನ ನಿರ್ಧಾರದಲ್ಲಿ ಅಚಲವಾಗಿರಬೇಕು ಮತ್ತು ದೃಢ ಸಂಕಲ್ಪವನ್ನು ಉಳಿಸಿಕೊಳ್ಳಬೇಕು. ಆದರೆ,

ಸಾವನ್ನು ಜಯಿಸಬೇಕೆಂದು ನಿಶ್ಚಯಿಸಿದವರಿಗೆ ಈ ಎಲ್ಲ ಸಲಹೆಗಳು ಯಾವುದೇ ಪರಿಣಾಮ ಮಾಡುವುದಿಲ್ಲ ಮತ್ತು ಒಂದು ಆಳವಾದ ದಿವ್ಯ ಜ್ಞಾನದ ಮೇಲೆ ಆದರಿಸಿದ ಅವನ ದೃಢ ನಂಬಿಕೆಯನ್ನು ಬಾಧಿಸುವುದಿಲ್ಲ.

**ಭಾವನೆಗಳ ಸಂಘರ್ಷ**

ಎರಡನೆಯ ಸಂಘರ್ಷವೆಂದರೆ ಭಾವನೆಗಳ ಸಂಘರ್ಷ, ನಾವು ಸೃಷ್ಟಿಸಿದ, ನಾವು ಪ್ರೀತಿಸುವ ಎಲ್ಲ ಬಂಧನದ ವಿರುದ್ಧದ ಸಂಘರ್ಷ. ಸತತ ಶ್ರಮದಿಂದ, ಕೆಲವೊಮ್ಮೆ ವ್ಯಾಪಕ ಪ್ರಯತ್ನಗಳಿಂದ ನೀವು ಒಂದು ಮನೆಯನ್ನು, ಜೀವನ ಮಾರ್ಗವನ್ನು, ಸಾಮಾಜಿಕ, ಸಾಹಿತ್ಯಿಕ, ಕಲಾತ್ಮಕ, ವೈಜ್ಞಾನಿಕ ಅಥವಾ ರಾಜಕೀಯ ಕಾರ್ಯವನ್ನು ಕಟ್ಟಿಕೊಂಡಿರಿತ್ತೀರಿ, ನೀವು ನಿಮ್ಮ ನಡುವೆ ಒಂದು ವಾತಾವರಣವನ್ನು ರೂಪಿಸಿಕೊಂಡಿರಿತ್ತೀರಿ, ಅದು ನಿಮ್ಮ ಮೇಲೆ ಅವಲಂಬಿಸಿದಷ್ಟು ನೀವೂ ಅದರ ಮೇಲೆ ಅವಲಂಬಿಸಿರುವಿರಿ. ನೀವು ಜನ ಸಮೂಹದಿಂದ, ಬಂಧುಗಳಿಂದ, ಸ್ನೇಹಿತರಿಂದ, ಆಪ್ತರಿಂದ ಸುತ್ತುವರೆದಿರುವಿರಿ. ನೀವು ನಿಮ್ಮ ಜೀವನವನ್ನು ಗಮನಿಸಿದಾಗ, ಅವರು ನಿಮ್ಮ ಆಲೋಚನೆಗಳಲ್ಲಿ/ ವಿಚಾರಗಳಲ್ಲಿ ನಿಮ್ಮಷ್ಟೇ ವಿಶಾಲ ಜಾಗವನ್ನು ಆಕ್ರಮಿಸಿಕೊಂಡಿರುತ್ತಾರೆ. ಅವರ ವ್ಯಾಪ್ತಿ ನಮ್ಮ ಜೀವನದಲ್ಲಿ ಎಷ್ಟಿದೆ ಎಂದರೆ, ನಾವು ಒಂದು ವೇಳೆ ಅವರನ್ನು ನಮ್ಮ ಜೀವನದಿಂದ ಒಮ್ಮೆಲೆ ತೆಗೆದು ಹಾಕಿದರೆ, ನಾವು ಕಳೆದು ಹೋದಂತೆ, ನಮ್ಮ ಇರುವುಕೆಯ ಒಂದು ಮಹತ್ವದ ಅಂಗ ಮಾಯವಾದಂತೆ ಭಾಸವಾಗುತ್ತದೆ. ಇದು, ನಿಮ್ಮ ಇರುವಿಕೆಯ ಗುರಿ ಮತ್ತು ಉದ್ದೇಶವನ್ನು ಇವೆಲ್ಲ ಸಂಗತಿಗಳು ಬಹುಮಟ್ಟಿಗೆ ಸರಿದೂಗಿಸುವುದರಿಂದ ಅವುಗಳೆಲ್ಲವನ್ನೂ ಬಿಟ್ಟು ಬಿಡುವ ವಿಷಯವಲ್ಲ. ಆದರೆ ನೀವು ನಿಮ್ಮೆಲ್ಲ ಬಂಧನಗಳನ್ನು ಈ ಸಂಗತಿಗಳಗಾಗಿ ತ್ಯಜಿಸಬೇಕು. ಹಾಗೆ ಮಾಡುವುದರಿಂದ ಅವುಗಳು ಇಲ್ಲದೆಯೂ ಜೀವಿಸುವ ಸಾಮರ್ಥ್ಯವನ್ನು ಹೊಂದಬಹುದು, ಅಥವಾ ಅವುಗಳು ನಿಮ್ಮನ್ನು ತೊರೆದರೆ ನಿಮ್ಮಷ್ಟಕ್ಕೆ ನೀವು ಹೊಸ ವಾತಾವರಣದಲ್ಲಿ ಒಂದು ಹೊಸ ಜೀವನವನ್ನು ರೂಪಿಸಿಕೊಳ್ಳಲು ಮತ್ತು ಇದನ್ನು ಅನಿರ್ದಿಷ್ಟವಾಗಿ ಮಾಡಲು ಸಿದ್ಧರಾಗಬಹುದು. ಇದು ಅಮೃತತ್ವದ ಪರಿಣಾಮವಾಗಿದೆ. ಈ ಸ್ಥಿತಿಯನ್ನು ಈ ರೀತಿ ವ್ಯಾಖ್ಯಾನಿಸಬಹುದು: ಎಲ್ಲವನ್ನೂ ಅತ್ಯಂತ ಎಚ್ಚರಿಕೆಯಿಂದ ಮತ್ತು

ಗಮನದಿಂದ ಸಂಘಟಿಸಲು ಮತ್ತು ನಿರ್ವಹಿಸಲು ಸಾಧ್ಯವಾಗಬೇಕು ಮತ್ತು ಆದಾಗ್ಯೂ ಎಲ್ಲಾ ಆಸೆ ಮತ್ತು ಬಾಂಧವ್ಯದಿಂದ ಮುಕ್ತವಾಗಿರಬೇಕು. ನೀವು ಸಾವಿನಿಂದ ತಪ್ಪಿಸಿಕೊಳ್ಳಲು ಬಯಸಿದರೆ, ನೀವು ನಾಶವಾಗುವ ಯಾವುದೇ ಸಂಗತಿಯಿಂದ ಬದ್ಧರಾಗಿರಬಾರದು.

ಭಾವನೆಗಳ ನಂತರ ಸಂವೇದನೆಗಳು ಬರುತ್ತವೆ. ಇಲ್ಲಿ ಹೋರಾಟವು ಕರುಣಾಜನಕವಾಗಿರುತ್ತದೆ ಮತ್ತು ವಿರೋಧಗಳು ಅಸಾಧಾರಣವಾಗಿರುತ್ತವೆ. ಅವುಗಳು ಅತಿ ಚಿಕ್ಕದಾದ ದೌರ್ಬಲ್ಯವನ್ನು ಗ್ರಹಿಸಬಹುದು ಮತ್ತು ನೀವು ರಕ್ಷಣೆ ಯಲ್ಲಿ ಇಲ್ಲದಿರುವಲ್ಲಿ ಅವುಗಳು ಪೆಟ್ಟು ಕೊಡಬಹುದು. ನೀವು ಗೆಲ್ಲುವ ವಿಜಯಗಳು ಕೇವಲ ಕ್ಷಣಿಕವಾಗಿರುತ್ತವೆ ಮತ್ತು ಅದೇ ಯುದ್ಧಗಳು ಅನಿರ್ದಿಷ್ಟವಾಗಿ ಪುನರಾವರ್ತನೆಯಾಗುತ್ತವೆ. ನೀನು ಸೋಲಿಸಿದನೆಂದು ಭಾವಿಸಿದ ಶತ್ರುವು ನಿನ್ನನ್ನು ಹೊಡೆಯಲು ಮತ್ತೆ ಮತ್ತೆ ಎದ್ದು ಬರುತ್ತಾನೆ. ನೀವು ಪ್ರಬಲವಾಗಿ ಹದಮಾಡಿದ ಸ್ವಭಾವವನ್ನು ಹೊಂದಿರಬೇಕು, ಪ್ರತಿ ಸೋಲು, ಪ್ರತಿ ನಿರಾಕರಣೆ, ಪ್ರತಿ ತಿರಸ್ಕಾರ, ಪ್ರತಿ ಅಲ್ಲಗಳೆತ, ಪ್ರತಿ ನಿರುತ್ಸಾಹಗೊಳಿಸುವಿಕೆ ಮತ್ತು ದೈನಂದಿನ ಅನುಭವ ಮತ್ತು ಐಹಿಕ ಘಟನೆಗಳೊಂದಿಗೆ ಯಾವಾಗಲೂ ವಿರುದ್ಧವಾಗಿ ನಿಮ್ಮನ್ನು ಕಂಡುಕೊಳ್ಳುವ ಅತಿಯಾದ ಆಯಾಸವನ್ನು ತಡೆದುಕೊಳ್ಳಲು ದಣಿವರಿಯದ ಸಹಿಷ್ಣುತೆಯನ್ನು ಹೊಂದಿರಬೇಕು.

## ಭೌತಿಕದಲ್ಲಿ ಸಮರ

ದೇಹದಲ್ಲಿ ಬಿಡುವು ಅಥವಾ ವಿರಾಮವಿಲ್ಲದೆ ಮುಂದುವರೆಯುವ, ಅತ್ಯಂತ ಭಯಾನಕವಾದ ಭೌತಿಕ ಸಮರಕ್ಕೆ ನಾವು ಈಗ ಬರುತ್ತೇವೆ. ಇದು ಹುಟ್ಟಿನಿಂದ ಪ್ರಾರಂಭವಾಗುತ್ತದೆ ಮತ್ತು ಈ ಯುದ್ಧವು, ಇಬ್ಬರು ಹೋರಾಟಗಾರರಲ್ಲಿ ಒಬ್ಬನ ಸೋಲಿನೊಂದಿಗೆ ಕೊನೆಗೊಳ್ಳಬಹುದು. ಆ ಇಬ್ಬರು ಹೋರಾಟಗಾರರು ಯಾರೆಂದರೆ: ರೂಪಾಂತರದ ಶಕ್ತಿ ಮತ್ತು ವಿಘಟನೆಯ ಶಕ್ತಿ. ನಾನು ಹುಟ್ಟಿನಿಂದಲೇ ಎಂದು ಹೇಳುವುದು ಯಾಕೆಂದರೆ, ಇವೆರಡರ ನಡುವಿನ (ರೂಪಾಂತರದ ಶಕ್ತಿ ಮತ್ತು ವಿಘಟನೆಯ ಶಕ್ತಿ) ಸಂಘರ್ಷವು ಬಹಳ ನಂತರದಲ್ಲಿ ಜಾಗೃತ ಮತ್ತು ಬುದ್ಧಿಪೂರ್ವಕವಾಗುವುದಾದರೂ, ವಾಸ್ತವವಾಗಿ ಅವು ಜಗತ್ತಿಗೆ ಬಂದ ಕ್ಷಣದಿಂದಲೇ ಸಂಘರ್ಷದಲ್ಲಿವೆ. ಬೆಳವಣಿಗೆ, ಸಾಮರಸ್ಯದ

ಪ್ರಗತಿ, ದಾಳಿಗೆ ಪ್ರತಿರೋಧ, ಅನಾರೋಗ್ಯದಿಂದ ಚೇತರಿಸಿಕೊಳ್ಳುವುದು, ಸಾಮಾನ್ಯ ಚಟುವಟಿಕೆಗೆ ಮರಳುವುದು, ಪ್ರಗತಿಶೀಲ ಮುನ್ನಡೆ, ಇವೆಲ್ಲವೂ ರೂಪಾಂತರ ಶಕ್ತಿಯ ಕಾರ್ಯದ ಕಾರಣದಿಂದಾದರೆ, ಪ್ರತಿಯೊಂದು ಅನಾರೋಗ್ಯ, ವಿರೂಪತೆ, ಅಪಘಾತಗಳು ವಿಘಟನ ಶಕ್ತಿಯ ಕಾರಣದಿಂದಾಗಿವೆ. ನಂತರ, ಪ್ರಜ್ಞೆಯ ಬೆಳವಣಿಗೆಯೊಂದಿಗೆ, ಹೋರಾಟವು ಉದ್ದೇಶಪೂರ್ವಕವಾದಾಗ, ಅದು ಎರಡು ವಿರುದ್ಧ ಮತ್ತು ಪ್ರತಿಸ್ಪರ್ಧಿ ಆಲೋಚನೆಗಳ ನಡುವಿನ ಉದ್ರಿಕ್ತ ಓಟವಾಗಿ ಬದಲಾಗುತ್ತದೆ. ಈ ಓಟವು, ಯಾವುದು ಮೊದಲು ತನ್ನ ಗುರಿಯನ್ನು ತಲುಪುತ್ತದೆ ಎಂದು ನೋಡುವುದಕ್ಕಾಗಿ; ರೂಪಾಂತರ ಅಥವಾ ಸಾವು(ವಿಘಟನೆ). ಇದರ ಅರ್ಥ, ಪುನರುತ್ಪಾದನಾ ಶಕ್ತಿಯನ್ನು ಕಡಿಮೆಗೊಳಿಸಲು ಮತ್ತು ಈ ಬಲಕ್ಕೆ ಕೋಶಗಳ ಗ್ರಹಣ ಶಕ್ತಿಯನ್ನು ಹೆಚ್ಚಿಸಲು, ವಿನಾಶ ಹಾಗೂ ಅವನತಿಯ ಶಕ್ತಿಗಳ ವಿನಾಶಕಾರಿ ಕ್ರಿಯೆಯ ವಿರುದ್ಧ ಘಟ್ಟದಿಂದ ಘಟ್ಟಕ್ಕೆ ಹಂತ–ಹಂತವಾಗಿ ಹೋರಾಡಲು, ಆರೋಹಣಕ್ಕೆ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಹೊಂದಿರುವ ಎಲ್ಲವನ್ನೂ ಅದರ ಗ್ರಹಿಕೆಯಿಂದ ಹರಿದು ಹಾಕಲು, ಪ್ರಬುದ್ಧಗೊಳಿಸಲು, ಶುದ್ಧೀಕರಿಸಲು ಮತ್ತು ಸ್ಥಿರಗೊಳಿಸಲು ಒಂದು ನಿರಂತರ ಪ್ರಯತ್ನ, ಒಂದು ನಿರಂತರ ಏಕಾಗ್ರತೆ. ಇದು, ಯಾವುದೇ ಸ್ಪಷ್ಟ ಫಲಿತಾಂಶವಿಲ್ಲದೆ ಅಥವಾ ಗೆದ್ದಿರುವ ಮತ್ತು ಎಂದಿಗೂ ಅನಿಶ್ಚಿತವಾಗಿರುವ ಭಾಗಶಃ ವಿಜಯಗಳ ಯಾವುದೇ ಬಾಹ್ಯ ಚಿಹ್ನೆಗಳಿಲ್ಲದ ಒಂದು ಅಸ್ಪಷ್ಟ ಮತ್ತು ಮೊಂಡುತನದ ಹೋರಾಟವಾಗಿದೆ – ಏಕೆಂದರೆ ಮಾಡಿದ ಕೆಲಸವನ್ನು ಪುನಃ ಮಾಡಬೇಕಾಗಿದೆ ಎಂದು ಯಾವಾಗಲೂ ತೋರುತ್ತದೆ; ಪ್ರತಿಯೊಂದು ಮುನ್ನಡೆಯ ಹೆಜ್ಜೆಯು ಹೆಚ್ಚಾಗಿ ಬೇರೆ ಎಲ್ಲಿಯದೋ ಹಿನ್ನಡೆಯ ವೆಚ್ಚದಲ್ಲಿ ಮಾಡಲಾಗಿದೆ ಮತ್ತು ಒಂದು ದಿನ ಮಾಡಿದ್ದನ್ನು ಮರುದಿನ ರದ್ದುಗೊಳಿಸಬಹುದು. ವಾಸ್ತವವಾಗಿ, ಗೆಲುವು ಖಚಿತ ಮತ್ತು ಶಾಶ್ವತವಾಗುವುದು ಅದು ಸಂಪೂರ್ಣವಾದಾಗ ಮಾತ್ರ. ಹೆಚ್ಚು ಸಮಯ ತೆಗೆದುಕೊಳ್ಳುವಂಥವು ಮತ್ತು ಅನಿವಾರ್ಯವಾಗಿ ಕಳೆದು ಹೋಗುವ ವರುಷಗಳು ಪ್ರತಿಕೂಲ ಶಕ್ತಿಗಳ ಬಲವನ್ನು ಹೆಚ್ಚಿಸುತ್ತವೆ.

ಈ ಎಲ್ಲ ಸಮಯದಲ್ಲೂ ಪ್ರಜ್ಞೆಯು ಕಂದಕದಲ್ಲಿಯ ಕಾವಲುಗಾರನಂತೆ ನಿಂತಿರುತ್ತದೆ: ಭಯದ ನಡುಕವಿಲ್ಲದೆ ಅಥವಾ ಜಾಗರೂಕತೆಯ ಆಲಸ್ಯವಿಲ್ಲದೆ, ಸಾಧಿಸಬೇಕಾದ ಧ್ಯೇಯದಲ್ಲಿ ಮತ್ತು ಮೇಲಿನಿಂದ ಸ್ಫೂರ್ತಿ ನೀಡುವ ಮತ್ತು ಬೆಂಬಲಿಸುವ ಸಹಾಯದಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟುಕೊಳ್ಳುತ್ತ

ದೃಢವಾಗಿರು, ಯಾವುದೇ ಸಂದರ್ಭದಲ್ಲೂ ದೃಢವಾಗಿರು. ಏಕೆಂದರೆ, ಜಯವು ಸಹಿಸಿಕೊಳ್ಳುವವರಿಗೆ ಒಲಿಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/82–87 – ಶ್ರೀಮಾತೆ**

ಮನುಷ್ಯನಲ್ಲಿ, ದೈವಿಕವು ಚೈತ್ಯ ಪುರುಷನ ಪ್ರಭಾವದಡಿಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ ಮತ್ತು ಆ ತೆರನಾಗಿ ಅತಿಮಾನುಷದ ಬರುವಿಕೆಯನ್ನು ಸಿದ್ಧಗೊಳಿಸಲಾಗುತ್ತದೆ.

ಚೈತ್ಯ ಪುರುಷನು ಅವಿನಾಶಿ. ಆದ್ದರಿಂದ, ಅದರ ಮುಖಾಂತರ ಅಮೃತತ್ವವು ಭೂಮಿಯ ಮೇಲೆ ಪ್ರಕಟಗೊಳ್ಳುತ್ತದೆ. ಅದಕ್ಕಾಗಿ, ಈಗ ಮಹತ್ವದ ಸಂಗತಿ ಏನೆಂದರೆ, ಚೈತ್ಯ ಪುರುಷನನ್ನು ಕಂಡುಕೊಳ್ಳುವುದು, ಅದರೊಡನೆ ಒಂದಾಗುವುದು, ಮತ್ತು ಅಹಂಭಾವವನ್ನು ಅದರಿಂದ ಪ್ರತಿಸ್ಥಾಪಿಸುವುದು. ಆಗ ಅದು, ತನ್ನನ್ನು ತಾನು ಪರಿವರ್ತಿಸಿಕೊಳ್ಳಲು ಅಥವಾ ಮಾಯವಾಗಲು ಒತ್ತಾಯಿಸಲ್ಪಡುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 8, 1972**

## ದೇಹದ ಸೀಮಿತತೆ

**– ಅನುವಾದ: ನಾಗಜ್ಯೋತಿ ಮಾನ್ವಿ**

*ಮನ್ಯುಷರು ಸಾವನ್ನಪ್ಪದಿದ್ದರೆ, ವಯಸ್ಸಾಗುತ್ತ ಇದ್ದಂತೆ ಅವರ ದೇಹ ಅನುಪಯುಕ್ತವಾಗುತ್ತದೆಯೇ?*

.. ಅವರ ದೇಹ ನಶಿಸುತ್ತಾ ಹೋಗದಿದ್ದರೆ ಅವರು ಸಾಯುತ್ತಾರೆ ಅವರ ದೇಹವು ಅನುಪಯುಕ್ತವಾಗುವುದರಿಂದ ಅವರು ಸಾಯುತ್ತಾರೆ. ಅವರು ಸಾಯದಿದ್ದರೆ, ಅವರ ದೇಹ ಅನುಪಯುಕ್ತವಾಗಬಾರದು. ಇದರ ತದ್ವಿರುದ್ಧವಾಗಿ ದೇಹ ನಶಿಸುತ್ತದೆ, ಅವನತಿ ಹೊಂದುತ್ತದೆ. ಮತ್ತು ಸಂಪೂರ್ಣ ವಿನಾಶದಲ್ಲಿ ಅಂತ್ಯಗೊಳ್ಳುತ್ತದೆ ಎಂಬ ಕಾರಣದಿಂದ ಸಾವು ಅತ್ಯವಶ್ಯಕವಾಗುತ್ತದೆ, ಆದರೆ ಒಂದು ವೇಳೆ ದೇಹವು ಅಂತಃಸತ್ತೆಯ ಪ್ರಗತಿದಾಯಕ ಚಲನೆಯನ್ನು ಅನುಕರಿಸಿದರು, ದೇಹವು ಚೈತನ್ಯ ಪುರುಷನಂತೆಯೇ ಪ್ರಗತಿಯಾಗುವ ಮತ್ತು

ಪರಿಪೂರ್ಣತೆ ಹೊಂದುವ ಉದ್ದೇಶಹೊಂದಿದ್ದರೆ, ಅಲ್ಲಿ ಸಾವನ್ನಪ್ಪುವ ಅವಶ್ಯಕತೆಯೇ ಬರುವುದಿಲ್ಲ, ಒಂದು ವರ್ಷಕ್ಕೆ ಮತ್ತೊಂದು ವರ್ಷವನ್ನು ಜೋಡಿಸುವುದರಿಂದ ದೇಹವು ಕೆಡಲೇಬೇಕೆಂದೇನಿಲ್ಲ. ಇದು ಕೇವಲ ಪ್ರಕೃತಿಯ ಒಂದು ರೂಢಿಯಾಗಿದೆ. ಈ ಘಳಿಗೆಯಲ್ಲಿ ಏನಾಗುತ್ತಿದೆ ಎಂಬ ರೂಢಿಯಾಗಿದೆ. ಅದು ಸಾವಿಗೆ ನೇರವಾದ ಕಾರಣವಾಗಿದೆ, ಇದರ ತದ್ವಿರುದ್ಧವಾಗಿ ಪ್ರಾಣದ ಆರಂಭವು ಪರಿಪೂರ್ಣ ಚಲನೆಗಾಗಿ ಬೇರೆಯ ರೂಪದಲ್ಲಿ ಮುಂದುವರೆಯುವುದರ ಮುನ್ಸೂಚನೆಯನ್ನು ನೀವು ನೋಡಬಹುದು ನಾನು ಆಗಲೇ ನಿನಗೆ ಹೇಳಿದ್ದೇನೆ – ಯಾವುದೇ ಅಡೆತಡೆಯಿಲ್ಲದ ಬೆಳವಣಿಗೆಯ ಮುನ್ಸೂಚನೆಯ ಕಾಣುವುದಿಲ್ಲ, ಹಾಗಿದ್ದರೆ, ಕೆಲ ಸಮಯದ ನಂತರ ಮನೆಗಳ ಎತ್ತರವನ್ನು ಬದಲಾಯುಸುತ್ತಲೇ ಇರಬೇಕಾಗುತ್ತದೆ! ಆದರೆ ಈ ಎತ್ತರದಲ್ಲಿನ ಬೆಳವಣಿಗೆಯು ಆಕಾರದ ಪರಿಪೂರ್ಣತೆಯಲ್ಲಿನ ಬೆಳವಣೆಗೆಯಾಗಿ ಬದಲಾಗಬಹುದು. ಆಕಾರದ ಪರಿಪೂರ್ಣತೆಗಳು ಕ್ರಮೇಣವಾಗಿ ಸರಿಯಾಗಬಹುದು, ಎಲ್ಲಾ ಅಶಕ್ತತೆಗಳು ಶಕ್ತಿಯಿಂದ, ಎಲ್ಲಾ ಅಸಾಮರ್ಥ್ಯಗಳು ಕೌಶಲ್ಯಗಳಿಂದ ಬದಲಾಗಬಹುದು. ಇದು ಈ ರೀತಿ ಏಕಿರಬಾರದು? ನೀವು ಬೇರೆಯ ರೀತಿಯಲ್ಲಿ ಯೋಚಿಸಲಾರರಿ. ಏಕೆಂದರೆ, ಇದೇ ರೀತಿ ವಸ್ತುಗಳನ್ನು ನೋಡುವ ರೂಢಿ ಮಾಡಿಕೊಂಡಿದ್ದೀರಿ. ಆದರೆ ಈ ರೀತಿ ಏಕಾಗಬಾರದು ಎಂಬುದಕ್ಕೆ ಯಾವ ಕಾರಣಗಳಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/111–112**

ಸಾವಿನ ಭಯವನ್ನು ಗೆಲ್ಲುವ ಇನ್ನೊಂದು ಮಾರ್ಗವಿದೆ. ಆದರೆ ಕೇವಲ ಕೆಲವೇ ವ್ಯಕ್ತಿಗಳಿಗೆ ತಿಳಿದುಕೊಳ್ಳುವ ಯೋಗ್ಯತೆ ಇರುವುದರಿಂದ ಇಲ್ಲಿ ಅದನ್ನು ಕೇವಲ ಮಾಹಿತಿಗಾಗಿ ಹೇಳಲಾಗುತ್ತದೆ. ಜೀವಂತವಾಗಲೇ ಸಾವಿನ ವಲಯಲ್ಲಿ ಉದ್ದೇಶಪೂರ್ವಕವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಪ್ರವೇಶಿಸುವುದು ಮತ್ತು ಈ ಪ್ರಾದೇಶಿದಿಂದ ಮರುಕಳಿಸಿ ದೈಹಿಕ ಶರೀರವನ್ನು ಮರು ಪ್ರವೇಶಿಸುವುದು, ಸಂಪೂರ್ಣ ಜ್ಞಾನದಿಂದ ಭೌತಿಕ ಅಸ್ತಿತ್ವದ ಚಲನೆಯನ್ನು ಪುನರಾರಂಭಿಸುವುದು, ಆದರೆ ಅದಕ್ಕಾಗಿ ಒಬ್ಬರು ದೀಕ್ಷಿತರಾಗಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/86** **– ಶ್ರೀಮಾತೆ**

## ನಿಜವಾದ ಅಮರತ್ವ

... ಬಹಳ ಹಿಂದೆ ಇಲ್ಲಿಗೆ ಜನರು ಬರುತ್ತಿದ್ದರು ಏಕೆಂದರೆ ಅವರಂದುಕೊಂಡಿದ್ದರು. ಕೇವಲ ಆಶ್ರಮಕ್ಕೆ ಸೇರುವುದರಿಂದ ನಾವು ಅಮರರಾಗಬಹುದು ಎಂದು ಮತ್ತು ಅವರು ಅಮರತ್ವಕ್ಕಾಗಿ ಹೆಚ್ಚು ಅಭೀಪ್ಸೆಪಟ್ಟರು, ಸಹಜವಾಗಿ, ಅವರು ವಯಸ್ಸಾದ ಜನರು ತಮ್ಮ ಮುಂದಿರುವ ಸುದೀರ್ಘವಾದ ಮಾರ್ಗವನ್ನು ನೋಡದೇ ಮತ್ತು ಅದನ್ನು ಅನಿರ್ದಿಷ್ಟವಾಗಿ ವಿಸ್ತರಿಸಲು ಆಸೆಪಟ್ಟರು. ಅವರು ಏನು ಇದ್ದಾರೆಯೋ ಅದನ್ನೇ ಅನಿರ್ದಿಷ್ಟವಾಗಿ ದೀರ್ಘಾವಧಿಯವರೆಗೆ ವಿಸ್ತರಿಸುವುದೇ "ಅಮರತ್ವ" ಎಂದುಕೊಂಡಿದ್ದಾರೆ. ಆದರೆ, ಇದನ್ನು ಸೂಚಿಸದ ಮೊದಲ ವ್ಯಕ್ತಿಗೆ ನಾನು ಪ್ರಾತ್ಯುತ್ತರಿಸಿದೆ, – "ಎಲ್ಲರೂ ಅಮರರಾಗುವುದು ಸಾಧ್ಯವೆಂಬುದು ನನಗೆ ಗೊತ್ತಿಲ್ಲ. ಬಹುಶ ಅದು ಸಾಧ್ಯವಿಲ್ಲ ಆದರೆ ಯಾರಿಗೆ ಅಮರರಾಗುವ ಸಾಮರ್ಥ್ಯವಿದೆಯೋ ಅವರುಗಳಲ್ಲಿ ಎಷ್ಟು ಜನರು ಅದಕ್ಕಾಗಿ ಬೆಲೆ ತೆತ್ತಲು ಸಿದ್ಧವಿದ್ದಾರೆ?" ಏಕೆಂದರೆ ಅವರು ಬಿಡಬೇಕಾದ ವಿಷಯಗಳು ಸಾಕಷ್ಟಿವೆ, ಒಂದು ವೇಳೆ ಅರ್ಧದಾರಿಯಲ್ಲಿ ಅವರು ಹೇಳಬಹುದು "ಓಹ್ ಇಲ್ಲ, ಅತೀ ಹೆಚ್ಚು ಬೆಲೆ ತೆತ್ತಬೇಕಾಗುತ್ತದೆ ಎಂದು", ನನಗೆ ನೆನೆಪಿದೆ ಒಬ್ಬ ವರ್ಣಚಿತ್ರಕಾರನ ಜೊತೆಗೆ ನಾನು ಅಮರತ್ವದ ಬಗ್ಗೆ ಮಾತನಾಡುತ್ತಿದ್ದೆ, ಮತ್ತು ಆತ ಹೇಳಿದ ಅದು ಎಂತಹ ಜಗತ್ತು ಇರಬಹುದು ಎಂದು, ನಾನು ಹೇಳಿದ್ದೆ. ಉದಾಹರಣೆ ವಸ್ತುಗಳು ಪ್ರಕಾಶಮಾನವಾಗಿರುತ್ತವೆ ಮತ್ತು ಸೂರ್ಯನಿಂದ ಭೂಮಿಗೆ ಬರುವ ಈ ರೀತಿಯ ಪ್ರತಿಫಲನದ ಬೆಳಕಿರುವುದಿಲ್ಲ. ಮತ್ತು ನಾನು ಮಾತನಾಡುತ್ತಿದ್ದಂತೆಯೋ ಆತನ ಮುಖ ದೊಡ್ಡದಾಯಿತು, ಹೆಚ್ಚು ಹೆಚ್ಚು ಗಾಂಭೀರವಾಯಿತು; ಕೊನೆಗೆ ಆತ ಹೇಳಿದು "ಆದರೆ ನೆರಳಿಲ್ಲದೆ ವಸ್ತುಗಳಿಗೆ ಬೆಳಕನ್ನು ನೀಡದೆ, ನೆರಳನ್ನುಂಟುಮಾಡುವುದನ್ನು ಹೇಗೆ ತಾನೆ ಚಿತ್ರ ಬಿಡಿಸಲು ಸಾಧ್ಯ?".. ನಾನು ಆತನಿಗೆ ಹೇಳಿದೆ – "ನೀನು ಸಮಸ್ಯೆಯ ನಿಜವಾದ ಬೀಗದ ಕೈಯನ್ನು ಕೊಟ್ಟಿರುವೆ."

... ಅತೀ ಮುಖ್ಯವಾದ ಅತೀ ಕಷ್ಟಕರವಾದ ವಿಷಯವೆಂದರೆ ಒಬ್ಬರ ಅಹಂಕಾರವನ್ನು ತ್ಯಜಿಸುವುದು, ಯಾರು ಸಿದ್ಧವಿಲ್ಲವೋ ಅವರಿಗೆ ಅಹಂಕಾರವನ್ನು ತ್ಯಜಿಸುವುದೆಂದರೆ ಸತ್ತಂತೆ ಅನಿಸುತ್ತದೆ. ಮತ್ತು ದೈಹಿಕ ಸಾವಿಗಿಂತ ಹೆಚ್ಚು ಸತ್ತಂತೆ ಅನಿಸುತ್ತದೆ, ಆತನಿಗೆ ಅಹಂಕಾರ ಸಾಯುವುದೆಂದರೆ,

ಅಸ್ತಿತ್ವವೇ ಕರಗಿದಂತೆ –ಇದು ಸರಿಯಾದುದಲ್ಲ ಆದರೆ ಇದು ಈ ರೀತಿಯ ಅನುಭವವನ್ನು ಮುದ್ರಿಸುತ್ತದೆ, ಅಮರರಾಗಲು ತಮ್ಮ ಎಲ್ಲಾ ಸೀಮಿತಗಳನ್ನು ತ್ಯಜಿಸಬೇಕಾಗುತ್ತದೆ ಮತ್ತು ಅತಿ ದೊಡ್ಡ ಸೀಮಿತತೆಯೆಂದರೆ ಅಹಂಕಾರವೇ ಆಗಿದೆ; ಹೀಗಾಗಿ "ನಾನು" ಎಂಬುದು ಅಮರನಾಗುವುದಿಲ್ಲವೆಂದರೆ, ಅದರ ಒಳಿತಿದೆ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/69–70**

### ದೈಹಿಕ ರೂಪಾಂತರ

ನೀವು ದೇಹವನ್ನು ರೂಪಾಂತರಿಸಬೇಕಾಗಲು ದೃಢ ನಿರ್ಧಾರ ಮಾಡಿದ್ದರೆ, ಸರಿ, ನೀವು ಅದಕ್ಕೆ ಬೇಕಾದ ಎಲ್ಲಿ ಅವಶ್ಯಕ ತಾಳ್ಮೆಯೊಂದಿಗೆ ಕಾಯಲೇಬೇಕು – ಮುನ್ನೂರು ವರ್ಷಗಳ, ಐದನೂರು ವರ್ಷಗಳು, ಸಾವಿರ ವರ್ಷಗಳಾಗಬಹುದು ಇದಾವುದೂ ಲೆಕ್ಕವಿಲ್ಲ. ಬದಲಾವಣೆಗಾಗಿ ಸಮಯದ ಅವಶ್ಯಕವಿದೆ. ನನ್ನ ಪ್ರಕಾರ, ಕನಿಷ್ಠ ಮುನ್ನೂರು ವರ್ಷಗಲು ಬೇಕಾಗಬಹುದು. ನನ್ನ ಅನುಭವದೊಂದಿಗೆ ನಿಮಗೆ ನಿಜ ಹೇಳಬೇಕೆಂದರೆ ಇದು ನಿಜವಾಗಿಯೂ ಕನಿಷ್ಟ ಸಮಯವಾಗಿದೆ.

... ನಿಮ್ಮ ದೇಹವು ಹೇಗೆ ರಚನೆಯಾಗಿದೆ? ಎಲ್ಲಾ ಅಂಗಾಂಗಳೊಂದಿಗೆ ಮತ್ತು ಎಲ್ಲಾ ಕಾರ್ಯಂಗಗಳೊಂದಿಗೆ ಪರಿಶುದ್ಧವಾಗಿ ಪ್ರಾಣಿಯ ರೀತಿಯೇ ಇದೆ, ಒಂದು ಸೆಂಕೆಡಿನ ಸಾವಿರದ ಒಂದನೇ ಭಾಗದಷ್ಟು ಸಮಯ ನಿಮ್ಮ ಹೃದಯ ಬಡಿತವು ನಿಂತುಕೊಂಡರೆ ನೀವು ಹೋಗುವಿರಿ ಮತ್ತು ಅದು ನಿಮ್ಮ ಮುಕ್ತಾಯ, ನೀವು ಸಂಪೂರ್ಣವಾಗಿ ಅವಲಂಬಿತವಾಗಿದ್ದೀರಿ. ಇಡೀ ಎಲ್ಲವೂ ಕೆಲಸ ಮಾಡುತ್ತದೆ ಮತ್ತು ನಿಮ್ಮ ಪ್ರಜ್ಞಾಪೂರ್ವಕ ಸಂಕಲ್ಪವಿಲ್ಲದೆಯೋ ತನ್ನಷ್ಟಕ್ಕೆ ತಾನೇ ಕೆಲಸ ಮಾಡುತ್ತದೆ. (ನಿಮಗೆ ಸಂತೋಷಯದಾಯಕವಾದುದೇ, ನಿಮ್ಮ ದೇಹಕ ಕಾರ್ಯಗಳನ್ನು ನೀವು ಮೇಲ್ವಿಚಾರಣೆ ಮಾಡುವಂತಿದ್ದರೆ, ಅದು ಬಹಳ ಹಿಂದೆಯೇ ಹಾಳಾಗುತ್ತಿತ್ತು) ಎಲ್ಲವೂ ಏನಿದೆಯೋ ಪ್ರತಿಯೊಂದು ಅವಶ್ಯಕ, ಏಕೆಂದರೆ ಅದು ಆ ರೀತಿಯಾಗಿ ಸಂಘಟಿಸಲ್ಪಟ್ಟಿದೆ. ಒಂದು ಅಂಗಾಂಗ ಇಲ್ಲದಿದ್ದರೂ ನೀವು ಏನೂ ಮಾಡಲಾರರಿ. ಅದನ್ನು ಪ್ರತಿನಿಧಿಸುವ ಏನೋ ಒಂದು ಇರಲೇಬೇಕಾಗುತ್ತದೆ.

# ಪ್ರಾಚೀನ ಧರ್ಮ ಗ್ರಂಥಗಳಲ್ಲಿ ಅಮರತ್ವ

## ಪ್ರಜ್ಞೆಯ ಬದಲಾವಣೆ

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

ಪ್ರಜ್ಞೆಯ ಬದಲಾವಣೆ ಅತ್ಯಂತ ಅವಶ್ಯವಾದುದು, ಅದಾಗದ ಹೊರತು ಭೌತಿಕ ಸಿದ್ಧಿಯು ಸಾಧ್ಯವೇ ಇಲ್ಲ. ಅತಿಮಾನಸ ಪರಿವರ್ತನೆಯು ಸಂಪೂರ್ಣವಾಗಿ ಆಗಬೇಕಾದರೆ ಭೌತಿಕ ಶರೀರವು ಈಗಿರುವಂತೆಯೇ ಮುಂದುವರಿದರೆ ಸಾಲದು; ಸದ್ಯಕ್ಕೆ ಅದು ಮರಣ, ಜರಾ, ವ್ಯಾಧಿ, ನೋವು, ಪ್ರಜ್ಞಾಹೀನತೆ ಹಾಗೂ ಇನ್ನಿತರ ಅಜ್ಞಾನದ ಅನೇಕ ಪರಿಣಾಮಗಳಿಗೆ ದಾಸನಾಗಿದೆ. ಇವು ಇದೇ ರೀತಿ ಮುಂದುವರಿಯುವುವು ಅನ್ನುವುದಾದರೆ ಅತಿಮಾನಸದ ಅಗತ್ಯವೇ ಇರುವುದಿಲ್ಲ. ಏಕೆಂದರೆ, ಕೇವಲ ಬದಲಾವಣೆ ಆಗಬೇಕೆನ್ನುವುದಾದರೆ ಮನೋ–ಆಧ್ಯಾತ್ಮಿಕ ಹಾಗೂ ಪರಮಾತ್ಮನ ಜೊತೆಗೆ ಅಥವಾ ಅಧಿಮಾನಸದ ಜೊತೆಗೆ, ಅಷ್ಟೇ ಏಕೆ ಉನ್ನತ ಮನದ ಜೊತೆ ಒಂದಾದರೂ ಸಹ ಸಾಕಾಗುವುದು. ಮನಃಪ್ರಾಣ ಶರೀರಗಳಲ್ಲಿ ದೈವೀ ಸತ್ಯವು ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕೆನ್ನುವುದಾದರೆ ಅತಿಮಾನಸದ ಅವತರಣವು ಅವಶ್ಯವಾಗಿ ಆಗಲೇ ಬೇಕಾಗುವುದು. ಇದರ ಅರ್ಥವೇನೆಂದರೆ ಇದರ ಆತ್ಯಂತಿಕ ಅಥವಾ ಅಂತಿಮ ಪರಿಣಾಮವಾಗಿ ಶರೀರದ ಪ್ರಜ್ಞಾಹೀನತೆ ನಷ್ಟವಾಗುವುದು, ಅದು ಜರಾ ಮೃತ್ಯುಗಳಿಗೆ ಒಳಗಾಗುವುದಿಲ್ಲ. ಮರಣವು ಸಹಜವಾಗಿ ಯಾವ ಕಾರಣದಿಂದ ಬರುವುದೋ ಆ ಸಾಮಾನ್ಯ ಕಾರಣದಿಂದ, ಅಂಥ ಸಾಮಾನ್ಯ ಪ್ರಕ್ರಿಯೆಯಿಂದ ಬರುವುದಿಲ್ಲ. ಶರೀರದ ಬದಲಾವಣೆ ಆಗಬೇಕಾದರೆ ಅದು ಅಂತೇ ವಾಸಿಪ ಆತ್ಮ ಸಂಕಲ್ಪದಿಂದ ಮಾತ್ರ ಸಾಧ್ಯ. ಇದು ಭೌತಿಕ ಅಮರತ್ವದ ತತ್ವವು; ಹಾಗೆಂದ ತಕ್ಷಣ 3000 ಸಾವಿರ ವರ್ಷಗಳವರೆಗೆ ಅದೇ ಶರೀರ ಇರಬೇಕು ಎಂಬುದೇನೂ ಆಗ್ರಹ ಅಥವಾ ನಿಯಮವಲ್ಲ; ಏಕೆಂದರೆ ಅದೊಂದು ಕಟ್ಟಳೆಯಂತಾಗಿಬಿಡುವುದು. ಆದರೂ ಸಹ, ಯಾರಾದರೂ 1000 ವರ್ಷ ಅಥವಾ ಹೆಚ್ಚು ವರ್ಷ ಬದುಕಲು ಬಯಸಿದರೆ, ಅಂಥವರಿಗೆ ಸಂಪೂರ್ಣ ಸಿದ್ಧಿ ಲಭಿಸಿದ್ದರೆ ಅದೇನೂ ಅಸಾಧ್ಯವಾಗುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/19**

## ಅಮರತ್ವವು ಅತಿಮಾನಸೀಕರಣದ ಪರಿಣಾಮವು

ಅಮರತ್ವವು ಅತಿಮಾನಸೀಕರಣದ ಅನೇಕ ಸಾಧ್ಯತೆಗಳಲ್ಲಿನ ಒಂದು ಪರಿಣಾಮವು. ಹಾಗೆಂದು ಅದೇನೂ ಕಡ್ಡಾಯವಲ್ಲ, ಜೀವನವು ಸದ್ಯಕ್ಕೆ ಹೇಗಿದೆಯೋ ಹಾಗೆಯೇ ಶಾಶ್ವತವಾಗಿ ಅಥವಾ ಅನಿರ್ದಿಷ್ಟ ಕಾಲದವರೆಗೆ ಮುಂದುವರಿಯುವುದು ಎಂದೇನೂ ಅರ್ಥವಲ್ಲ. ಬಹಳ ಜನರು ಇದೇ ರೀತಿ ತಪ್ಪು ತಿಳುವಳಿಕೆ ಹೊಂದಿದ್ದಾರೆ. ತಾವು ಈಗ ಹೇಗಿರುವುರೋ ಹಾಗೆಯೇ ತಮ್ಮ ಎಲ್ಲ ರೀತಿಯ ಆಶೆ, ಕಾಮನೆಗಳ ಜೊತೆಗೆ ಇರುಬಹುದು ಎಂದು ಭ್ರಮಿಸಿದ್ದಾರೆ. ವ್ಯತ್ಯಾಸವೇನೆಂದರೆ ತಾವು ತಮ್ಮೆಲ್ಲ ಆಶೆಗಳನ್ನು ಕೊನೆಯಿಲ್ಲದಂತೆ ಪೂರೈಸಿಕೊಳ್ಳಬಹುದು ಎಂಬುದು ಅವರ ಕಲ್ಪನೆ. ಆದರೆ ಇಂಥ ಅಮರತ್ವದಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಅಂಥ ಜೀವನದಿಂದ ಜನರು ಬೇಗನೇ ಬೇಸರಿಸುತ್ತಾರೆ. ಪರಮಾತ್ಮನಲ್ಲಿಯೇ ಜೀವಿಸುವುದು ಹಾಗೂ ದೈವೀ ಪ್ರಜ್ಞೆಯನ್ನು ಪಡೆದುಕೊಳ್ಳುವುದೇ ನಿಜವಾದ ಅಮರತ್ವವಾಗಿದೆ. ಭೌತಿಕ ಶರೀರವನ್ನು ಕೂಡ ದೈವೀಕರಣಗೊಳಿಸುವುದು, ಅದನ್ನು ದೈವೀ ಕಾರ್ಯಗಳಿಗಾಗಿ ಮತ್ತು ದಿವ್ಯ ಜೀವನಕ್ಕಾಗಿ ಯೋಗ್ಯವಾದ ಉಪಕರಣವನ್ನಾಗಿ ಮಾಡುವುದು ಇದೇ ಅಮರತ್ವದ ನಿಜವಾದ ಭೌತಿಕ ಅಭಿವ್ಯಕ್ತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/314**

## ಮೃತ್ಯುವಿನ ಮೇಲೆ ವಿಜಯ

ಸಾವಿನ ಮೇಲೆ ಅಥವಾ ಮೃತ್ಯುವಿನ ಮೇಲೆ ಗೆಲುವು ಸಾಧಿಸುವುದು ಅತಿಮಾನಸೀಕರಣದ ಒಂದು ಉಪ ಪರಿಣಾಮ ಮಾತ್ರ. ಅತಿಮಾನಸದ ಅವತರಣದ ಬಗೆಗಿನ ನನ್ನ ದೃಷ್ಟಿಕೋನವನ್ನು ನಾನು ಈ ರೀತಿ ಪ್ರತಿಪಾದನೆ ಮಾಡಿರುವೆನೋ ಇಲ್ಲವೋ ನನಗೆ ತಿಳಿಯದು. ಆದರೆ, ಅತಿಮಾನಸದ ಅವತರಣವು ಎಲ್ಲರನ್ನೂ ಅನಾಯಾಸವಾಗಿ ಅಮರರನ್ನಾಗಿ ಮಾಡುವುದೆಂದು ನಾನು ಯಾವತ್ತಿಗೂ ಹೇಳಿಲ್ಲ ಮತ್ತು ಅಂಥ ಯೋಚನೆ ಕೂಡ ನನಗಿಲ್ಲ. ಅತಿಮಾನಸದ ಅವತರಣವು ಏನು ಮಾಡಬಲ್ಲದೆಂದರೆ ಯಾರಿಗೇ ಆಗಲಿ ಒಂದು ಒಳ್ಳೆಯ ಅವಕಾಶ, ಯಾರು ಅತಿಮಾನಸಕ್ಕೆ ಆವಾಗಲೇ ಅಥವಾ ಆನಂತರ ತೆರೆದುಕೊಳ್ಳುವುರೋ ಅವರು ಅತಿಮಾನಸ ಪ್ರಜ್ಞೆಯನ್ನು

ಪಡೆದುಕೊಳ್ಳಲು ಹಾಗೂ ಅದರ ಇತರ ಪರಿಣಾಮಗಳನ್ನು ಪಡೆಯುವ ಅವಕಾಶವನ್ನು ಪಡೆಯುವರು. ಆದರೆ, ಅದು ಎಲ್ಲರನ್ನೂ ಅಗತ್ಯವಾಗಿ ಸಾಧನೆ ಮಾಡುವಂತೆ ಮಾಡುವುದಿಲ್ಲ. ಅದು ಹಾಗೇನಾದರೂ ಮಾಡಿದ್ದೇ ಆದರೆ ಅದರ ಸಹಜ ಪರಿಣಾಮವಾಗಿ ಎಲ್ಲರೂ, ಇಡೀ ಭೂಮಿಯೇ, ಮಾನವರು, ಜೀವ ಜಂತುಗಳು ಎಲ್ಲರೂ ಒಮ್ಮೆಲೇ ರಾತ್ರೋರಾತ್ರಿ ತಾವೇ ತಾವಾಗಿ ಅತಿಮಾನಸ ಪುರುಷರಾಗಿ ಬದಲಾಗಿರುವುದನ್ನು ಕಾಣುವುರು! ಹಾಗಾಗುವುದಾದರೆ, ಯಾವ ಆಶ್ರಮ ಯೋಗ ಇವುಗಳ ಅವಶ್ಯಕತೆಯೇ ಇರುವುದಿಲ್ಲ.

ಮುಖ್ಯವಾದುದೇನೆಂದರೆ ಅತಿಮಾನಸಿಕ ಪರಿವರ್ತನೆ, – ಸಾವನ್ನು ಗೆಲ್ಲುವುದು ಅಮುಖ್ಯವಾದುದು, ನಾನು ಆಗಲೇ ಹೇಳಿದಂತೆ, ಅದು ಅತಿಮಾನಸ ಅವತರಣದ ಕೊನೆಯ ಪರಿಣಾಮ, ಮೊದಲ ಪರಿಣಾಮವಲ್ಲ ಅಥವಾ ಅದೇ ಮಹತ್ವದ ಸಂಗತಿಯೂ ಅಲ್ಲ – ಅದು ಪೂರ್ಣತೆಯ ಕೊನೆಯ ಕಲ್ಲು ಅಷ್ಟೇ ಹೊರತು ಅದೇ ಅತ್ಯಂತ ಮಹತ್ವದ ಹಾಗೂ ಅವಶ್ಯವಾದ ಅಂಶ ಅಲ್ಲ.

ಅದೇ ಮೊದಲನೆಯದೆಂದು ಬಗೆಯುವುದೆಂದರೆ ಎಲ್ಲ ಆಧ್ಯಾತ್ಮಿಕ ಮೌಲ್ಯಗಳನ್ನು ತಲೆ ಕೆಳಗೆ ಮಾಡಿದಂತೆ. ಹಾಗೆ ಹೇಳುವುದೆಂದರೆ ಸಾಧಕನು ಉಳಿದ ಉನ್ನತ ಆಧ್ಯಾತ್ಮಿಕ ಗುರಿಗಳನ್ನೆಲ್ಲ ಬಿಟ್ಟು ಇದೇ ಪ್ರಾಣಿಕ ಜೀವನಕ್ಕೆ, ಸ್ವಾರ್ಥಪರ ಹಾಗೂ ಶರೀರದ ರಕ್ಷಣೆಯ ಬಯಕೆಗೆ ಜೋತುಬಿದ್ದ ಹಾಗೆ – ಇಂಥ ಮನೋಭಾವವು ಅತಿಮಾನಸ ಬದಲಾವಣೆಯನ್ನು ತರಲಾರದು.

## ಭೌತಿಕ ಅಮರತ್ವ

ಅತಿಮಾನಸೀಕರಣವಾಗದ ಹೊರತು ಶರೀರದ ಅಮರತ್ವ ಸಾಧ್ಯವಿಲ್ಲ. ಯೌಗಿಕ ಶಕ್ತಿಯಲ್ಲಿ ಆ ಸಾಮರ್ಥ್ಯವಿದೆ, ಯೋಗಿಯು 300 ಅಥವಾ 400 ವರ್ಷಗಳ ವರೆಗೂ ಜೀವಿಸಿರಬಹುದು, ಆದರೆ ಅತಿಮಾನಸವಿಲ್ಲದೇ ಅಮರತ್ವದ ನಿಜವಾದ ತತ್ವ ಇರುವುದಿಲ್ಲ.

ವಿಜ್ಞಾನವಾದರೂ ಸಹ ಭೌತಿಕ ಸಾಧನಗಳ ಮೂಲಕ ಒಂದಿಲ್ಲೊಂದು ದಿನ ಸಾವನ್ನು ಗೆಲ್ಲಬಹುದು ಎಂದು ನಂಬುತ್ತದೆ. ವಿಜ್ಞಾನದ ತರ್ಕವು ಸರಿಯಾಗಿಯೇ ಇದೆ. ಅತಿಮಾನಸ ಶಕ್ತಿಯು ಇದನ್ನು ಸಾಧಿಸುವುದೇ ಎಂದು ಸಂದೇಹ ಪಡಲು ಕಾರಣವೇನೂ ಇಲ್ಲ. ಭೂಮಿಯ ಮೇಲಿನ ಆಕಾರಗಳು(ಜೀವಿಗಳು)

ಅಮರವಾಗಿಲ್ಲ, ಬೇರೆ ಸ್ತರದ ಮೇಲೆ ಸಾಯದೇ ಉಳಿಯುವ ಸಾಧ್ಯತೆ ಉಂಟು. ಏಕೆಂದರೆ ಭೂಮಿಯ ಮೇಲಿನ ವಸ್ತುಗಳು ಬೆಳೆಯುವ ಆತ್ಮ ಚೈತನ್ಯವನ್ನು ಪ್ರಕಟ ಮಾಡುವಷ್ಟು ನಮನಶೀಲವಾಗಿಲ್ಲ. ಆತ್ಮಾಭಿವ್ಯಕ್ತಿ ಮಾಡುವಷ್ಟು ನಮನಶೀಲತೆಯನ್ನವು ಬೆಳೆಸಿಕೊಂಡರೆ ಅವು ಕೂಡ ಶಾಶ್ವತವಾಗಿ ಉಳಿಯಲಾರವು ಎಂದು ಹೇಳಲಾಗದು.

ಶರೀರದ ವ್ಯಾಮೋಹ ಹೆಚ್ಚಾಗಿದ್ದರೆ ಅಮರತ್ವವು ಸಿದ್ಧಿಸಲಾರದು. ಏಕೆಂದರೆ, ಭೌತಿಕ ಶರೀರದ ಜೊತೆಗೆ ಗುರುತಿಸಿಕೊಳ್ಳದ ಸತ್ತೆಯ ಅಮರವಾದ ಭಾಗದಲ್ಲಿ ಜೀವಿಸಲು ಆರಂಭಿಸಿದಾಗ ಹಾಗೂ ಅದರ ಪ್ರಜ್ಞೆ ಮತ್ತು ಶಕ್ತಿಯನ್ನು ಶರೀರದ ಜೀವಕೋಶಗಳಲ್ಲಿ ಇಳಿಸಿ ತರಲು ಸಾಧ್ಯವಾದಾಗ ಮಾತ್ರ ಅಮರತ್ವ ಸಿದ್ಧಿಸುವುದು. ನಾನಿಲ್ಲಿ ಯೌಗಿಕ ಸಾಧನದ ಬಗ್ಗೆ ಮಾತನಾಡುತ್ತಿದ್ದೇನೆ. ಇತ್ತೀಚೆಗೆ ವಿಜ್ಞಾನಿಗಳೂ ಸಹ, – ಸೈದ್ಧಾಂತಿಕವಾಗಿಯಾದರೂ ಸರಿ – ಸಾವನ್ನು ಗೆಲ್ಲಬಹುದಾದ ಭೌತಿಕ ಸಾಧನಗಳನ್ನು ಕಂಡುಹಿಡಿಯಬಹುದೆಂದು ಹೇಳುತ್ತಿದ್ದಾರೆ. ಆದರೆ ಅದರಿಂದ ಸದ್ಯದ ಶರೀರದಲ್ಲಿ ಸದ್ಯದ ಪ್ರಜ್ಞೆಯೇ ಮುಂದುವರಿಯುವುದು. ಪ್ರಜ್ಞೆಯ ಅಮೂಲಾಗ್ರ ಬದಲಾವಣೆಯಾಗದ ಹೊರತು, ಅದರ ಕಾರ್ಯ ವೈಖರಿ ಬದಲಾಗದ ಹೊರತು ಅಂಥ ದೊಡ್ಡ ಸಾಧನೆಯೇನೂ ಆದಂತಲ್ಲ; ಅದು ಕೇವಲ ಸಣ್ಣ ಸಾಧನೆಯೇ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/312–314 – ಶ್ರೀ ಅರವಿಂದರು**

### ಅತಿಮಾನಸಿಕ ಶರೀರ

ಸಾಮಾನ್ಯ ಸತ್ತೆಯಲ್ಲಿ ಇಳಿಸಿ ತರಬೇಕಾಗಿರುವ ಅತಿಮಾನಸಿಕ ಶರೀರವು ನಾಲ್ಕು ಲಕ್ಷಣಗಳನ್ನು ಹೊಂದಿದೆ: ಹಗುರುತನ, ಹೊಂದಿಕೊಳ್ಳಬಲ್ಲ ಸ್ವಭಾವ, ನಮನಶೀಲತೆ ಮತ್ತು ಪ್ರಕಾಶಮಯತೆ. ಭೌತಿಕ ಶರೀರವು ಸಂಪೂರ್ಣವಾಗಿ ದೈವಿಕವಾಗಿ ಬದಲಾದರೆ, ಯಾವಾಗಲೂ ಗಾಳಿಯಲ್ಲಿ ಹಗುರಾಗಿ ತೇಲುತ್ತ ಸಾಗುತ್ತಿರುವ ಹಾಗೆ ಅನುಭವವಾಗುತ್ತದೆ. ಭಾರದ(ತೂಕದ) ಅನುಭವವೇ ಇರದು. ತಮಸ್ಸು ಅಥವಾ ಪ್ರಜ್ಞಾಹೀನತೆಯ ಭಾವ ಹೋಗಿಬಿಡುವುದು. ಯಾವುದೇ ಸಂದರ್ಭ ಅಥವಾ ವಾತಾವರಣಕ್ಕೆ ಹೊಂದಿಕೊಳ್ಳಬಲ್ಲ ಅದರ ಸಾಮರ್ಥ್ಯಕ್ಕೆ ಕೊನೆಯೇ ಇರದು. ಎಂಥದೇ ಪರಿಸ್ಥಿತಿ ಇರಲಿ ಯಾವುದರ ಅಗತ್ಯ

ಅಥವಾ ಒತ್ತಡ ಇದೆಯೋ ಅದಕ್ಕೆ ತಕ್ಕಂತೆ ತಕ್ಷಣ ಹೊಂದಿಕೊಂಡು ಬಿಡುವುದು. ಏಕೆಂದರೆ ಅದರಲ್ಲಿರುವ ಪೂರ್ಣ ಪ್ರಜ್ಞೆಯು ಅಡ್ಡ ಬರಬಹುದಾದ ಎಲ್ಲ ಜಡತೆ, ದೌರ್ಬಲ್ಯ, ಅಕ್ಷಮತೆಗಳನ್ನು ಹೊರಹಾಕಿಬಿಡುವುದು. ಅತಿಮಾನಸಿಕ ನಮನೀಯತೆಯು plasticity ಎಲ್ಲ ತರಹದ ವಿರೋಧಗಳ ದಾಳಿಯನ್ನು ಸಮರ್ಥವಾಗಿ ಎದುರಿಸಲು ಶಕ್ತಿಯನ್ನು ನೀಡುವುದು. ಅದು ಕೇವಲ ವಿರೋಧೀ ಶಕ್ತಿಯ ದಾಳಿಯನ್ನು ರಕ್ಷಣಾತ್ಮಕವಾಗಿ ಪ್ರತಿಭಟಿಸುವುದಿಲ್ಲ, ಬದಲಾಗಿ ವಿರೋಧಿ ಶಕ್ತಿಯನ್ನು ಅದರ ಪರಿಣಾಮವನ್ನು ನಷ್ಟಗೊಳಿಸುವುದರ ಮೂಲಕ ಅದು ಸುಮ್ಮನೇ ಹೊರಟುಹೋಗುವ ಹಾಗೆ ಮಾಡುವುದು. ಹೀಗಾಗಿ ಯಾವ ಅಪಾಯಕಾರಿಯಾದ ಪರಿಣಾಮಗಳೂ ಸಂಭವಿಸುವುದಿಲ್ಲ ಮತ್ತು ಬಹು ಗಂಭೀರ ದಾಳಿಗಳೂ ಸಹ ಅದನ್ನು ಬಾಧೆ ಪಡಿಸುವುದಿಲ್ಲ.

ಕೊನೆಯದಾಗಿ ಅದು ಬೆಳಕಿನ ವಸ್ತುವೇ ಆಗಿ ಮಾರ್ಪಾಡಾಗಿ ಬಿಡುವುದು. ಪ್ರತಿ ಜೀವಕೋಶದಲ್ಲಿಯೂ ಅತಿಮಾನಸ ವೈಭವ ಪ್ರಸರಿತವಾಗುವುದು. ಕೇವಲ ಸೂಕ್ಷ್ಮ ದರ್ಶನ ಸಾಮರ್ಥ್ಯ ಉಳ್ಳವರಿಗಷ್ಟೇ ಸಾಮಾನ್ಯಾತಿಸಾಮಾನ್ಯ ವ್ಯಕ್ತಿಗೂ ಸಹ ಆ ಅಲೌಕಿಕ ಪ್ರಕಾಶಮಯತೆಯನ್ನು ನೋಡಲು ಸಾಧ್ಯವಾಗುವುದು. ಅದೊಂದು ತೀವ್ರ ವಾಸ್ತವಿಕ ಹಾಗೂ ಎಲ್ಲರಿಗೂ–ಪ್ರತಿಯೊಬ್ಬರಿಗೂ ಸಹ, ಅತ್ಯಂತ ಸಂದೇಹ ಸ್ವಭಾವದ ವ್ಯಕ್ತಿಗೂ ಸಹ, ಶಾಶ್ವತ ಪರಿವರ್ತನೆಯ ಖಚಿತ ಸಾಕ್ಷ್ಯ ಸಿಕ್ಕುವುವು.

ಶಾರೀರಿಕ ಪರಿವರ್ತನೆಯು ಅತ್ಯಂತ ಉನ್ನತವಾದ ಶ್ರೇಷ್ಠ ಆಧ್ಯಾತ್ಮಿಕ ಪುನರ್ಜನ್ಮವಾಗಿದೆ – ಹಿಂದಿನ ಸಾಮಾನ್ಯ ಭೂತ ಕಾಲದ ಅಂಶಗಳ ಬದಲಾವಣೆ ಅಂತಲೇ ಅರ್ಥ. ಆಧ್ಯಾತ್ಮಿಕ ಪುನರ್ಜನ್ಮವೆಂದರೆ ನಮ್ಮ ಭೂತ ಕಾಲದ ಎಲ್ಲ ಸಹವಾಸಗಳ, ಒಡನಾಟ, ಮತ್ತು ಪ್ರಸಂಗಗಳನ್ನು ನಿರಂತರವಾಗಿ ಕಿತ್ತೆಸೆಯುತ್ತ ಹೋಗುವುದು, ಮತ್ತು ಪ್ರತಿ ಗಳಿಗೆಗೂ ನಾವು ಹೊಸ ಜೀವನವನ್ನು ಆರಂಭಿಸಲು ಉದ್ಯುಕ್ತರಾಗುವುದು. ಅಂದರೆ, ಯಾವುದನ್ನು ಸಾಮಾನ್ಯವಾಗಿ ಕರ್ಮ ಎಂದು ಹೇಳುತ್ತಾರೋ ಅದರಿಂದ ಸಂಪೂರ್ಣವಾಗಿ ಮುಕ್ತರಾಗುವುದು. ಇದನ್ನೇ ಬೇರೆ ರೀತಿಯಾಗಿ ಹೇಳುವುದಾದರೆ ಸಾಮಾನ್ಯ ನೈಸರ್ಗಿಕ ನಿಯಮವೆನಿಸಿರುವ ಕಾರ್ಯ ಕಾರಣದ ಬಂಧನದಿಂದ ಬಿಡುಗಡೆ ಹೊಂದುವುದು ಎಂದೂ ಹೇಳಬಹುದು. ಭೂತ ಕಾಲದ ಸಂಬಂಧವನ್ನು ಪ್ರಜ್ಞೆಯಲ್ಲಿ ಸಂಪೂರ್ಣವಾಗಿ ಕಡಿದುಕೊಳ್ಳಲು ಸಾಧ್ಯವಾದರೆ, ನಮ್ಮನ್ನು

ಜಲೌಕಾಗಳಂತೆ(ಜಿಗಣೆ leeches) ನಮ್ಮನ್ನು ಕಚ್ಚಿ ಹಿಡಿದು ಬದುಕಿನ ರಕ್ತ ಹೀರುತ್ತಿರುವ ಎಲ್ಲ ತಪ್ಪುಗಳು, ಪ್ರಮಾದಗಳು, ಹುಚ್ಚುತನ ಎಲ್ಲವೂ ಬಿದ್ದು ಹೋಗುವುವು. ನಾವು ಆಗ ಮುಕ್ತರೂ ಆನಂದಿತರೂ ಆಗುತ್ತೇವೆ. ಇದು ಕೇವಲ ವೈಚಾರಿಕವಲ್ಲ ಸತ್ಯವಲ್ಲ ಬದಲಾಗಿ ಅತಿ ದೃಢವಾದ ಪ್ರತ್ಯಕ್ಷ ವಾಸ್ತವ ಸತ್ಯ ಸಂಗತಿಯಾಗಿರುವುದು. ನಾವು ಆಗ ನಿಜವಾಗಿ ಸ್ವತಂತ್ರರಾಗಿರುವೆವು, ನಮ್ಮನ್ನು ಯಾವುದೂ ಬಂಧಿಸದು, ಯಾವುದೂ ಬಾಧಿಸದು, ನಮಗೆ ಯಾವ ಹೊಣೆಗಾರಿಕೆ, ಜವಾಬ್ದಾರಿ ಅಥವಾ ಮಾಡಲೇಬೇಕಾದ ಕೆಲಸವೆಂದು ಏನೂ ಇರುವುದಿಲ್ಲ.

ನಾವೊಂದು ವೇಳೆ ಈಗ ವಿರೋಧಿಸಬೇಕು, ನಮ್ಮ ಭೂತ ಕಾಲವನ್ನು ಮೀರಿ ಬೆಳೆಯಬೇಕು ಎಂದು ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಾಗದು. ಪಶ್ಚಾತ್ತಾಪದಂಥ ಯಾವ ಕಾರ್ಯಗಳಿಂದಲೂ ನಾವು ಹಾಗೆ ಮಾಡಲಾರೆವು. ಅಪರಿವರ್ತಿತ ಗತ ಜೀವನವು ಸಾಕ್ಷಾತ್ಕಾರದಂಥ ಅಪರೂಪದ ಮುಹೂರ್ತವನ್ನು ಎಂದಿಗೂ ದೊರಕಿಸಿಕೊಳ್ಳಲಾರದು. ಪುನರ್ಜನ್ಮ ತಾಳಬೇಕೆಂದರೆ ನಾವು ಮೊದಲು ಚೈತ್ಯ ಪ್ರಜ್ಞೆಯನ್ನು ಪ್ರವೇಶಿಸಬೇಕು. ಅಲ್ಲಿ ಜೀವ ಮತ್ತು ಆತ್ಮ ಎರಡೂ ಭಿನ್ನವಾಗಿರದೇ ಒಂದೇ ಆಗಿರುವುವು ಮತ್ತು ಕರ್ಮದ ಪರಿಣಾಮಗಳಿಂದ ಶಾಶ್ವತವಾದ ಮುಕ್ತ ಸ್ಥಿತಿ ಇರುವುದು. ಇದೇನೂ ಸುಲಭ ಸಾಧ್ಯವಾದುದಲ್ಲ. ನಮ್ಮೊಳಗಿರುವ, ಪರಮಾತ್ಮನಿಗೆ ಸದಾ ಸರ್ವದಾ ಸಮರ್ಪಣೆ ಮಾಡಿಕೊಂಡಿರುವ ನಿಜ ಆತ್ಮದ ಬಗ್ಗೆ ನಮಗೆ ಅರಿವು ಮೂಡಿದರೆ ಎಲ್ಲ ಬಂಧನಗಳೂ ಕಳಚಿ ಹೋಗುವುವು. ಆಗ ನಮ್ಮ ಜೀವನ ನವ ಜೀವನವಾಗುವುದು. ನಮ್ಮ ಭೂತ ಕಾಲದ ಅಂಟು ಕೊಡವಿ ಹೋಗುವುದು.

ಕೊನೆಯ ಆತ್ಯಂತಿಕ ಉನ್ನತ ಆಧ್ಯಾತ್ಮಿಕ ಪುನರ್ಜನ್ಮದ ಬಗ್ಗೆ ನಿಮಗೊಂದು ಕಲ್ಪನೆ ನೀಡಬೇಕಾದರೆ ನಾನು ಹೀಗೆ ಹೇಳಬಹುದು, ಇಡೀ ಜಗತ್ತೇ ನಿರಂತರವಾಗಿ ಕ್ಷಣ ಕ್ಷಣಕ್ಕೂ ಸಾಯುವ ಅಥವಾ ಇಲ್ಲದಂತಾಗುವುದು ಮತ್ತು ಹಾಗೆಯೇ ಪುನಃ ಪ್ರತಿ ಕ್ಷಣವೂ ಹೊಸ ಹುಟ್ಟು ಪಡೆಯುವ ಅಪೂರ್ವ ಅನುಭವ ನಮಗಾಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 3/175–177**

## ಮರಣವಿಲ್ಲದೇ ಪರಿವರ್ತನೆಯ ಸಾಧ್ಯತೆ

ಎರಡರ ನಡುವಿನ ಪರಿವರ್ತನೆಯು ನಿಜವಾಗಿ ಸಾಧ್ಯವೆಂದು ತೋರುತ್ತದೆ, ಅತಿಮಾನಸಿಕರಣಗೊಂಡ ಪ್ರಜ್ಞೆಯು ಸುಧಾರಿತ ಅಥವಾ ಮಾರ್ಪಾಡಾದ ಭೌತಿಕ ಶರೀರದಲ್ಲಿ ಸಂಕಲ್ಪ ಸಹಿತವಾಗಿ ಪ್ರವೇಶಿಸಿದಾಗ ಪರಿವರ್ತನೆ ಸಾಧ್ಯವಾಗುವುದು. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ, ಮಾನವನ ಶರೀರ ಈಗ ಹೇಗಿದೆಯೋ ಅಂಥ ಶರೀರವಲ್ಲ, ಬದಲಾಗಿ ಸುಧಾರಿತಗೊಂಡ ಶರೀರ ಎಂದು ಅರ್ಥ. ಮಾರ್ಪಾಡು ಬರುವುದು ತೀವ್ರವಾದ ಭೌತಿಕ ತರಬೇತಿಯಿಂದ ಮಾತ್ರ ಸಾಧ್ಯವಿದೆಯೇ ಹೊರತು ಬೇರೆ ರೀತಿಯಿಂದ ಸಾಧ್ಯವಿಲ್ಲ. ಇದನ್ನು ನಾನು ಅತಿ ಸ್ಪಷ್ಟವಾಗಿ ಕಂಡಿದ್ದೇನೆ. ವಿಕಾಸದ ಪ್ರಕ್ರಿಯೆಯಲ್ಲಿ ಈ ಭೌತಿಕ ತರಬೇತಿಯು ಸುಧಾರಿತ ಬದಲಾವಣೆಯನ್ನು ತರುವುದು (ಇತ್ತೀಚೆಗೆ ಭೌತಿಕದ ಪರಿವರ್ತನೆ ಬೇಗ ಬೇಗನೇ ಆಗುತ್ತಿದೆ. ಅದು ಆರಂಭವಾಗಿ ಇನ್ನೂ ಅರ್ಧ ಶತಮಾನ ಕೂಡ ಕಳೆದಿಲ್ಲ). ಇಂಥ ತರಬೇತಿಯು ಭೌತಿಕ ಶಾರೀರಿಕ ವಿಕಾಸದಲ್ಲಿ ಬದಲಾವಣೆಯನ್ನು ತರುವುದು; ಅಂದರೆ ನಮನಶೀಲತೆ ಹೆಚ್ಚುವುದು, ಹೊಂದಿಕೊಳ್ಳುವ ಗುಣಧರ್ಮ ಹೆಚ್ಚಾಗುವುದು, ಶರೀರದ ಎಲ್ಲ ಭಾಗಗಳಲ್ಲಿ ಸಮತೋಲ ಬೆಳೆಯುವುದು, ತಾಳ್ಮೆ, ಸಹನೆ, ಸಾಮರಸ್ಯ ಅಧಿಕವಾಗುವುವು. ಇದರಿಂದಾಗಿ ಅದು ಅತಿಮಾನಸಿಕ ಪ್ರಜ್ಞೆಯ ಯೋಗ್ಯ ಉಪಕರಣವಾಗುವುದು.

ಇದು ಪರಿವರ್ತನೆ: ಅತಿಮಾನಸಿಕವಾಗಿ ತಯಾರಾದ ಶರೀರದಲ್ಲಿ ಆ ಪ್ರಜ್ಞೆಯನ್ನು ಸರಿಯಾಗಿ, ಸಂಕಲ್ಪ ಪೂರ್ವಕವಾಗಿ ಬಳಸುವಂತಾಗುವುದು. ಶರೀರವು ತನ್ನ ಸಾಮರ್ಥ್ಯಕ್ಕೆ ತಕ್ಕ ಹಾಗೆ ಬೆಳೆಯುವುದರ ಜೊತೆಗೆ ಅದರ ಪ್ರತಿ ಜೀವಕಣದಲ್ಲಿಯೂ ಅತ್ಯುನ್ನತ ಶಕ್ತಿಗಳು ಸಾಧ್ಯವಾದ ಮಟ್ಟಿಗೆ ತುಂಬಿಕೊಳ್ಳಬೇಕು (ತಮ್ಮೆಡೆಗೆ ಕೈಮಾಡಿ ತೋರಿಸುತ್ತ "ಸದ್ಯಕ್ಕೆ ಈ ಕೆಲಸ ಇಲ್ಲಿ ನಡೆದಿದೆ" ಎಂದು ಹೇಳುತ್ತಾರೆ). ಶರೀರದೊಳಗೆ ಸ್ಥಾಪಿತವಾದ ಆ ಪ್ರಜ್ಞೆಯು ಸಾಕಷ್ಟು ಪ್ರಮಾಣದಲ್ಲಿದ್ದು ಶರೀರವನ್ನು ಆ ಶಕ್ತಿಯೇ ಚಾಲಿತಗೊಳಿಸುತ್ತಿದ್ದರೆ ಅತ್ಯುನ್ನತ ಪರಿವರ್ತನೆಯನ್ನು ತರಲು ಸಾಧ್ಯವಾಗುವುದು. ಅದರಿಂದ, ಸಾವಿನ ನಂತರ ಆಗುವ ಜೀವಕೋಶಗಳ ಕೊಳೆಯುವಿಕೆ decomposition of cells ಹಾಗೂ ಕೊಳೆಯ ಪ್ರಮಾಣ ಬಹಳಷ್ಟು ತಗ್ಗುವುದು. ಬಹಳಷ್ಟು ಅಂದರೆ, ಎಷ್ಟು ... ? ಅದನ್ನು ಇಷ್ಟೇ ಎಂದು ಹೇಳಲಾಗದು, ಅದಿನ್ನೂ ಅಜ್ಞಾತವಾಗಿದೆ.

ಇದು ಶ್ರೀ ಅರವಿಂದರು ಹೇಳುವ ಇಚ್ಛಿತ ಪ್ರಮಾಣದವರೆಗೆ ಜೀವಿತಾವಧಿಯ ಪ್ರಮಾಣದ ವೃದ್ಧಿ, ಅನಿರ್ದಿಷ್ಟ ಕಾಲಾವಧಿಯವರೆಗೆ ಜೀವಿಸುವ ಸಾಧ್ಯತೆಗೆ ಅನುಗುಣವಾಗಿದೆ.

ಆದರೆ, ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ ಮಧ್ಯಂತರದ ಕಾಲಾವಧಿಯೊಂದು ಇರಬೇಕು ಅನಿಸುತ್ತದೆ; ಸದ್ಯದ ಶರೀರದಿಂದ ಹೊಸದಾಗಿ ಹೆಚ್ಚು ಚೆನ್ನಾಗಿ ಸಿದ್ಧವಾದ ಶರೀರದೊಳಗೆ – ಕೇವಲ ಆಂತರಿಕವಾಗಿ ಅಲ್ಲ, ಬಾಹ್ಯ ಶರೀರ ಬದಲಾಗಬೇಕು, ಈಗ ಇಲ್ಲದಿರುವ ಕೆಲ ನಿರ್ದಿಷ್ಟ ಅಪೂರ್ಣ ಅಂಶಗಳು ಬೆಳವಣಿಗೆಯಾಗಬೇಕು, ನಾಲ್ಕು ಪ್ರಮುಖ ಗುಣಗಳು ಮೈಗೂಡಬೇಕು. ಅಂದಾಗ ಮಾತ್ರ ಆ ನಾಲ್ಕು ಗುಣಗಳು ಪರಿಪೂರ್ಣ ಪ್ರಜ್ಞಾಪರಿವರ್ತನೆಯ ಕಾರ್ಯವನ್ನು ಪೂರ್ಣವಾಗಿ ಸಾಧಿಸಬಲ್ಲವು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 17, 1965**

## ಅಮರತ್ವ ಎಂದರೆ ಏನು?

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

***ಸತ್ತ ನಂತರ ಮಾನಸಿಕ ವ್ಯಕ್ತಿತ್ವ ಉಳಿದುಕೊಳ್ಳುವುದು. ಅಮರತ್ವವಲ್ಲಾ, ಅದು ಕೂಡ ಸತ್ಯವಿದ್ದರೂ, ಆದರೆ ಎಚ್ಚೆತ್ತ ಸ್ಥಿತಿಯಲ್ಲಿ ಅಜಾತ ಮತ್ತು ಸಾವು ಇರದ ಆತ್ಮವನ್ನು ಹೊಂದಿರುವುದು ಮಾತ್ರ ದೇಹವು ಅದರ ಉಪಕರಣ ಮತ್ತು ನೆರಳು ಮಾತ್ರ.***

...ಆದಿ ಮತ್ತು ಅಂತ್ಯವಿರದ ಜೀವನವೇ ಅಮರತ್ವ, ಹುಟ್ಟಿರದ ಮತ್ತು ಸಾವು ಇರದ, ಅದು ದೇಹದ ಮೇಲೆ ಅವಲಂಬಿತವಿರದ, ಅದು ದೇಹದ ಮೇಲೆ ಅವಲಂಬಿತವಿರದೆ. ಅದು ಆತ್ಮದ ಜೀವನ, ಪ್ರತಿ ವೈಯಕ್ತಿಕ ಜೀವಿಯ ಪ್ರಮುಖ ಅಂಶ ಮತ್ತು ವಿಶ್ವಾತ್ಮಕ ಆತ್ಮದಿಂದ ಭಿನ್ನವಾದುದಲ್ಲಾ ಮತ್ತು ಈ ಪ್ರಮುಖ ಅಂಶ ವಿಶ್ವಾತ್ಮಕ ಆತ್ಮದೊಂದಿಗೆ ಏಕತ್ವದ ಭಾವ ಹೊಂದಿದೆ; ನಿಜ ಹೇಳಬೇಕೆಂದರೆ ಅದು ವಿಶ್ವಾತ್ಮಕ ಆತ್ಮದ ವ್ಯಕ್ತಿಗತ ಮತ್ತು ವೈಯಕ್ತಿಕಗೊಂಡಿದೆ ಮತ್ತು ಆದಿ ಅಂತ್ಯವಿಲ್ಲದ್ದು, ಹುಟ್ಟು ಮತ್ತು ಸಾವಿಲ್ಲ ಅದು ಬಹಿರಂಗವಾಗಿರುತ್ತೆ. ಅದು ಏನೆಂದರೆ ಅಮರತ್ವ. ನಾವು ಯಾವಾಗ ಆ ಆತ್ಮದ ಬಗ್ಗೆ ಪ್ರಜ್ಞಾವಂತರಾದಾಗ

ಅದರ ಶಾಶ್ವತ ಜೀವನ–ದೊಂದಿಗೆ ಪಾಲ್ಗೊಳ್ಳುತ್ತೇವೆ, ಮತ್ತು ಆದ ಕಾರಣ ನಾವು ಅಮರರಾಗುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/27–28**

ನಾವೆಲ್ಲಾ ಈ ರೀತಿ ಅಂದುಕೊಂಡು ತಪ್ಪು ಮಾಡುತ್ತೇವೆ – ನಂಬುವುದು – ಅಮರತ್ವವೇ ಗುರಿಯಾಗಿರಬೇಕು. ಅಮರತ್ವವೆನ್ನುವುದು ಬರೀ ಒಂದು ಪರಿಣಾಮ ಮಾತ್ರ... ಅದೊಂದು ಸ್ವಾಭಾವಿಕ ಪರಿಣಾಮ – ನೀವು ನಿಜವಾದ ಜೀವನ ಜೀವಿಸಿದ್ದೆ ಆದರೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಗಸ್ಟ್, 1964**

***ಸಾವು ಎಂಬುದು ಇಲ್ಲಾ. ಅಮರರು ಮಾತ್ರ ಸಾಯಲು ಸಾಧ್ಯ; ಸಾವಿರುವರು ಹುಟ್ಟುವುದಿಲ್ಲಾ ಅಥವಾ ಸಾಯುವುದಿಲ್ಲ.***

ಅಮರರು ಜೀವನದ ಸ್ಥಿತಿಯಿಂದ ಸಾವಿನ ಸ್ಥಿತಿಗೆ ಹೋಗಬಹುದು. (ಆದರೆ ನಾವು ತಿಳಿದುಕೊಂಡ "ಸಾವಲ್ಲ") "ಸಾಯಬಹುದು" ಎಂದರೆ "ಸ್ಥಿತಿಯನ್ನು ಬದಲಾಯಿಸಬಹುದು". ಅಮರರು ಈ ಸ್ಥಿತಿಯಿಂದ ಆ ಸ್ಥಿತಿಗೆ ಪುನಃ ಹೋಗಿ ಬರಬಹುದು. ನಾವದನ್ನು "ಸಾವು" ಎನ್ನಬಹುದು. ಆದರೆ ಅದಕ್ಕೆ ಜೀವನ ಮತ್ತು ಸಾವಿನೊಂದಿಗೆ ಏನೂ ಮಾಡಬೇಕಿಲ್ಲ. ಅವು ಸ್ಥಿತಿಗತಿಗಳ ಬದಲಾವಣೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 12, 1961**

**ಅಮರತ್ವವನ್ನು ಅರ್ಥಮಾಡಿಕೊಳ್ಳುವುದು**

"ಅಮರತ್ವ" ಶಬ್ದದ ಬಗ್ಗೆ ಸ್ವಲ್ಪ ತಪ್ಪು ತಿಳುವಳಿಕೆ ಇದೆ. ಅದೇನು ಹೊಸದಲ್ಲಿ; ಆ ತಪ್ಪು ಗ್ರಹಿಕೆ ಪುನಃ ಪುನಃ ಘಟಿಸಿದೆ. ಯಾರಾದರೂ ಅಮರತ್ವದ ಬಗ್ಗೆ ಮಾತಾಡಿದರೆ ಬಹಳಷ್ಟು ಜನ ಅನತ ಕಾಲ ದೇಹ ಉಳಿಯುವುದೇ ಅಮರತ್ವ ಎಂದು ಅರ್ಥೈಸಿದ್ದಾರೆ.

ದೇಹವು ಅನಿರ್ದಿಷ್ಟವಾಗಿ ಉಳಿಯಬಹುದು. ಒಂದೇನೆಂದರೆ, ಮೊದಲನೆಯದಾಗಿ ಅದು ಅಮರವಾದ ಆತ್ಮದೊಂದಿಗೆ ಸಂಪೂರ್ಣ ಪ್ರಜ್ಞೆಯೊಂದಿಗೆ ಒಂದಾಗಬೇಕು; ಅದೇ ಸಾಮರ್ಥ್ಯದಷ್ಟು ತನ್ನನ್ನು ಅದರೊಂದಿಗೆ

ಗುರುತಿಸಿಕೊಳ್ಳಬೇಕು. ವಿಶ್ವಾತ್ಮಕ ಚಲನೆಯನ್ನು ಅನುಸರಿಸಲು ಅದು ಕೂಡ ಸತತ ಬದಲಾವಣೆಗೊಳ್ಳುವ ಸತ್ಯೆಯನ್ನು ಹೊಂದಿರಬೇಕು. ಈ ದೇಹ ಬಹಳ ಕಾಲ ಉಳಿಯಬೇಕೆಂದರೆ, ಇದೊಂದು ಅನಿವಾರ್ಯ ನಿಯಮ. ಏಕೆಂದರೆ ದೇಹವು ಗಡುಸಾಗಿದೆ, ಏಕೆಂದರೆ ಅದು ಚಲನೆಯನ್ನು ಅನುಸರಿಸುವುದಿಲ್ಲ.

ಏಕೆಂದರೆ ತನ್ನನ್ನು ತಾನು ವಿಶ್ವಾತ್ಮಕ ಪರಿವರ್ತನೆಯಲ್ಲಿ ಗುರುತಿಸಿಕೊಂಡು ತನ್ನನ್ನು ತೀವ್ರವಾಗಿ ಬದಲಾಯಿಸಿಕೊಳ್ಳುವುದಿಲ್ಲ; ಅದು ಕೊಳೆಯುತ್ತದೆ ಮತ್ತು ಸಾಯುತ್ತದೆ. ಆದರೆ ಸ್ಥಿರತೆ, ಅದರ ಗಡುಸುತನ, ತನ್ನನ್ನು ತಾನು ಬದಲಾಯಿಸಿಕೊಳ್ಳಲಾರದ ಅಸಮರ್ಥತೆ, ಅದರ ನಾಶದ ಅವಶ್ಯಕತೆ ಆಗುತ್ತದೆ. ಕಾರಣ ಅದರ ವಸ್ತುಗಳು ಮೂಲ ಭೌತಿಕ ಸಾಮಾನ್ಯ ಸ್ಥರಕ್ಕೆ ಹಿಂದಿರುಗುತ್ತವೆ ಮತ್ತು ದೇಹವು ಹೊಸ ರೂಪದಿಂದ ನಿರ್ಮಾಣಗೊಂಡು, ಆ ರೀತಿಯಾಗಿ ಮುಂದೆ ಪ್ರಗತಿ ಹೊಂದುವ ಸಾಮರ್ಥ್ಯತೆಯನ್ನು ಪಡೆಯುತ್ತವೆ. ಆದರೆ ಸಾಮಾನ್ಯವಾಗಿ, ಅಮರತ್ವದ ಬಗ್ಗೆ ಆಲೋಚಿಸುತ್ತಾರೆ. ಅದಿನ್ನೂ ಸಾಧ್ಯವಾಗಿಲ್ಲವೆಂದು ಹೇಳದೆ ಇರಲಾರೆವು.

ಅದು ಸಾಧ್ಯವಿದೆಯೆಂದು ಶ್ರೀ ಅರವಿಂದರು ಹೇಳುತ್ತಾರೆ ಮತ್ತು ಅದು ಆಗಬಹುದು. ಆದರೆ ಅದಕ್ಕೆ ಒಂದು ಷರತ್ತು ಇಡುತ್ತಾರೆ: ದೇಹವು ಸುಪ್ರಮಾನಸಕರವಾಗಬೇಕು, ಅದಕ್ಕೆ ಸುಪ್ರಮಾನಸದ ಕೆಲವೊಂದು ಗುಣಗಳು ಇರಬೇಕು. ಅವು ನಮನಶೀಲತೆಯ ಗುಣಗಳು ಮತ್ತು ಸತತವಾದ ಪರಿವರ್ತನೀಯತೆ. ಯಾವಾಗ ಶ್ರೀ ಅರವಿಂದರು ದೇಹದ ಬಗ್ಗೆ ಬರೆಯುತ್ತಾರೆ.

“ಬರೀ ಒಂದು ಉಪಕರಣ ಮತ್ತು ಒಂದು ನೆರಳು” ಅವರು ಈ ಸದ್ಯದ ದೇಹದ ಬಗ್ಗೆ ಮಾತನಾಡುತ್ತಿದ್ದಾರೆ ಮತ್ತು ಬಹಳ ಕಾಲದವರೆಗೆ ಬಹುಶ ಹೀಗೆ ಇರುತ್ತದೆ. ಅದು ಆತ್ಮದ ಒಂದು ಉಪಕರಣ ಮಾತ್ರ ಆತ್ಮದ ಅಸ್ಪಷ್ಟ ಅಭಿವ್ಯಕ್ತತೆ, ಮತ್ತು ಒಂದು ನೆರಳು–ಒಂದು ನೆರಳು, ಏನೇ ಒಂದು ಅನಿಶ್ಚಿತ ಮತ್ತು ಅಸ್ಪಷ್ಟವಾದದ್ದು ಅದೇ ಶಾಶ್ವತವಾದ ಆತ್ಮದ ನಿಖರತೆ ಮತ್ತು ಸ್ಪಷ್ಟತೆಗೆ ಹೋಲಿಸಿದಾಗ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/28–29**

ಒಳ್ಳೆದು, ನಿಜ, ಎಲ್ಲಾ ಸಂಯೋಜನೆಗಳ ಹಿಂದೆ ಅಂತರಾತ್ಮವಿದೆ. ಈ ಮೂರರ ಸಂಯೋಜನೆಯುಳ್ಳ ಮಾನವ ಜೀವನ ಮತ್ತು ಪ್ರಜ್ಞೆ, ಅಂತರಾತ್ಮವು

ಅಮರವಾಗಿದೆ ಮತ್ತು ಇವುಗಳ ಹಿಂದೆ ಇದ್ದು ಬೆಂಬಲಿಸುತ್ತದೆ. ಅಂತರಾತ್ಮ ಇದ್ದ ಕಾರಣ ನಾವು ಸತತವಾಗಿ ಇರುವೆವು ಎಂಬ ಸಂವೇದನೆ ಇದೆ. ಇಲ್ಲವೆಂದರೆ, ನೀವು ಈಗ ಏನಿದ್ದಿರೊ ಮತ್ತು ಮೂರು ವರ್ಷದವರಿದ್ದಾಗ ಏನಿದ್ದಿರೊ ಹೋಲಿಸಿದರೆ, ನೀವು ಭೌತಿಕ, ಪ್ರಾಣದಿಂದಾಗಲಿ ಅಥವಾ ಮಾನಸಿಕವಾಗಿ ನಮ್ಮ ಎರಡು ಘಟ್ಟಗಳನ್ನು ಗುರುತಿಸಲಾಗುವುದಿಲ್ಲ. ಆ ರೀತಿಯಾದ ಹೋಲಿಕೆ ಎಂಬುದಿಲ್ಲ. ಆದರೆ ಅಂತರಾತ್ಮವು ಹಿಂದೆ ಇದ್ದು ಪ್ರಗತಿಗೆ ಬೆಂಬಲಿಸುತ್ತದೆ. ಜೀವಿಯ ಬೆಳವಣಿಗೆ ಮತ್ತು ಈ ಪ್ರಜ್ಞೆಗೆ ನಿರಂತತೆಯನ್ನು ಕೊಡುತ್ತದೆ. ನಾನು ಬೇರೆಯದಾಗಿ ಕಂಡರೂ ಕೂಡ ನಾನು ಒಂದೇ ಜೀವಿ ಎಂಬ ಭಾವನೆ ಇರುವುದು. ಕೇವಲ ಬೇರೆ ಕಂಡರೂ ತಡವಾಗಿ ನಾವು ನಮ್ಮನ್ನು ಸಾಕಷ್ಟು ನೋಡಿಕೊಂಡರೆ ಆ ವಯಸ್ಸಿನಲ್ಲಿ ಏನು ಮಾಡಿದ್ದೆನೊ ಅದನ್ನು ಈಗ ಮಾಡುವುದು ಪರಿಕಲ್ಪಿಸಲು ಸಾಧ್ಯವಿಲ್ಲ ಎನ್ನಿಸುವುದು. ಈಗ ಅದನ್ನು ಮಾಡಲು ಸಾಧ್ಯವಾಗದಷ್ಟು ವ್ಯಕ್ತಿಗತವಾಗಿ ಬೆಳೆದಿದ್ದೇನೆ ಎನಿಸುವುದು. ಆದಾಗ್ಯೂ ಕೂಡ, ಒಳಗಿರುವ ಅಮರವಾದ ಅಂತರಾತ್ಮದ ಪ್ರಜ್ಞೆ ಇರುವುದರಿಂದ, ಒಂದೇ ವ್ಯಕ್ತಿ ಆಗಲು ಇದ್ದಾನೆ, ಈಗಲೂ ಇದ್ದಾನೆ, ಮತ್ತೆ ಮುಂದೆಯೂ ಇರುತ್ತಾನೆ ಮತ್ತು ಹೆಚ್ಚು ಕಡಿಮೆ ಬೆಳವಣಿಗೆ ಮತ್ತು ಹೆಚ್ಚು ಕಡಿಮೆ ಪ್ರಜ್ಞೆಯ ಬದಲಾವಣೆಯ ಮೂಲಕ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/218–19**

**ಅಮರತ್ವದ ಅಮೃತ**

ಪ್ರತಿಯೊಂದು ಧರ್ಮವೂ ದೈವವನ್ನು ಸಮೀಪಿಸಲು ತನ್ನದೆ ಮಾರ್ಗವನ್ನು ಆರಿಸಿಕೊಳ್ಳುತ್ತದೆ ಮತ್ತು ಇದಕ್ಕಾಗಿ ಶ್ರೀ ಅರವಿಂದರು ಇವರನ್ನು ಭಿನ್ನವಾದ ಮಡಿಕೆಗಳಿಗೆ ಹೋಲಿಸುತ್ತಾರೆ. ಆದರೆ ಅವರು ಹೇಳುತ್ತಾರೆ. ನೀವು ಯಾವುದೇ ಮಾರ್ಗವನ್ನು ಅನುಸರಿಸಿ, ಗುರಿ ಮಾತ್ರ ಮುಖ್ಯವಾದದ್ದು, ಮತ್ತು ನೀವು ಯಾವುದೇ ಮಾರ್ಗವನ್ನು ಅನುಸರಿಸಿದರೂ ಗುರಿ ಒಂದೇ ಆಗಿರುತ್ತದೆ. ಯಾವುದೇ ಮಡಿಕೆಯಲ್ಲಿದ್ದರೂ ಅಮೃತ ಮಾತ್ರ ಒಂದೆ.

ಕೆಲವೊಬ್ಬರು ಹೇಳುವುದೇನೆಂದರೆ ಮಡಿಕೆಯ ಸ್ವಾದ, ನೀವು ಅನುಸರಿಸುವ ಮಾರ್ಗದ ಮೇಲೆ ಅಮೃತದ ರುಚಿ ಅವಲಂಬಿಸಿರುತ್ತದೆ. ಹೇಳಬೇಕೆಂದರೆ ನೀವು ದೈವದೊಂದಿಗೆ ಒಂದಾಗುವುದರ ಮೇಲೆ ಪರಿಣಾಮ ಬೀರುತ್ತೆ. ಶ್ರೀ ಅರವಿಂದರು

ಉತ್ತರಿಸುತ್ತಾರೆ: ಸಮೀಪಿಸುವ ಹಾದಿ ಬೇರೆ, ಪ್ರತಿಯೊಬ್ಬರು ತಮಗೆ ಇಷ್ಟವಾದದ್ದುನ್ನು ಆರಿಸಿಕೊಳ್ಳುತ್ತಾರೆ ಅಥವಾ ತನಗೆ ಒಗ್ಗುವ ರುಚಿಯನ್ನು, ಆದರೆ ಅಮೃತ ಕೂಡ, ದೈವದೊಂದಿಗೆ ಒಂದಾಗುವುದು, ಯಾವಾಗಲೂ ಅಮರತ್ವದ ಶಕ್ತಿಯನ್ನು ಉಳಿಸಿಕೊಳ್ಳುತ್ತದೆ.

ಈಗ ದೈವದೊಂದಿಗೆ ಒಂದಾಗುವುದೆಂದರೆ ನಾವು ಹೇಳುವುದು ಅಮರತ್ವದ ಪ್ರಜ್ಞೆಯನ್ನು ಗಳಿಸಿದ್ದೇವೆಂದು, ಅದರರ್ಥ ನಮ್ಮಲ್ಲಿರುವ ಪ್ರಜ್ಞೆಯು ಯಾವುದು ಅಮರತ್ವವಿದೆಯೋ ಅದರೊಂದಿಗೆ ಸೇರುತ್ತದೆ ಮತ್ತು ಕಾರಣ ತಾನು ಕೂಡ ಅಮರ ಎಂಬ ಸಂವೇದನೆ ಉಂಟಾಗುತ್ತದೆ. ನಮಗೆ ಅಮರತ್ವ ಇರುವ ಕ್ಷೇತ್ರದ ಬಗ್ಗೆ ಅರಿವುಂಟಾಗುತ್ತದೆ. ಅದರರ್ತ ನಮ್ಮ ಭೌತಿಕ ವಸ್ತು ಪರಿವರ್ತನೆಗೊಂಡಿದೆಯೆಂದು ಅರ್ಥವಲ್ಲ ಮತ್ತು ಅಮರವಾಗಿದೆ ಎಂದಲ್ಲಾ. ಅದಕ್ಕಾಗಿ ಬೇರೆ ವಿಧಾನವನ್ನು ಪಾಲಿಸಬೆಕಾಗುತ್ತದೆ. ನಾವು ಬರೀ ಆ ಪ್ರಜ್ಞೆಯನ್ನು ಪಡೆಯುವುದಲ್ಲಿ, ಆದರೆ ಅದನ್ನು ಭೌತಿಕ ಜಗತ್ತಿಗೆ ಇಳಿಸಿ ತರಬೇಕು ಮತ್ತು ಅದು ಭೌತಿಕೆ ಪ್ರಜ್ಞೆಯನ್ನು ಪರಿವರ್ತನೆಗಾಗಿ ಮಾತ್ರ ಕೆಲಸ ಮಾಡದೆ ಅದು ಭೌತಿಕ ವಸ್ತುವನ್ನು ಕೂಡ ಪರಿವರ್ತನೆ ಮಾಡಬೇಕು, ಅದು ಬಹಳ ಗಣನೀಯ ಕಾರ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/83–84**

## ಭೂಮಿಯ ಮೇಲೆ ಅಮರತ್ವದ ಪ್ರಕಟಣೆ

ಯಾವಾಗ ಮಾನವರ ಮೊದಲ ಸೃಷ್ಟಿಯಾಯಿತೊ, ಅವರನ್ನು ಕೂಡಿಸುವ ಅಂಶ ಅಹಂ ಆಗಿತ್ತು. ಅಹಂನ ಸುತ್ತಲೂ ಸುತ್ತು ಬೇರೆ ಬೇರೆ ಸ್ಥರದ ಜೀವಿಗಳ ಗುಂಪುಗಳಾದವು; ಆದರೆ ಈಗ ಅತೀಮಾನವ ಜೀವಿಯ ಹುಟ್ಟಿಗಾಗಿ ತಯಾರಿ ನಡೆಯುತ್ತಿದೆ. ಅಹಂ ಮಾಯವಾಗಬೇಕು, ಅದು ದೈವಿ ಮಧ್ಯ ಪ್ರವೇಶದಿಂದಾಗಿ ನಿಧಾನವಾಗಿ ರೂಪುಗೊಳ್ಳುತ್ತದೆ. ಇದರಿಂದಾಗಿ ದೈವವು ಮಾನವ ಜೀವಿಗಳಲ್ಲಿ ಪ್ರಕಟವಾಗಲು ಸಾಧ್ಯವಾಗುತ್ತಿದೆ.

ಅಂತರಾತ್ಮನ ಪ್ರಭಾವದಿಂದಾಗಿ ಮಾನವನಲ್ಲಿ ದೈವ ಪ್ರಕಟವಾಗುತ್ತಿದೆ ಮತ್ತು ಅದು ಅತಿಮಾನವತೆ ಬರಲು ಸಿದ್ಧತೆ ನಡೆಸುತ್ತದೆ.

ಅಂತರಾತ್ಮವು ಅಮರ ಮತ್ತು ಅಂತರಾತ್ಮದ ಮೂಲಕ ಅಮರತ್ವವು ಭೂಮಿಯ ಮೇಲೆ ಪ್ರಕಟವಾಗುವುದು.

ಆದ ಕಾರಣ ಮುಖ್ಯವಾಗಿ ನಮ್ಮ ಅಂತರಾತ್ಮವನ್ನು ಕಂಡುಕೊಳ್ಳುವುದು, ಅದರೊಂದಿಗೆ ಒಂದಾಗಬೇಕೆಂದು ಅದು ಅಹಂನ್ನು ಬದಲಿಸಲು ಅನುವು ಮಾಡಿಕೊಡಬೇಕು, ಅದು ಬದಲಾಗಬೇಕು ಅಥವಾ ಕಣ್ಮರೆಯಾಗಬೇಕು. ಇದು ಅದರ ಮೇಲಿರುವ ಒತ್ತಾಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/434 – ಶ್ರೀಮಾತೆ**

ಪ್ರಕೃತಿಯು ಜೀವಕ್ಕೆ ಸಾವಿರ ಪ್ರಶ್ನೆ ಸತತವಾಗಿ ಹಾಕುತ್ತದೆ ಮತ್ತು ಅದು ಇನ್ನೂ ಅದನ್ನು ಪಡೆದಿಲ್ಲವೆಂದು ನೆನಪು ಮೂಡಿಸುತ್ತದೆ. ಸಾವಿನ ಹಿಡಿತಕ್ಕೆ ಜೀವಿಯು ಸಿಗದಿದ್ದರೆ ಜೀವಿಯು ಅನಿಯುತವಾಗಿ ಅಪರಿಪೂರ್ಣ ಜೀವಿಯ ರೂಪದಲ್ಲಿ ಬಂಧಿಯಾಗಿ ಬಿಡುತ್ತಿತ್ತು. ತಾವು ಅನುಸರಿಸುವುದರಿಂದ ಪರಿಪೂರ್ಣ ಜೀವನಕ್ಕೆ ಅವನು ಎಚ್ಚೆತ್ತುಕೊಳ್ಳುತ್ತಾನೆ ಮತ್ತು ಅದರ ವಿಧಾನಗಳನ್ನು ಮತ್ತು ಸಾಧ್ಯತೆಗಳನ್ನು ಅನ್ವೇಶಿಸುತ್ತಾನೆ.

**– ಶ್ರೀಮಾತೆ**

## ವೈಜ್ಞಾನಿಕ ಮತ್ತು ಆದ್ಯಾತ್ಮಿಕ ದೃಷ್ಟಿ

ವಿಜ್ಞಾನವು ಬರೀ ಭೌತಿಕ ವಿಕಾಸವನ್ನು ಅಭ್ಯಾಸ ಮಾಡಿ ಅದರಿಂದ ಬಂದ ನಿಜಾಂಶ ಮಾತ್ರ ದಿಟವೆಂದು ಅದರಿಂದ ಹೊರತಾದ ಸಾಧ್ಯತೆಗಳನ್ನು ತೆಗೆದು ಹಾಕಿ ಬಂದಂತಹ ನಿರ್ಣಯವನ್ನು ಮತ್ತು ಅದೇ ತರಹದ ಆಧಾರದ ಮೇಲೆ ಆತ್ಮಕ್ಕೆ ಅಮರತ್ವವನ್ನು ನಿರಾಕರಿಸಲಾಯಿತು. ಮಾನಸಿಕ ಕ್ರಿಯೆಗಳು ಭೌತಿಕ ಜೀವನದ ನಂತರ ಬಂದದ್ದು ಮತ್ತು ಆ ಕ್ರಿಯೆಗಳು ಭೌತಿಕ ಆದರದ ಮೇಲೆ ಮುಂದುವರೆಯುತ್ತವೆಂದು ತರ್ಕ ಮಾಡಿದರೆ, ಯಾವಾಗ ಭೌತಿಕ ಜೀವನ ಸಾವೆಂಬುದರಿಂದ ಕೊನೆಗೊಳ್ಳುತ್ತದೆಯೊ, ಮಾನವನ ವ್ಯಕ್ತಿತ್ವವು ಯಾವುದು ಮಾನಸಿಕ ಕ್ರಿಯೆಯೋ ಅದು ಕೂಡ ಕೊನೆಗೊಳ್ಳಬೇಕಿತ್ತು. ಯಾವಾಗ ದೇಹದ ಅವಸಾನವಾಗುತ್ತದೆಯೋ ಆ ಆತ್ಮ ಕೂಡ ಅವಸಾನವಾಗುತ್ತದೆ. ಅದು ದೇಹವನ್ನು ಬಿಟ್ಟಿರಲಾರದು ಯಾವ ರೀತಿ ಗಿಡದ ಮೇಲೆ ಬೆಳೆದ ಹೂ ಉಳಿಯಲಾರದೋ ಹಾಗೆ ಅಥವಾ ಬುನಾದಿ ನಾಶವಾದ ಮೇಲೆ ಮನೆ ಉಳಿಯಲಾರದೋ ಹಾಗೆ. ದೇಹವು ಕಾಂಡ, ಆತ್ಮವು ಹೂ; ದೇಹವು ತಳಹದಿ,

ಆತ್ಮವು ಹಗುರ ಮತ್ತು ತಾತ್ಕಾಲಿಕ ಮೇಲು ಕಟ್ಟಡ. ಇವೆಲ್ಲವಕ್ಕೂ ಹಿಂದು ವಿಚಾರ ನೇರವಾಗಿ ಅಲ್ಲಗಳೆಯುತ್ತದೆ. ಅದು ಯಾವ ರೀತಿ ಭೌತಿಕ ಪ್ರಕೃತಿಯನ್ನು ಅಭ್ಯಾಸ ಮಾಡಿದೆಯೋ ಹಾಗೆ ಮಾನಸಿಕ ಜೀವನವನ್ನು ಕೂಲಂಕುಶವಾಗಿ ಅಭ್ಯಾಸ ಮಾಡಬಹುದೆಂದು ಕಂಡುಕೊಂಡಿದೆ ಮತ್ತು ತನ್ನ ಅನ್ವೇಷಣೆಯ ಆಧಾರದ ಮೇಲೆ ಅದು ಏನೆಂದು ಘೋಷಿಸುತ್ತದೆಯೆಂದರೆ, ಆತ್ಮ ದೇಹಕ್ಕಿಂತ ಮುಂಚೆ ಮತ್ತು ತದನಂತರವು ಇರುತ್ತದೆ. ಅದರ ಪ್ರಕಾರ ಮಾನಸಿಕ ಕ್ರಿಯಗಳಿಂದ ಭೌತಿಕ ಜೀವನ ನಂತರದ್ದು ಮತ್ತು ತಾತ್ಕಲಿಕವಾದದ್ದು ದೇಹವು ಹೂ, ಆತ್ಮವು ಕಾಂಡ, ಆತ್ಮವು ತಲಹದಿ ತಳಹದಿ. ದೇಹವು ದುರ್ಬಲ ಮತ್ತು ಅಶಾಶ್ವತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/236–37**

## ನಮ್ಮೊಳಗಿರುವ ಅಮರವಾದ ಆತ್ಮ

ಆತ್ಮವು, ಜೀವನ ಮತ್ತು ಭೌತಿಕದಲ್ಲಿ ಇರುವ ಅಗ್ನಿಯ–ಕಣ ಎನ್ನಬಹುದು. ಇದೊಂದು ಹೋಲಿಕೆ. ಅದನ್ನು ಪ್ರಜ್ಞೆಯ ಕಿಡಿ ಅಲ್ಲವೆಂದು ವಿವರಿಸಲಾಗುತ್ತದೆ. ಮಾನಸಿಕವಾಗಿ, ಪ್ರಾಣಕವಾಗಿ, ಭೌತಿಕ ಪ್ರಜ್ಞೆ ಇರುತ್ತದೆ. ಅಂತರಾತ್ಮದ ಪ್ರಜ್ಞೆಗಿಂತ ಭಿನ್ನ. ಅಂತರಾತ್ಮದ ಅಸ್ತಿತ್ವ ಮತ್ತು ಪ್ರಜ್ಞೆ ಅವು ಒಂದೇ ಅಲ್ಲ. ಯಾವಾಗ ಆತ್ಮ ಅಥವಾ ದೈವೀ ಅಗ್ನಿಯ–ಕಣವಾಗಿರುತ್ತದೆಯೋ ಆಗ ವೈಯಕ್ತಿಕ ಅಂತರಾತ್ಮದ ಬೆಳವಣಿಗೆ ಪ್ರಾರಂಭವಾಗುತ್ತದೆ. ಆ ವೈಯಕ್ತಿಕ ಅಂತರಾತ್ಮವನ್ನು **ಅಂತರಾತ್ಮ ಸತ್ತೆ**ಯೆಂದು ಕರೆಯುಬಹುದು. ಪ್ರಾಣ ಮತ್ತು ಮನಸ್ಸು ಸಂಯೋಜನೆಗೊಂಡು ಬೆಳೆಯುವ ಮುಂಚೆ ಏನೋ ಒಂದು ದೈವದ್ದು ಕೆಳಗೆ ಇಳಿದು, ಒಂದು ದೈವೀ ತತ್ವವು ಈ ವಿಕಾಸದಲ್ಲಿ ಭಾಗವಹಿಸಿ – ವೈಯಕ್ತಿಕ ವಿಕಾಸದಲ್ಲಿ ಭಾಗವಹಿಸಿ ಅಜ್ಞಾನದಿಂದ ಜ್ಞಾನಕ್ಕೆ ಕರೆದೊಯ್ಯುವುದು. ಇದು ವಿಕಾಸದ ಹಾದಿಯಲ್ಲಿ ವೈಯಕ್ತಿಕ ಅಂತರಾತ್ಮ ಅಥವಾ ವೈಯಕ್ತಿಕ ಆತ್ಮವನ್ನು ರೂಪಗೊಳಿಸುತ್ತದೆ, ಅದು ಜೀವನದಿಂದ ಜೀವನಕ್ಕೆ ಮನ–ಪ್ರಾಣ–ದೇಹವನ್ನು ಉಪಕರಣಗಳನ್ನಾಗಿಸಿ ಉಪಯೋಗಿಸಿಕೊಂಡು ಬೆಳೆಯುತ್ತದೆ. ಆ ಆತ್ಮವು ಅಮರವಾಗಿದೆ, ಬೇರೆಯದೆಲ್ಲಾ ವಿಘಟಿಸುತ್ತದೆ. ಅದು ಜೀವನದಿಂದ ಜೀವನಕ್ಕೆ ಸಾರ ರೂಪವಾದ ಅನುಭವಗಳನ್ನು ತೆಗೆದುಕೊಂಡು ಹೋಗಿ, ವೈಯಕ್ತಿಕ ವಿಕಾಸನವನ್ನು ನಿರಂತರವಾಗಿಡುತ್ತದೆ. ಅದು ಸಂಪೂರ್ಣ ಪ್ರಜ್ಞೆ , ಮಾನಸಿಕ–ಪ್ರಾಣಿಕ–ಭೌತಿಕ

ಕೂಡ. ಇವೆಲ್ಲವೂ ಉನ್ನತಕ್ಕೆ ಏರಿ ಮತ್ತು ಉನ್ನತ ಪ್ರಜ್ಞೆಗೆ ಸೇರಬೇಕು ಮತ್ತು ಒಂದು ಸಲ ಈ ರೀತಿ ಕೂಡಿಕೊಂಡರೆ, ಉನ್ನತವಾದ ಅವುಗಳೊಂದಿಗೆ ಅವತರಣಗೊಳ್ಳಬೇಕು. ಅಂತರಾತ್ಮ ಇವೆಲ್ಲವುಗಳ ಹಿಂದೆ ಇದ್ದು ಮತ್ತು ಬೆಂಬಲ ನೀಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/117–18**

ಅದು ದೇಹದ ಅಮರತ್ವವಲ್ಲಾ, ಆದರೆ ದೇಹದಲ್ಲಿರುವ ಅಮರತ್ವದ ಪ್ರಜ್ಞೆಯ ಅಧಿಮಾನಸವು ಭೌತಿಕದೊಳಗೆ ಇಳಿದು ಬರಬಹುದು, ಅಥವಾ ಭೌತಿಕ ಮನಸ್ಸಿನೊಳಗೆ ಅಥವಾ ಮಾರ್ಪಾಟುಗೊಂಡ ಸುಪ್ರಮಾನಸ–ಬೆಳಕು ಭೌತಿಕ ಮನಸ್ಸಿನ ಪ್ರಜ್ಞೆಗೆ ಸ್ಪರ್ಶ ಮಾಡಬಹುದು. ಇವೆಲ್ಲಾ ಪ್ರಾಥಮಿಕ ಹಂತದ ತೆರೆಯುವಿಕೆಗಳು. ಆದರೆ ಈ ಸುಪ್ರಮಾನಸವು ಭೌತಿಕದಲ್ಲಿ ಸಾರ್ಥಕತೆಯನ್ನು ಹೊಂದಿರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/275 – ಶ್ರೀ ಅರವಿಂದರು**

ನಮ್ಮ ಅಂತರಂಗದಲ್ಲಿರುವ ಪರಮಾತ್ಮನಡೆಗೆ ತಲುಪಿದರೆ, ನಾವು ಮುಕ್ತರಾಗುತ್ತವೆ. ಜಗತ್ತಿನ ಬಂಧನದಿಂದ ಮತ್ತು ಸಾವಿನ ದವಡೆಯಿಂದ ಬಿಡುಗಡೆಯಾಗುತ್ತದೆ. ದೇವರೆಂದರೆ ಸ್ವಾತಂತ್ರ್ಯ, ದೇವರೆಂದರೆ ಅಮರತ್ವ. ಸಾವನ್ನು ದಾಟುವುದರಿಂದ ನಾವು ಅಮರತ್ವವನ್ನು ಸುಖಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/304 – ಶ್ರೀ ಅರವಿಂದರು**

# ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'

– ಅನುವಾದ: ಜಾನ್ವಿ

## 12

## ಅಧ್ಯಾಯ – 11

## ಕರ್ಮ ಮತ್ತು ಯಜ್ಞ

ಗೀತೆಯ ಎರಡನೆಯ ಅಧ್ಯಾಯದ ಉತ್ತರಾರ್ಧದಲ್ಲಿ ಬುದ್ಧಿ ಯೋಗ ಹಾಗೂ ಅದರ ಅತ್ಯುನ್ನತ ಹಂತವಾದ ಬ್ರಾಹ್ಮೀ ಸ್ಥಿತಿಯನ್ನು ಕುರಿತು ಸಾಕಷ್ಟು ಹೇಳಲಾಗಿದೆ. ಅದರಲ್ಲಿ ಗೀತೆಯ ಬೋಧನೆಯ ಬಹು ಭಾಗವು ಬೀಜ ರೂಪದಲ್ಲಿ ಅಡಕವಾಗಿದೆ. ನಿಷ್ಕಾಮ ಕರ್ಮ, ಸಮತೆ, ಬಾಹ್ಯ ಸನ್ಯಾಸದ ನಿರಾಕರಣೆ, ಈಶ್ವರ ಪ್ರೇಮ, ಭಕ್ತಿ ಇವನ್ನೆಲ್ಲ ಅಲ್ಲಿ ಚೆನ್ನಾಗಿ ನಿರೂಪಿಸಲಾಗಿದೆ. ಆದರೂ ಸಹ ಅವುಗಳ ಅಸಂದಿಗ್ಧ ನಿರೂಪಣೆ ಇಲ್ಲ, ತುಸು ಅಸ್ಪಷ್ಟತೆ ಇದೆ. ಅಲ್ಲಿ ಹೆಚ್ಚು ಒತ್ತುಕೊಟ್ಟು ಹೇಳಿರುವುದು, ಸಾಮಾನ್ಯ ಮಾನವೀಯ ಸ್ತರದ ಚಟುವಟಿಕೆಗಳಿಂದ ಸಂಕಲ್ಪ ಪೂರ್ವಕವಾಗಿ ಹಿಂದೆ ಸರಿಯುವುದು, ಬಯಕೆಗಳಿಂದ ಮಾನವನ ಸಾಮಾನ್ಯತೆ ಎಲ್ಲ ಕ್ರಿಯೆಗಳ ಪ್ರೇರಣೆಯಾದ, ಸಂಚಾಲಕವಾದ ಇಂದ್ರಿಯ ಸಂವೇದನೆಯ ಭೋಗಾಪೇಕ್ಷೆಯಿಂದ ದೂರವಾಗುವುದು, ಮಾನವನು ತನ್ನ ಆವೇಶಪರ ಹಾಗೂ ಅಜ್ಞಾನ ಪ್ರವೃತ್ತಿಯ ಕಾರ್ಯಗಳನ್ನು ತ್ಯಾಗ ಮಾಡುವುದು ಹಾಗೂ ಕ್ಷೋಭೆಗೊಳಪಡಿಸಬಹುದಾದ ಎಲ್ಲ ಸಂಗತಿಗಳನ್ನು ದೂರೀಕರಿಸುವುದು ಹಾಗೂ ಕೊನೆಗೆ ವಾಪನಾಮುಕ್ತ ಶಾಂತ ಏಕತೆ ಮತ್ತು ಪವಿತ್ರವಾದ ಬ್ರಾಹ್ಮೀ ಏಕತೆಯ ಸ್ಥಿತಿಯನ್ನು ಪಡೆಯುವುದು. ಈ ವಿಷಯಗಳ ಮೇಲೆ ಗೀತೆಯು ಅಲ್ಲಿ ಹೆಚ್ಚು ಒತ್ತು ನೀಡುತ್ತದೆ. ಅರ್ಜುನನಿಗೆ ಇದೆಲ್ಲ ತಿಳಿದಿದೆ. ಅವನಿಗೆ ಇದೇನೂ ಗೊತ್ತಿಲ್ಲದ ವಿಷಯವೇನಲ್ಲ. ಆ ಕಾಲದಲ್ಲಿ ಜ್ಞಾನ ಯೋಗ ಹಾಗೂ ಜೀವನ ವಿಮುಖತೆಯ ಸಿದ್ಧಾಂತ ತುಂಬ ಪ್ರಚಲಿತವಿತ್ತು. ಜೀವನ, ಜೀವನ ಪರಿಪೂರ್ಣತೆಯ ಮಾರ್ಗ ಇದೇ ಎಂಬ ಅರಿವು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿತ್ತು. ಆ ಕಾಲದಲ್ಲಿನ ಗುರುಕುಲಗಳಲ್ಲಿ ಎಲ್ಲರಿಗೂ ಸುಮಾರಾಗಿ ಈ ಪಾಠ ಆಗಿರುತ್ತಿತ್ತು. ಜ್ಞಾನ ಯೋಗದ ಸಾಧಕನಾದವನು ಸಾಮಾನ್ಯ ಜೀವನ ಮತ್ತು ಸಾಮಾನ್ಯ ಕ್ರಿಯೆಗಳನ್ನು ತ್ಯಾಗ ಮಾಡಬೇಕು ಎಂಬ ಸಂಗತಿ ಆ ಕಾಲದ ಎಲ್ಲರಿಗೂ ತಿಳಿದ ಸಂಗತಿಯೇ ಆಗಿತ್ತು.

ಇಂದ್ರಿಯ ಲಾಲಸೆ, ಭೋಗ, ವಾಸನೆ ಇವುಗಳಿಂದ ದೂರ ನಿಲ್ಲಬೇಕು, ಮಾನವನಾದವನು ಪರಮ ಪುರುಷನಾದ ಪರಮಾತ್ಮನೆಡೆಗೆ ಮುಖ ಮಾಡಬೇಕು. ಅವನ ಎಲ್ಲ ಕೆಲಸಗಳು ಆ ನಿಮಿತ್ತ ಕೇಂದ್ರಿತವಾಗಬೇಕು. ನಿತ್ಯನೂ ಏಕೈಕನೂ ಆದ ಪರಮ ಪುರುಷನು ಅಚಲನೂ, ಸ್ಥಿರನೂ, ಲಕ್ಷ್ಮಣ ರಹಿತ ಪರಬ್ರಹ್ಮನೇ ಆಗಿದ್ದು ಅವನ ಬಗ್ಗೆ ಅರಿತುಕೊಳ್ಳುವುದೇ ಏಕೈಕ ಜ್ಞಾನದ ಬೀಜ. ಇಲ್ಲಿ ಕರ್ಮಗಳಿಗೆ ಸ್ಥಾನವಿಲ್ಲ. ಏಕೆಂದರೆ ಕಾರ್ಯಗಳು ಅಜ್ಞಾನದ ಕ್ಷೇತ್ರಕ್ಕೆ ಸಂಬಂಧಿಸಿದವುಗಳು – ಕರ್ಮಗಳು ಜ್ಞಾನಕ್ಕೆ ವಿರೋಧ. ಅವುಗಳ ಮೂಲ ಬೀಜವೇ ವಾಸನೆಗಳು, ಅವುಗಳ ಫಲವೇ ಬಂಧನ ಕಾರಕ – ಇದು ಸಂಪ್ರದಾಯ ತಾತ್ವಿಕ ವಿಚಾರಧಾರೆ. ಶ್ರೀಕೃಷ್ಣನೂ ಇದನ್ನು ಒಪ್ಪಿಕೊಂಡ ರೀತಿಯಲ್ಲೇ ಮಾತನಾಡುತ್ತಾನೆ. ಬುದ್ಧಿ ಯೋಗ ಅಥವಾ ಜ್ಞಾನ ಯೋಗ ಹೇಳುವಾಗ, ಕರ್ಮಗಳ ಶ್ರೇಣಿ ಜ್ಞಾನಕ್ಕಿಂತ ಬಹಳ ಕಡಿಮೆ ಎಂದೇ ಹೇಳುತ್ತಾನೆ. ಆದರೆ ಕರ್ಮಗಳನ್ನು ಯೋಗದ ಭಾಗವಾಗಿ ಮಾಡಲು (ಅವನೇ) ವಿಧಿಸುತ್ತಾನೆ. ಅವನ ಈ ಬೋಧನೆಯಲ್ಲಿ ತುಸು ದ್ವಂದ್ವ ಕಾಣುತ್ತದೆ, ಅಸ್ಪಷ್ಟತೆ, ಸಂದಿಗ್ಧತೆ ತೋರುತ್ತದೆ. ಅಷ್ಟೇ ಅಲ್ಲ; ಕೆಲ ಕಾಲವಾದರೂ ನಿರ್ದಿಷ್ಟ ಕರ್ಮಗಳು ಮುಂದುವರಿಯಲೇಬೇಕು, ಆಕ್ಷೇಪ ಮಾಡಲಾಗದಂಥ ಕರ್ಮಗಳಾದರೂ ಸ್ವಲ್ಪ ಕಾಲ ಮುಂದುವರಿಯಲೇಬೇಕು, ಮುಂದುವರಿಯುತ್ತವೆ ಕೂಡ, ಆದರೆ ಇಲ್ಲಿ ಕರ್ಮಗಳು ಜ್ಞಾನಕ್ಕೆ ವಿರುದ್ಧವೆಂದೋ ಅಸಂಗತವೆಂದೋ ಭಾವಿಸಲಾಗಿದೆ. ಆತ್ಮಾನಂದದಲ್ಲಿ ಮುಳುಗಿದ ಶಾಂತ, ಅಚಲವಾಗಿರುವ ಆತ್ಮಕ್ಕೆ(ಜೀವಕ್ಕೆ) ಕರ್ಮಗಳು ವಿರೋಧವೇ. ಇಲ್ಲಂತೂ (ಕುರುಕ್ಷೇತ್ರದಲ್ಲಿ) ಭಯಾನಕ, ಹಿಂಸಾತ್ಮಕ ರಾಕ್ಷಸೀ ರಕ್ತಪಾತದ ಯುದ್ಧದಂಥ ಭೀಕರ ಕರ್ಮವನ್ನು ಮಾಡಲು ಅರ್ಜುನನಿಗೆ ಶ್ರೀಕೃಷ್ಣನೇ ಪ್ರೇರೇಪಿಸುತ್ತಾನೆ. ಅದೂ ಹೇಗೆಂದರೆ, ಆಂತರಿಕ ಶಾಂತಿ, ಸಮಾಧಾನ, ನಿಷ್ಕಾಮ, ನಿಸ್ಸಂಗ ಕರ್ಮ, ಸಮತೆ, ಬ್ರಾಹ್ಮೀ ಸ್ಥಿತಿಯಲ್ಲಿ ನಿಂತು ಯುದ್ಧ ಮಾಡುವಂತೆ ಶ್ರೀಕೃಷ್ಣ ಹೇಳುತ್ತಾನೆ. ಇದು ತೀರ ವಿರುದ್ಧ ಹೇಳಿಕೆ! ಅರ್ಜುನನಿಗೆ ಗೊಂದಲವುಂಟಾಗುತ್ತದೆ, "ಸಂದಿಗ್ಧಮಯ ವಾಕ್ಯಗಳಿಂದ, ಹೇಳಿಕೆಯಿಂದ–ಬುದ್ಧಿಂಮೋಹಯಸೀವಮೇ– ನನ್ನಲ್ಲಿ ಗೊಂದಲವುಂಟಾಗುತ್ತಿದೆ, ನನಗೆ ಏನು ಮಾಡಬೇಕೆಂಬುದೇ ಅರ್ಥವಾಗುತ್ತಿಲ್ಲ." ಮಾನವನಿಗೆ ಒಂದೇ ಒಂದು ನೇರವಾದ ದಾರಿ ಬೇಕು. ಒಂದು ಅದೋ, ಇಲ್ಲವೇ ಇದೋ ಮಾನವನ ಬುದ್ಧಿಗೆ ದ್ವಂದ್ವ ವಾಕ್ಯ ಹಿಡಿಸದು, ನೇರ ನುಡಿ, ನೇರ ಮಾತು ಬೇಕು. ಆದ್ದರಿಂದ "ಶ್ರೀಕೃಷ್ಣನೇ ನೀನೇ

ನಿಶ್ಚಯಪೂರ್ವಕವಾಗಿ ಹೇಳು, ನಾನೇನು ಮಾಡಲಿ? ಏನು ಮಾಡುವುದರಿಂದ ನನಗೆ ಶ್ರೇಯಸ್ಸಾದೀತು. ವಿಧಾಯಕ ಹಾಗೂ ಅನಿವಾರ್ಯತೆಯ ವಿಚಾರ ಪ್ರಣಾಳಿಕೆ ಬೆಳೆದು ಬಂದಿದೆ.

ಶ್ರೀಗುರುವಾದ ಶ್ರೀಕೃಷ್ಣನು ಮುಕ್ತಿಯ ಎರಡು ಬಗೆಯ ಸಾಧನೆಗಳನ್ನು ಮೊದಲು ವಿವೇಚನೆ ಮಾಡುತ್ತಾನೆ. ಎರಡೂ ಭಿನ್ನವಾದ ದಾರಿಗಳು; ವಿಭಿನ್ನ ಸ್ವಭಾವದ ಜನರು ವಿಭಿನ್ನವಾದ ದಾರಿಗಳನ್ನು ಸರಿಸುವುದು ಸಹಜವೇ. ಒಂದು ಜ್ಞಾನ ಯೋಗ. ಇನ್ನೊಂದು ಕರ್ಮ ಯೋಗ. ಮೊದಲನೆಯದರಲ್ಲಿ ಕರ್ಮಗಳು ಮೋಕ್ಷಕ್ಕೆ ಅಡ್ಡಿಯೆಂದು ಭಾವಿಸಿ ಕರ್ಮ ಸನ್ಯಾಸವನ್ನು ಆಚರಿಸಲು ಹೇಳಲಾಗುವುದು – ಶ್ರೀಕೃಷ್ಣನು ಇವೆರಡರ ನಡುವೆ ದೃಢವಾದ ಸಮನ್ವಯವನ್ನೇನೂ ಮಾಡುವುದಿಲ್ಲ. ಆ ರೀತಿ ಎರಡರಲ್ಲೂ ಹೊಂದಾಣಿಕೆ ಮಾಡಬಹುದಾದ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಬದಲಾಗಿ ಸೂಕ್ಷ್ಮವಾಗಿ ಹೇಳುವುದೇನೆಂದರೆ ಸಾಂಖ್ಯರು ಹೇಳುವ ಕರ್ಮ ಸನ್ಯಾಸವು, ಭೌತಿಕವಾಗಿ ಕರ್ಮ ಮಾಡಲು ಹಿಂದೆ ಸರಿಯುವುದು ಒಂದೇ ದಾರಿಯಲ್ಲ ಅಷ್ಟೇ ಅಲ್ಲ ಅದೇ ಶ್ರೇಷ್ಠವಾದ ದಾರಿಯೂ ಅಲ್ಲ ಎಂದು ಹೇಳುತ್ತಾನೆ. ನೈಷ್ಕರ್ಯ, ಶಾಂತವಾಗಿ ಎಲ್ಲ ಕರ್ಮಗಳನ್ನು ತ್ಯಾಗ ಮಾಡಿಬಿಡುವುದು ಪುರುಷನ ಅಥವಾ ಆತ್ಮದ ಕರ್ತವ್ಯವೇ; ಏಕೆಂದರೆ ಎಲ್ಲ ಕಾರ್ಯಗಳನ್ನು, ಚಟುವಟಿಕೆಗಳನ್ನು ಮಾಡುವುದು ಪ್ರಕೃತಿಯೇ; ಪುರುಷನು ಪ್ರಕೃತಿಯ ಈ ಕಲಾಪಗಳಲ್ಲಿ ಸಿಕ್ಕು ಬೀಳದೇ, ಅವುಗಳನ್ನು ಗೆದ್ದು ಮೇಲಕ್ಕೇರಬೇಕು. ಪ್ರಕೃತಿಯ ಕಾರ್ಯಗಳಿಗೆ ವೀಕ್ಷಕವಾಗಿ ನಿಲ್ಲಬೇಕು, ಆದರೆ ಅವುಗಳ ಮೋಹದಲ್ಲಿ ಬೀಳಬಾರದು. ತತ್–ಪ್ರಕೃತಿಯ ಕೆಲಸಗಳಿಂದ ದೂರಾಗುವುದಲ್ಲ – ಬದಲಾಗಿ ಪ್ರಕೃತಿಯ ಚಟುವಟಿಕೆಗಳಿಂದ ಅಬಂಧಿತವಾಗಿ ಉಳಿಯಬೇಕು. ಇದೇ ಆತ್ಮದ ನೈಷ್ಕರ್ಯ, ಪ್ರಕೃತಿಯ ಕ್ರಿಯೆಗಳಲ್ಲಿ ಭಾಗಿಯಾಗದೇ ಉಳಿದುಬಿಡುವುದರಿಂದ ನೈಷ್ಕರ್ಯ, ಸಿದ್ಧಿಸುವುದಿಲ್ಲ. ಕೇವಲ ಕರ್ಮಗಳನ್ನು ಬಿಟ್ಟು ಬಿಟ್ಟರೆ ಸಾಲದು, ಅದೇ ಏಕೈಕ ಮಾರ್ಗ ಅಥವಾ ಸಾಧನೆ ಅಲ್ಲ – "ಕರ್ಮಗಳನ್ನು ಮಾಡದೇ ಹಾಗೆಯೇ ಸುಮ್ಮನಿದ್ದು ಬಿಡುವುದು ಪರಿಪೂರ್ಣತೆಯನ್ನು ತಂದುಕೊಡುವುದಿಲ್ಲ. ಸಿದ್ಧಿ ಆಗಬೇಕಾದರೆ ಯೋಗದ ಆತ್ಮ ನಿಯಂತ್ರಣದ ಸೂತ್ರಗಳನ್ನು ಪೂರ್ಣ ಶ್ರದ್ಧೆಯಿಂದ ಮಾಡಿದ್ದೇ ಆದರೆ ಪರಿಪೂರ್ಣ ಸ್ಥಿತಿ ಪ್ರಾಪ್ತವಾಗುವುದು."

ಕರ್ಮ ಸನ್ಯಾಸವೊಂದೇ ಮೋಕ್ಷದ ಮಾರ್ಗವಾಗಿರಲಿಕ್ಕಿಲ್ಲ ನಿಜ. ಆದರೆ ಅದು ಒಂದು ಅವಶ್ಯಕವಾದ ಅನಿವಾರ್ಯವಾದ ಉಪಾಯವಾದರೂ ಆಗಿರಲೇ ಬೇಕಲ್ಲವೇ? ಏಕೆಂದರೆ, ಪ್ರಕೃತಿಯ ಕಾರ್ಯಗಳು ಹಾಗೆಯೇ ಎಂದಿನಂತೆ ಮುಂದುವರಿದದ್ದೇ ಆದರೆ, ಅವುಗಳಲ್ಲಿಯೇ ಮುಳುಗಿರುವ ಜೀವವು(ಆತ್ಮವು) ತಾನಾಗಿ ಹೊರಬರುವುದಾದರೂ ಹೇಗೆ? ನಾನು ಯುದ್ಧ ಮಾಡುತ್ತಲೇ ನನ್ನ ಆತ್ಮದಲ್ಲಿ ನಾನು ವೈಯಕ್ತಿಕವಾಗಿ ಯುದ್ಧ ಮಾಡುತ್ತಿಲ್ಲ, ನನಗೆ ಗೆಲುವು ಬೇಕಿಲ್ಲ, ಸೋಲು–ಗೆಲುವುಗಳು ನನ್ನನ್ನು ಬಾಧಿಸುವುದಿಲ್ಲವೆಂಬ ಭಾವನೆ ತಾಳುವುದು ಹೇಗೆ? ಇದು ಸಾಂಖ್ಯರ ಸಿದ್ಧಾಂತವೇ – ಪ್ರಕೃತಿಯ ಚಟುವಟಿಕೆಗಳಲ್ಲಿ ಮುಳುಗಿರುವ ಮಾನವನ ಬುದ್ಧಿಯು ಅಹಂಕಾರಾವೃತವಾಗಿ ಬಿಡುತ್ತವೆ, ಅಜ್ಞಾನ, ಅವಿದ್ಯೆ, ವಾಸನೆಗಳು ಇವುಗಳಲ್ಲಿ ಅಲುಕಿದ ಅದು ಕರ್ಮಗಳಿಗೆ ಬದ್ಧವಾಗುತ್ತದೆ. ಬುದ್ಧಿಯು ಹಿಂದೆ ಸರಿದು ನಿಂತರೆ, ಕರ್ಮಗಳಿಂದ ವಿಮುಖವಾದರೆ, ಕರ್ಮಗಳು ಸ್ತಬ್ಧವಾಗುವುದು, ಆಶೆ, ಬಯಕೆ, ವಾಸನೆಗಳ ರಾಹಿತ್ಯವಾಗಿ ಕರ್ಮಗಳು ನಿವೃತ್ತವಾಗುವುದು. ಆದ್ದರಿಂದ ಜೀವನವನ್ನೇ ತ್ಯಾಗ ಮಾಡುವುದು, ಕರ್ಮಗಳಿಂದ ನಿವೃತ್ತಿ ಹೊಂದುವುದು ಇದೆಲ್ಲ ಅವಶ್ಯವಾದ ಭಾಗವೇ; ಕೊನೆಗೆ ಅನಿವಾರ್ಯವಾದ ಕ್ರಮವೇ – ಆದರೆ ಇದು ಮೋಕ್ಷದ ಕೊನೆಯ ಹಂತ, ಕೊನೆಯ ಮೆಟ್ಟಿಲು – ಅರ್ಜುನನೇನೂ ಇದನ್ನೇನೂ ನೇರವಾಗಿ ಹೇಳಲಿಲ್ಲ. ಆದರೆ ಅವನ ಮನಸ್ಸಿನಲ್ಲಿ ಇದು ಇತ್ತು. ಮುಂದಿನ ಅನೇಕ ಪ್ರಶ್ನೆಗಳು, ಅವನ ಹೇಳಿಕೆಗಳು ಇದನ್ನು ವ್ಯಕ್ತಪಡಿಸುತ್ತವೆ. ಶ್ರೀಕೃಷ್ಣನು ಅರ್ಜುನ ಮನಃಸ್ಥಿತಿಯನ್ನು ತಕ್ಷಣ ಗುರುತಿಸುತ್ತಾನೆ. ಅಂತೆಯೇ ಅವನು ಅರ್ಜುನನಿಗೆ ನೇರವಾಗಿಯೇ ಹೇಳುತ್ತಾನೆ, ಇಂಥ ತ್ಯಾಗವು ಅನಿವಾರ್ಯವೂ ಅಲ್ಲ. ಮುಖ್ಯವಾಗಿ ಸಾಧ್ಯವೂ ಇಲ್ಲ. "ಒಂದು ಕ್ಷಣ ಕೂಡ ಕರ್ಮ ಮಾಡದಿರುವುದು, ಹಾಗೆಯೇ ನೈಷ್ಕರ್ಮ್ಯವಾಗಿರುವದು ಯಾರಿಂದಲೂ ಸಾಧ್ಯವಿಲ್ಲ. ಪ್ರಕೃತಿಯ ಬಲವೇ ಹಾಗಿದೆ, ಅದಕ್ಕೆ ವಶವಾಗಿ ಪ್ರತಿಯೊಬ್ಬನೂ ಕರ್ಮ ಮಾಡುತ್ತಲೇ ಇರಬೇಕಾಗುತ್ತದೆ" (3/5) ವಿಶ್ವಶಕ್ತಿಯ ಬಲದ ಮನಗಂಡ ಮುಂದಿನ ತಾಂತ್ರಿಕ ಶಾಕ್ತರು ಮುಂತಾದವರು ಈ ವಿಶ್ವಶಕ್ತಿಯಾದ ಪ್ರಕೃತಿಯನ್ನೇ ಪ್ರಧಾನವೆಂದು ಹೇಳಿ, ಪ್ರಕೃತಿಯೇ ಪುರುಷನಿಗಿಂತ ಶ್ರೇಷ್ಠ ಎಂಬ ಸಿದ್ಧಾಂತವನ್ನೇ ಮಂಡಿಸಿದರು – ಗೀತೆಯು ಈ ವಿಷಯವನ್ನು ಕೂಡ ಸೂಕ್ಷ್ಮವಾಗಿ ಗಮನಿಸುತ್ತದೆ. ಗೀತೆಯಲ್ಲಿ ಈ ತತ್ವದ ಬಲವಾದ ಪ್ರತಿಪಾದನೆ ಏನೂ ಇಲ್ಲ; ಆದರೆ ಆಸ್ತಿಕ ಹಾಗೂ ಭಕ್ತಿಯ

ಅಂಶವನ್ನು ಮಾರ್ಪಡಿಸಿ, ಯೋಗದ ಸಾಧನೆಯಲ್ಲಿ ಬದಲಾಯಿಸಿ ಪ್ರತಿಪಾದನೆ ಮಾಡಿರುವುದನ್ನು ಕಾಣುತ್ತೇವೆ. ಮಾನವನು ಸಾಮಾನ್ಯ ಭೌತಿಕ ಜಗದಲ್ಲಿ ಇರುವಾಗ ಕರ್ಮ ಸನ್ಯಾಸ ಸಾಧ್ಯವಿಲ್ಲ, ಕ್ಷಣ ಮಾತ್ರವೂ ಕರ್ಮವನ್ನು ಮಾಡದೇ ಇರಲು ಸಾಧ್ಯವಿಲ್ಲ. ಅವನ ಅಸ್ತಿತ್ವವಿರುವುದೇ ಪ್ರಕೃತಿಯ ಚಲನೆಯಲ್ಲಿ, ಅದರ ಕಾರ್ಯದಲ್ಲಿ ಇಡೀ ಬ್ರಹ್ಮಾಂಡವೇ ಭಗವಂತನ ಕಾರ್ಯ, ಕೇವಲ ಇರುವಿಕೆ ಅಥವಾ ಜೀವಿಸುವಿಕೆ ಅಷ್ಟೇ, ಅದೇ ಭಗವಂತನ ಚಲನೆ, ಕಾರ್ಯ.

ನಮ್ಮ ಭೌತಿಕ ಜೀವನ, ಅದರ ಪರಿಪಾಲನೆ, ಪೋಷಣೆ, ಅದೊಂದು ನಿರಂತರದ ಪಯಣ. ಅದು ಶರೀರದ ತೀರ್ಥಯಾತ್ರೆಯಂತೆ. ಅದು ಕರ್ಮಗಳಿಲ್ಲದೇ ನಡೆಯಲು ಸಾಧ್ಯವೇ ಇಲ್ಲ. ಮನುಷ್ಯನಾದವನು ತನ್ನ ಶರೀರವನ್ನು ಪೋಷಣೆ ಮಾಡದೇ ಹಾಗೆಯೇ ಬಿಟ್ಟು ಬಿಟ್ಟರಾಗಲಿ, ಮರಗಿಡಗಳಂತೆ ಒಂದೇ ಜಾಗೆಯಲ್ಲಿ ಸ್ಥಿರವಾಗಿ ನಿಂತರಾಗಲಿ, ಇಂಥ ಯಾವ ಶಾರೀರಿಕ ನಿಷ್ಕ್ರಿಯತೆಯಾಗಲಿ ಅವನನ್ನು ಪ್ರಕೃತಿಯ ಕೈಯಿಂದ ಪಾರು ಮಾಡಬಾರದು. ಅವನು ಪ್ರಕೃತಿಯ ಕಾರ್ಯಗಳಿಂದ ಮುಕ್ತನಾಗಲಾರ. ಏಕೆಂದರೆ ಕೇವಲ ನಮ್ಮ ಶಾರೀರಿಕ ಚಟುವಟಿಕೆಗಳಾಗಲಿ, ಚಲನೆಗಳಾಗಲಿ ಕರ್ಮಗಳಲ್ಲ. ನಮ್ಮ ಮಾನಸಿಕ ಅಸ್ತಿತ್ವವಾದರೂ ಸಹ ಅತಿ ಸಂಕೀರ್ಣವಾದ ಕರ್ಮವೇ ಆಗಿದೆ. ಅಷ್ಟೇ ಏಕೆ ಅವಿರತವಾಗಿದೆ, – ಅದು ವ್ಯಕ್ತಿನಿಷ್ಠ ಕಾರಣವೂ ಹೌದು ಶಾರೀರಿಕದ ನಿರ್ಣಾಯಕವೂ ಹೌದು – ನಾವು ಕೇವಲ ಕಾರ್ಯವನ್ನಷ್ಟೇ ಅದುವೆ ಹಿಡಿದು, ಅಂದರೆ ಶಾರೀರಿಕ ಬಾಹ್ಯ ಕರ್ಮವನ್ನೆ ಮಾತ್ರ ನಿಯಂತ್ರಣೆ, ಆಂತರಿಕ ಅತ್ಮನಿಷ್ಠ ಕಾರಣವನ್ನು ನಿಯಂತ್ರಸದೇ ಹಾಗೆಯೇ ಬಿಟ್ಟು ಬಿಟ್ಟರೆ, ಏನನ್ನು ಸಾಧಿಸಿದಂತಾಗುವುದಿಲ್ಲ. ಇಂದ್ರೀಯ ವಿಷಯಗಳು ಅಥವಾ ಇಂದ್ರಿಯಾರ್ಥಗಳು ನಮ್ಮ ಬಂಧನದ ಕೇವಲ ನೈಮಿತ್ತಿಕಗಳು, ನಮ್ಮ ಮನಸ್ಸು ಅವುಗಳಿಗೆ ಮೋಹಗೊಳ್ಳುವುದೇ ಬಂಧನದ ಕಾರಣ. ಓರ್ವನು ತನ್ನ ಇಂದ್ರಿಯಗಳ ಸ್ವತಂತ್ರ್ಯ ನೀಡದೇ ಅವುಗಳ ಕಾರ್ಯವನ್ನು ಅದುಮಿ ಹಿಡಿಯಬಹುದು. ಆದರೆ ಅವನ ಮನವು ಮಾತ್ರ ಅದೇ ವಿಷಯಗಳನ್ನು ಕುರಿತು ಚಿಂತಿಸುತ್ತಲೇ ಇದ್ದರೆ, ಏನನ್ನು ಸಾಧಿಸಿದಂತಾಗುವುದಿಲ್ಲ. ಅಂಥವನು ತನ್ನನ್ನು ತಾನೇ ಮೋಸಗೊಳಿಸಿಕೊಂಡಂತೆ, ತಾನೇನೋ ಒಂದು ನಿರ್ದಿಷ್ಟ ಶಿಸ್ತಿಗೆ ಒಳಪಟ್ಟಂತೆ ಭಾವಿಸಿಕೊಂಡಂತೆ – ಆದರೆ ಅವನಿಗೆ ನಿಜವಾಗಿ ಸತ್ಯದ ಉದ್ದೇಶವೇ ಅರ್ಥ ಆಗಿಲ್ಲ, ತನ್ನ ವ್ಯಕ್ತಿನಿಷ್ಠ ಅಸ್ತಿತ್ವದ ಗುರಿಯೇ ತಿಳಿದಿಲ್ಲವೆಂದೇ ಅರ್ಥ, ಆಗ ಅವನ ಶಿಸ್ತು, ಶಿಷ್ಟಾಚಾರ, ಸಾಧನೆ

ಎಲ್ಲವೂ ನಿಷ್ಫಲ, ನಿಷ್ಪ್ರಯೋಜಕ, ಅರ್ಥಜೀವ ಸುಳ್ಳು. ಶಾರೀರಿಕ ಕರ್ಮವೇ ಇರಲಿ, ಮಾನಸಿಕ ಕರ್ಮಗಳೇ ಇರಲಿ ತಮ್ಮಷ್ಟಕ್ಕೆ ತಾವು ಏನೂ ಅಲ್ಲ, ಅವು ಬಂಧನಗಳೂ ಅಲ್ಲ, ಬಂಧನದ ಕಾರಣಗಳೂ ಅಲ್ಲ. ಮುಖ್ಯ ಕಾರಣವೆಂದರೆ ಪ್ರಕೃತಿಯ ಶಕ್ತಿಯೇ, – ಅದಕ್ಕೆ ತನ್ನದೇ ಆದ ದಾರಿ ಇದೆ, ತನ್ನ ಮನಃಪ್ರಾಣ ಶರೀರಗಳ ಕ್ಷೇತ್ರದಲ್ಲಿ ಅದು ತನಗೆ ತಿಳಿದಂತೆ ನಡೆಯುತ್ತದೆ; ಪ್ರಕೃತಿಯಲ್ಲಿರುವ ಅಪಾಯಕಾರಕ ಘಟಕವೆಂದರೆ – ತ್ರಾಗುಣಗಳು, ಅವು ಗೊಂದಲದಲ್ಲಿ ಕೆಡುಕುತ್ತವೆ, ಮೋಸ ಮಾಡುತ್ತವೆ, ವಂಚಿಸುತ್ತವೆ, ಬುದ್ಧಿಯನ್ನು ಭ್ರಮಣಗೊಳಿಸಿ ಅಂತರಾತ್ಮನಿಗೆ ದಾರಿ ಕಾಣದಂತೆ ಮಾಡಿಬಿಡುತ್ತವೆ. ಇದನ್ನು ಕುರಿತು ಮುಂದೆ ವಿವರವಾಗಿ ಚರ್ಚಿಸೋಣ, ಗೀತೆಯು ಇದನ್ನೇ ಒತ್ತಿ ಒತ್ತಿ ಹೇಳುತ್ತದೆ. ಬಂಧ ಮತ್ತು ಮೋಕ್ಷಗಳಿಗೆ ಅದೇ ಕಾರಣವೆಂಬುದು ಗೀತೆಯ ಅಭಿಪ್ರಾಯ. ಅಂತೆಯೇ ಗೀತೆ ಹೇಳುತ್ತದೆ, ತ್ರಿಗುಣಗಳ ವಂಚನೆಯಿಂದ, ಭ್ರಮೆಯಿಂದ, ಅವರೋಧದಿಂದ ಪಾರಾಗಬೇಕು, ತ್ರಿಗುಣಗಳ ಕೆಲಸದಿಂದ ಬಿಡುಗಡೆ ಹೊಂದಬೇಕು. ಹಾಗೆಂದು ವೃತ್ತಿ, ಕೆಲಸ, ಕಾರ್ಯ ನಿಂತು ಬಿಡುವುದಿಲ್ಲ, ಅವು ಮುಂದುವರಿಯಲೇಬೇಕು, ಮುಂದುವರೆಯುತ್ತವೆ, ಮಹಾನ್ ಕರ್ಮ, ಸಂಪನ್ನ ಕರ್ಮ, ಭಯಂಕರ ಹಿಂಸಾತ್ಮಕ ಕರ್ಮ ಈ ಜಗದಲ್ಲಿ ಯಾವುದೂ ನಿಲ್ಲುವುದಿಲ್ಲ. ಅದಾವ ಕರ್ಮವೂ ಸಾಧಕನನ್ನು, ಮಾನವನನ್ನು ಮುಟ್ಟುವುದಿಲ್ಲ, ಕರ್ಮದಾಗಲಿ, ಚಲನೆಯಾಗಲಿ ಪುರುಷನಿಗೆ ಅಂಟುವುದಿಲ್ಲ ಆತ್ಮವು ನೈಷ್ಕರ್ಮ್ಯವಾಗಿರುತ್ತದೆ.

ಆದರೆ ಸದ್ಯಕ್ಕೆ ಗೀತೆಯು ವಿಶಾಲವಾದ, ಬೃಹತ್ತಾದ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವುದಿಲ್ಲ. ಏಕೆಂದರೆ ಮನಸ್ಸೆಂಬುದು ಉಪಾದಾನ ಕಾರಣವಾಗಿದೆ, ಜೊತೆಗೆ ನಿಷ್ಕರ್ಮವಂತೂ ಅಸಾಧ್ಯ. ಹಾಗಾದರೆ ತಾರ್ಕಿಕವಾಗಿ, ಅವಶ್ಯವಾಗಿರುವ ದಾರಿ ಏನೆಂದರೆ, ಆಂತರಿಕವಾಗಿ ಹಾಗೂ ಬಾಹ್ಯವಾಗಿ ಇಂದ್ರಿಯಗಳನ್ನು ಬುದ್ಧಿಯ ಅಧೀನಕ್ಕೊಳಪಡಿಸಬೇಕು. ಅವು ವಾಸ್ತವವಾಗಿ ವಿವೇಕದ ಉಪಕಾರಣಗಳು, ಅವುಗಳ ಮೇಲೆ ಬುದ್ಧಿಯ, ಸಂಕಲ್ಪದ ನಿಯಂತ್ರಣವಿರಬೇಕು. ಸರಿಯಾದ ಸಂಕಲ್ಪದೊಂದಿಗೆ ಕರ್ಮೇಂದ್ರಿಯಗಳು ಕಾರ್ಯದಲ್ಲಿ ತೊಡಗಬೇಕು. ಕರ್ಮವನ್ನು ಯೋಗವೆಂದೇ ತಿಳಿದು ಆಚರಿಸಬೇಕು ಸರಿ. ಈ ಆತ್ಮ–ಸಂಯಮ, ನಿಯಂತ್ರಣ ಇದರ ಅರ್ಥವೇನು? ಎಲ್ಲವನ್ನು ಯೋಗವೆಂದು ಭಾವಿಸಿ ಕರ್ಮ ಮಾಡಬೇಕು ಅಂದರೆ ಅರ್ಥವೇನು? ಕರ್ಮ ಯೋಗ ಅಂದರೆ ಏನು? ಮುಖ್ಯವಾಗಿ ಕರ್ಮ ಯೋಗವೆಂದರೆ ನಿರ್ಮೋಹಿತ್ವ, ನಿಸ್ಸಂಗತ, ಯಾವ ಕಾರ್ಯಗಳನ್ನು ಮಾಡಿದರೂ

ಮನಸ್ಸು ಯಾವ ಕಾರ್ಯದ ಜೊತೆಗೂ, ಫಲದ ಜೊತೆಗೂ ಮೋಹವನ್ನಿಟ್ಟು–ಕೊಳ್ಳಬಾರದು, ಅವುಗಳಿಗೆ ಅಂಟಿಕೊಳ್ಳಬಾರದು. ಸಂಪೂರ್ಣ ನಿಷ್ಕ್ರಿಯತೆ ಅಥವಾ ಕರ್ಮವನ್ನೇ ಮಾಡದಿರುವುದು ಕರ್ಮ ಯೋಗವಲ್ಲ ಮತ್ತು ಅದು ತಪ್ಪು ಕ್ರಮ ಕೂಡ, ಅದು ಆತ್ಮವಿಭ್ರಮ, ಗೊಂದಲಮಯ ಭ್ರಮಾ ಸ್ಥಿತಿ. ಕರ್ಮಗಳನ್ನು ಮಾಡಲೇಬೇಕು. ಆದರೆ ಇಂದ್ರಿಯಗಳಿಗೆ ದಾಸನಾಗಿ ಕರ್ಮ ಮಾಡಬಾರದು ಕರ್ಮದಲ್ಲಿ ಉದ್ವೇಗ, ಆವೇಶ ಇರಕೂಡದು. ಕರ್ಮ ಮತ್ತು ಕರ್ಮಫಲ ಎರಡಕ್ಕೂ ಅಂಟಿಕೊಳ್ಳದೇ ಮುಕ್ತವಾಗಿ ಮಾಡುವುದೇ ಪರಿಪೂರ್ಣತೆಯ ರಹಸ್ಯ ಮತ್ತು ಅದೇ ಸೂತ್ರ ಕೂಡ. ಶ್ರೀಕೃಷ್ಣ ಹೇಳುತ್ತಾನೆ. ನಿಯತಂ ಕುರು ಕರ್ಮತ್ವಂ, ಆತ್ಮ ಸಂಯಮನದಿಂದ ನಿಯತವಾಗಿ ಕರ್ಮ ಮಾಡಬೇಕು; ನಾನು ಹೇಳಿದ್ದೇನೆ ಜ್ಯಾಯನೀ ಕರ್ಮಣೋ ಬುದ್ಧಿಃ ಕರ್ಮಗಳಿಗಿಂತ ಜ್ಞಾನವು, ಬುದ್ಧಿಯು ಬಹಳ ಶ್ರೇಷ್ಠವಾಗಿದೆ; ಕರ್ಮ ಜ್ಯಾಯೋ ಅಕರ್ಮಣಃ ನಿಷ್ಕರ್ಮವು ಕರ್ಮಕ್ಕಿಂತ ಹೆಚ್ಚಿನದೆಂದು ನಾನೆಲ್ಲಿಯೂ ಹೇಳಲಿಲ್ಲ. ಏಕೆಂದರೆ ಜ್ಞಾನವು ಕರ್ಮವನ್ನು ಅಲ್ಲಗಳೆಯುವುದಿಲ್ಲ, ಕರ್ಮ ಮಾಡದಿರಲು ಹೇಳುವುದಿಲ್ಲ. ಜ್ಞಾನವು ಸಮತೆಯನ್ನು, ನಿಸ್ಸಂತತ್ವ, ನಿರಿಚ್ಛೆ, ವಿಷಯ ಅನಾಸಕ್ತಿಯನ್ನು ಬೋಧಿಸುವುದು.

ಆದರೂ ಸಹ ತಾತ್ವಿಕವಾಗಿ ಒಂದು ಸಮಸ್ಯೆ ಹಾಗೆಯೇ ಉಳಿಯುತ್ತದೆ. ಮಾನವನ ಎಲ್ಲ ಚಟುವಟಿಕೆಗಳ ಸಾಮಾನ್ಯ ಉದ್ದೇಶವು ವಾಸನೆಯೇ ಆಗಿರುತ್ತದೆ. ಅವನ ಆತ್ಮವು ಒಂದು ವೇಳೆ ವಾಸನಾ ಮುಕ್ತವಾದರೆ ಅವನ ಮುಂದಿನ ಕಾರ್ಯಗಳಿಗೆ ಚಟುವಟಿಕೆಗಳಿಗೆ ಯಾವ ಪ್ರಚೋದನೆಯೂ ಉಳಿಯುವುದಿಲ್ಲ. "ಕೆಲವೊಂದು ಕೆಲಸಗಳನ್ನು ನಾವು ಉಪಜೀವನಕ್ಕಾಗಿಯಾದರೂ, ಶರೀರದ ಪೋಷಣೆಗಾಗಿಯಾದರೂ ಮಾಡಲೇಬೇಕಾಗುತ್ತದೆ. ಆದರೆ ಅದು ಕೂಡ ಶರೀರ ರಕ್ಷಣೆಗಾಗಿ ಎಂಬ ಬಯಕೆಯಿಂದ ಕೂಡಿರುತ್ತದೆ; ನಾವು ಈ ಬಯಕೆಯನ್ನು ಕೂಡ ಗೆಲ್ಲಲೇಬೇಕು, ಅಂದಾಗ ಮಾತ್ರ ಪರಿಪೂರ್ಣತೆ ಸಿದ್ಧಿಸಲು ಸಾಧ್ಯ. ಆದರೆ ಇದನ್ನು ಸಿದ್ಧಿಸಿಕೊಳ್ಳುವುದು ಕಠಿಣವೇ; ಹಾಗಾದರೆ ಬಾಹ್ಯ ಕರ್ಮಗಳಿಗಾಗಿ ಬಂಧುರವಾದ ನಿಯಮವೊಂದನ್ನು ಹಾಕಿಕೊಳ್ಳಬೇಕು. ಅಲ್ಲಿ ನಮ್ಮ ವೈಯಕ್ತಿಕತೆಗೆ ಅವಕಾಶವಿರದೇ, ವೇದವಿಹಿತ ನಿತ್ಯ ಕರ್ಮಗಳಿಗೆ ಮಾತ್ರ ಅವಕಾಶ; ಯಜ್ಞಯಾಗಾದಿಗಳು, ದೈನಂದಿನ ಕರ್ತವ್ಯ, ಸಾಮಾಜಿಕ ಹೊಣೆಗಾರಿಕೆ ಇತ್ಯಾದಿ ಅವಶ್ಯವಾದ ಕರ್ಮಗಳನ್ನು ಮಾತ್ರ ಮಾಡಬೇಕು, ಏಕೆಂದರೆ ಅದು ಅವನ ಹೊಣೆ, ಜವಾಬ್ದಾರಿ, ಯಾವ ವೈಯಕ್ತಿಕ ಲಾಭಾಪೇಕ್ಷೆ ಇಲ್ಲದೇ,

ಲಾಭನಿರಪೇಕ್ಷವಾಗಿ, ತಟಸ್ಥ ಮನೋಭಾವದಿಂದ ಕರ್ಮಗಳನ್ನು ಮಾಡುತ್ತ ಹೋಗಬೇಕು. ಸತ್ವರಜತಮೋಗುಣಗನುಗುಣವಾಗಿ ಅಂತಲ್ಲ, ಅವನ ವೈಯಕ್ತಿಕ ಅಗತ್ಯ ಅಂತಲೂ ಅಲ್ಲ, ಆದರೆ ಶಾಸ್ತ್ರ ವಿಧಿಸಿದ ಕರ್ಮ ಎಂದು ತಿಳಿದು ಅವಶ್ಯವಾಗಿ ಮಾಡಬೇಕು – ಕರ್ಮಗಳ ತತ್ವವು ಬಾಹ್ಯ ನಿಯಮವಾಗದೇ ಅವನ ವೈಯಕ್ತಿಕ ಸ್ವಭಾವ ನಿಯತವಾಗಿದ್ದರೆ, "ಸ್ವಭಾವಂ ನಿಯತಂ" ಕರ್ಮದ ಆಂತರಿಕ ಪ್ರಚೋದನೆಯೇ ಬಯಕೆ ಅಥವಾ ಆಶೆ ಆಗಬಲ್ಲದು; ಆ ಬಯಕೆ ಏನೇ ಇರಬಹುದು. ಕಾಯವಾಸನೆ, ಹೃದಯದ ಭಾವನೆ, ಮನದ ಉಚ್ಚ ನೀಚ ಗುರಿ ಏನೇ ಇರಬಹುದು ಅವೆಲ್ಲವೂ ಪ್ರಕೃತಿಯ ಗುಣಗಳಿಗಧೀನವಾದವುಗಳೆಂದೇ ಅರ್ಥೈಸಲಾಗುತ್ತದೆ. ಗೀತೆಯ "ಕರ್ತವ್ಯಂ ಕರ್ಮ"ವೆಂದರೆ ಆರ್ಯ ಪದ್ಧತಿಯ ವರ್ಣಾಶ್ರಮ ವಹಿತ ಕರ್ಮಗಳು. "ಯಜ್ಞರೂಪ ಕರ್ಮ"ಗಳೆಂದರೆ ವೇದೋಕ್ತ ಯಜ್ಞಯಾಗಾದಿಗಳು; "ನಿಯೋಜಿತ ಕರ್ಮ"ಗಳೆಂದರೆ ವೈಯಕ್ತಿಕ ಫಲಾಪೇಕ್ಷೆ ರಹಿತ ನಿಸ್ವಾರ್ಥ ಸಾಮಾಜಿಕ ಕರ್ಮಗಳು – ಆದರೆ ಗೀತೆಯ ನಿಷ್ಕಮ ಕರ್ಮ ಸಿದ್ಧಾಂತವು ಇಷ್ಟು ಸರಳವಾಗಿದೆಯೇ? ಇಷ್ಟು ಪ್ರಾಥಮಿಕ ಹಂತದ್ದಾಗಿದೆಯೇ? ಇಷ್ಟು ತಾರ್ಕಿಕವೂ, ಸಂಕುಚಿತವೂ ಆಗಿದೆಯೇ? ಎಂಬ ಪ್ರಶ್ನೆ ಸಹಜವಾಗಿ ಉದ್ಭವವಾಗುವುದು ಇಲ್ಲ. ಗೀತೆಯ ಬೋಧನೆ ಬಹು ವಿಶಾಲವಾಗಿದೆ, ಸೂಕ್ಷ್ಮವಾಗಿದೆ, ಗಂಭೀರವಾಗಿದೆ; ಅದರ ಸಿದ್ಧಾಂತವು ದೇಶಕಾಲಾನು ಬಂಧಿಯಾಗಿಲ್ಲ ಎಲ್ಲ ಕಾಲದಲ್ಲಿಯೂ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂತದಾಗಿದೆ. ಗೀತೆಯ ವೈಶಿಷ್ಟ್ಯವೇ ಇದು; ಬಾಹ್ಯ ರೂಪ, ವಿವರ, ವಿಶೇಷಗಳು, ಸಾಂಪ್ರದಾಯಿಕ ಭಾವನೆಗಳು ಇವುಗಳನ್ನೆಲ್ಲ ಮೀರಿ, ದಾಟಿ ತತ್ವಗಳನ್ನು ನಮ್ಮ ಸಹಜ ಭಾವದ ಮಹಾತಥ್ಯಗಳನ್ನು ಶ್ರುತಪಡಿಸುತ್ತದೆ, ನೆನಪಿಸುತ್ತದೆ. ಅದು ಬಹು ಉದಾರ, ಉದಾತ್ತ ದಾರ್ಶನಿಕ ಸತ್ಯದ, ಆಧ್ಯಾತ್ಮಿಕ ವ್ಯಾವಹಾರಿಕ ಗ್ರಂಥವಾಗಿರುವುದೇ ಅದರ ವಿಶಿಷ್ಟತೆ. ಅದು ಯಾವುದೇ ಮತ, ಪಂಥ, ರೂಢಿಗತ ಸಂಪ್ರದಾಯ, ನಿರ್ದಿಷ್ಟ ಧಾರ್ಮಿಕ, ದಾರ್ಶನಿಕ ಸೂತ್ರಗಳನ್ನು ಕುರುಡು ಪ್ರತಿಪಾದನೆ ಮಾಡುವುದಿಲ್ಲ. ಅವೆಲ್ಲವನ್ನು ಅದು ಮೀರಿ ನಿಲ್ಲುತ್ತದೆ.

ಗೀತೆಯ ಅನಾಸಕ್ತಿ ಕರ್ಮಸಿದ್ಧಾಂತದ ನಿಜವಾದ ಅರ್ಥ ಹೀಗಿದೆ: ನಮ್ಮ ನಮ್ಮ ಸ್ವಭಾವ ರೀತಿ ನೀತಿ ಇವನ್ನೆಲ್ಲ ನೋಡಿದಾಗ ಆಶೆ. ಬಯಕೆಗಳೇ ನಮ್ಮ ಸ್ವಭಾವದ ಪ್ರಮುಖ ಅಂಶವೆಂಬುದು ತಿಳಿಯುತ್ತದೆ. ಅವುಗಳೆ ನಮ್ಮ ಎಲ್ಲ ಕರ್ಮಗಳ ಪ್ರಚೋದಕ ಅಂಶವೆಂಬುದೂ ತಿಳಿದುಬರುತ್ತದೆ. ಹೀಗಿರುವಾಗ

ನಿಷ್ಕರ್ಮ ಕರ್ಮ ಸಿದ್ಧಾಂತವನ್ನು ಪ್ರಾತ್ಯಕ್ಷಿಕವಾಗಿ ಅಳವಡಿಸಿಕೊಂಡು ಅನುಸಂಧಾನ ಮಾಡುವುದು ಸಾಧ್ಯವಾದೀತೆ? ನಾವೇನೋ ನಾವು ಮಾಡುವ ಸ್ವಾರ್ಥದ್ದಲ್ಲ, ಅನು ನಿಷ್ಕಾಮ ಕರ್ಮವಾಗಿದೆ ಎಂದು ಭಾವಿಸಿದರೂ ಅದು ನಿಜವಾಗಿ ಹಾಗಿರುವ ಅವಕಾಶ ಬಹಳ ಕಡಿಮೆ. ವೈಯಕ್ತಿಕ ಹಿತಾಸಕ್ತಿಗಳು ತುಚ್ಛ, ಕ್ಷುಲ್ಲಕ ಅಥವಾ ಲಘು ಆಗಿರದೇ ಹೆಚ್ಚು ವಿಶಾಲ ಹಾಗೂ ವೈಯಕ್ತಿಕತೆಯನ್ನು ಮೀರಿದಂತೆ ಅನಿಸಬಹುದು. ಅವು ನಿರ್ವೈಯಕ್ತಿಕತೆಯ ಅನಿಸಬಹುದು. ಸದ್ಗುಣ, ದೇಶ ಸೇವೆ, ಮನುಕುಲದ ಹಿತ ಮುಂತಾದ ಎಲ್ಲ ಕರ್ಮಗಳೂ ಸಹ ಪ್ರಕೃತಿ ಸಹಜವಾಗಿ, ನಮ್ಮ ಸ್ವಭಾವದಂತೆಯೇ ನಡೆಯುತ್ತವೆ ಎಂದು ಶ್ರೀಕೃಷ್ಣನು ಹೇಳುತ್ತಾನೆ. ಶಾಸ್ತ್ರವಿಹಿತ ಕರ್ಮಗಳನ್ನು ಸಹ ನಾವು ನಮ್ಮ ಪ್ರಕೃತಿ ಸ್ವಭಾವಕ್ಕನುಗುಣವಾಗಿಯೇ ಮಾಡುತ್ತೇವೆ. ಅಲ್ಲಿ ಕೂಡ ನಮ್ಮ ಆಶೆ, ಅಭಿಪ್ರಾಯ, ಅಹಂಭಾವ, ವೈಯಕ್ತಿಕ ಮತ–ಧರ್ಮ, ರಾಷ್ಟ್ರದ ಹೆಮ್ಮೆ, ಭಾವನೆಗಳ ರೂಪದಲ್ಲಿ ಇದ್ದೇ ಇರುತ್ತವೆ. ನಿರ್ವೈಯಕ್ತಿಕತೆಯ ಮೇಲು ಹೊದಿಕೆ ಇರುತ್ತದೆ. ಅಷ್ಟೇ, ಆದರೆ ಅವುಗಳ ಹಿಂದಿನಿಂದ ನಾವು ನಮ್ಮ ಸ್ವಭಾವವನ್ನು ಅನುಸರಿಸಿಯೇ ಕಾರ್ಯ ಮಾಡುತ್ತೇವೆ. ನಮ್ಮ ಬುದ್ಧಿ ಶುದ್ಧವಾಗಿದ್ದು, ನಿರ್ದೋಷವಾಗಿದ್ದರೂ ಸಹ ಶಾಸ್ತ್ರವಿಹಿತವೆಂದು ಮಾಡುವ ಕರ್ಮಗಳಲ್ಲಿ ನಮ್ಮ ಸ್ವಭಾವದ ಹಸ್ತಕ್ಷೇಪ ಇದ್ದೇ ಇರುತ್ತದೆ. ನಮ್ಮ ಸ್ವಭಾವ ಬೇರೆಯಾಗಿದ್ದು, ಗುಣ ಮತ್ತು ಸ್ವಭಾವಗಳಲ್ಲಿ ಹೊಂದಾಣಿಕೆಯಾಗದೇ ಹೋದರೆ, ನಾವು ಶಾಸ್ತ್ರವನ್ನು ಒಪ್ಪುವುದಿಲ್ಲ. ನಮ್ಮ ಬುದ್ಧಿಗೆ ಸರಿದೋರಿದಂತೆ ಕಾರ್ಯಮಾಡುತ್ತೇವೆ. ಬೌದ್ಧಿಕ ಕಲ್ಪನೆಯಂತೆ ಜೀವಿಸುತ್ತೇವೆ. ಸಮಾಜದ ನಿಯಮ, ಕಟ್ಟುನಿಟ್ಟುಗಳನ್ನು ಅತಿಕ್ರಮಿಸಿ ಏಕಾಕಿಯಾಗಿ, ಸನ್ಯಾಸಿಯಂತೆ ಜೀವನ ನಡೆಸಲೂಬಹುದು. ಏನೇ ಆಗಲಿ ನಮ್ಮಿಂದ ಹೊರಗಿನ ಯಾವುದೇ ಉಪಕ್ರಮವನ್ನವಲಂಬಿಸಿದರೂ ಸಹ ನಾವು ಸಾರ್ವತ್ರಿಕವಾಗಲಾರೆವು, ಏಕೆಂದರೆ ನಾವು ನಮ್ಮನ್ನು ಅತಿಕ್ರಮಿಸಿ ಹೊರಹೋಗಲಾರವು.

(ಸಶೇಷ)

# ಶ್ರೀ ಅರವಿಂದರ ಕಾವ್ಯ
# "ಈಲಿಯನ್"

**– ಅನುವಾದ: ಡಾ॥ ಬಿ.ಆರ್. ಭೀಡ್, ರಾಯಚೂರು**

**ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/5)**

185–187. ಯುದ್ಧದ ಕಹಳೆ, ನಗಾರಿಗಳ ಧ್ವನಿ ಏನೂ ನಿಂತಿಲ್ಲ ಕ್ಷೀಣವಾಗೂ ಇಲ್ಲ: ಆದರೆ ಉತ್ಸಾಹ ಮಾತ್ರ ಇಲ್ಲದಾಗಿದೆ. ಮಂಕು ಕವಿದ ಹಾಗಾಗಿದೆ.

ಸಮುದ್ರದ ಅಲೆಗಳು ಕಲ್ಲು ಬಂಡೆಗಳಿಗೆ ಅಪ್ಪಳಿಸಿದಾಗ ಭಯಾನಕ ನಡುಕ ಹುಟ್ಟಿಸುವ ಧ್ವನಿ ಕೇಳುತ್ತದೆ, ಆದರೆ ದಂಡೆಗಳ ಬಳಿ ಹಾಸಿದ ಬೆಣಚುಕಲ್ಲು ಜಲ್ಲಿಗಳ shingles ಮೇಲೆ ಸವರಿದಾಗ ಬರೀ ನೊರೆ ಮಾತ್ರ ಬರುತ್ತದೆ. ಹಾಗಾಗಿದೆ ಈಗಿನ ಯುದ್ಧದ ಪರಿಸ್ಥಿತಿ.

ಯುದ್ಧ ನಿಂತಿಲ್ಲ, ನಿಜ, ಆದರೆ ಯುದ್ಧೋತ್ಸಾಹದ ಘರ್ಜನೆ ಕಡಿಮೆಯಾಗಿದೆ.

ಈಟಿಗಳು, ಭರ್ಚಿಗಳು ಅತ್ತಿಂದಿತ್ತ ಇತ್ತಿಂದತ್ತ ಗುರಿ ಹಿಡಿದು ಹಾರಾಡುತ್ತಿವೆ. ಆದರೆ ಎಸೆಯುವ ಕೈಗಳಲ್ಲಿ ಮೊದಲಿನ ಕಸುವು ಇಲ್ಲ, ದಣಿದ ನಿರುತ್ಸಾಹವಿದೆ. ಕಸುವಿನಲ್ಲಿ ನಿರಾಸಕ್ತಿ ಮೊಳೆತಿದೆ.

ಹತ್ತು ವರ್ಷಗಳಾಗುತ್ತ ಬಂದಿದೆ, ಬಾ ಅಂದರೂ ಉತ್ಸಾಹ ಎಲ್ಲಿಂದ ಬರಬೇಕು! ತಿಂಗಳು ಉರುಳಿದಂತೆ ಮೌನ ಬೆಳೆಯುತ್ತಿದೆ. ಸೈನ್ಯದ ಶಿಬಿರದಲ್ಲಿ ರುದ್ರ ಮೌನ ಆವರಿಸಿದೆ. (1.57)

188–193. ಕೇವಲ ಆಶಿಯನ್ಸ ಮೇಲೆ ಮಾತ್ರ ಅಲ್ಲ ಎಲ್ಲರ ಪಾಲಿಗೂ ಕಾಲವು ತುಂಬ ಭಾರವಾದ ಹೆಜ್ಜೆ ಹಾಕಿ ಸಾವಕಾಶವಾಗಿ ನಡೆಯುತ್ತಿದೆ ಅನಿಸುತ್ತಿತ್ತು.

ಆಶಿಯನ್ಸ ಗ್ರೀಕರ ನಾಲ್ಕು ಪಂಗಡಗಳ ಪೈಕಿ ಒಂದು ಪಂಗಡ. ಆ ಕಾಲದಲ್ಲಿ ಗ್ರೀಸ್‌ನ ಪ್ರದೇಶಗಳಾದ ಆರ್ಗೋಲಿಸ್ ಮತ್ತು ಲಾಸೋನಿಯಾದಲ್ಲಿ ವಾಸಿಸುವವರನ್ನು ಆಶಿಯನ್ನರೆಂದು ಕರೆಯುತ್ತಿದ್ದರು.

ಈಲಿಯನ್ನರೂ ಸಹ ಒಂಬತ್ತು ವರ್ಷಗಳಿಗೆ ಮೇಲ್ಪಟ್ಟು ಟ್ರಾಯ್ ಪಟ್ಟಣದಲ್ಲೇ ಕಳೆದಿದ್ದಾರೆ. ಅವರು ತುಂಬ ಸಶಕ್ತರು, ಆದರೆ ಯುದ್ಧ ಸಾಕಾಗಿ ಹೋಗಿದೆ. ತಮ್ಮ ಬೇಸರವನ್ನು ಅವರು ಮುಕ್ತವಾಗಿಯೇ ವ್ಯಕ್ತಪಡಿಸುವ ಸ್ಥಿತಿಗೆ ತಲುಪಿದ್ದಾರೆ. ಅವರ ಮೇಲೂ ಕರಾಳ ಛಾಯೆ ದಿನೇದಿನೇ ಹೆಚ್ಚಾಗುತ್ತ ಹೋಗುತ್ತಿದೆ.

•ಮುಂದಿನ ಸಾಲುಗಳಲ್ಲಿ ಟ್ರಾಯ್ ಪಟ್ಟಣದ ಮೇಲೆ ಎರಗಲಿರುವ ಕರಾಳ ವಿಧಿಯ ಸೂಚನೆಯನ್ನು ಕವಿ ಗೂಢ ಭಾಷೆಯಲ್ಲಿ ಹೇಳಿ ಬಿಡುತ್ತಾರೆ.

ಈಲಿಯನ್‌ರಿಗೆ ಅರಿವಾಗಿದೆ. ತಮ್ಮ ಪಟ್ಟಣ, ಸಾಮ್ರಾಜ್ಯ ನಾಶವಾಗಲಿದೆ ಎಂಬ ಸತ್ಯ ಅರಿವಾಗಿದೆ. ಆದರೆ ಮನಸ್ಸು ಬಾಯಿಬಿಟ್ಟು ಹೇಳುವ ಧೈರ್ಯ ಮಾಡಲೊಲ್ಲದು.

•Ironical ಭಾಷೆಯಲ್ಲಿಯೇ ಮುಂದುವರಿದು ಕವಿ ಹೇಳುತ್ತಾರೆ.

ಹೃದಯದ ಯಾವುದೋ ಮೂಲೆಯಲ್ಲಿ ಏನೋ ಅವಲಕ್ಷಣದ ವಾಸನೆ ಹಿಡಿದಿದೆ. ಪ್ರತಿಭಟನೆಯ ಇಚ್ಛೆ ಕೂಡ ಬಲಿಯುತ್ತಿದೆ. ದಂಗೆ ಏಳುವುದೇ? ಸುಮ್ಮನಿದ್ದು ನಗುತ್ತ ಸರ್ವನಾಶ ಎದುರಿಸುವುದೇ? ಏನು ಮಾಡುವುದು? ತಿಳಿಯಲೊಲ್ಲದು. (1.58)

193–196. ಸರ್ವನಾಶವೆನ್ನುವುದು ಬಹು ಗತ್ತಿನಿಂದ ಈಲಿಯನ್‌ರ ಕಡೆಗೆ ನಡೆದು ಬರುತ್ತಿತ್ತು. ಭೂಮ್ಯಾಕಾಶಗಳನ್ನು ಆಚ್ಛಾದಿಸುವ ರೀತಿ ಕವಿದು ಬರುತ್ತಲಿತ್ತು. ಒಬ್ಬಿಬ್ಬರಲ್ಲ, ಎಲ್ಲರ, ಪ್ರತಿಯೊಬ್ಬರ ಹೃದಯದಲ್ಲೂ ಅದರ ಅರಿವು ಆಗುತ್ತಲಿದೆ.

ಕ್ಷಣ ಕ್ಷಣವೂ ಆತಂಕ, ಕಾಣದ ಭಯ ಆವರಿಸುತ್ತಿದೆ. ಭಯ ಅರ್ಧ ರಾತ್ರಿಯಲ್ಲಿಯೇ ಎಚ್ಚರಾಗಿಬಿಡುತ್ತದೆ(ಎಚ್ಚರಿಸಿಬಿಡುತ್ತದೆ).

ಬರೀ ಸೈನಿಕರಲ್ಲ ಶಿಬಿರಕ್ಕೆ ಶಿಬಿರವೇ ಬೆಚ್ಚಿ ಬೀಳುತ್ತದೆ. ಕೋಟೆಗಳು, ಕೋಟೆ ಗೋಡೆಗಳಿಗೂ ಭಯ ಬಿಟ್ಟಿಲ್ಲ. ದೇವತೆಗಳೇ ನಿರ್ಮಿಸಿದ ಕೋಟೆಗಳಾದರೂ ಅವುಗಳಿಗೂ ಅವಸಾನ ಕಾಲ ಪ್ರಾಪ್ತವಾದಂತಾಗಿದೆ. ಶಿಬಿರ ಕಾಯುವ ಭಟರೂ ಸಹ ಕೈಯಲ್ಲಿ ಜೀವ ಹಿಡಿದುಕೊಂಡೇ ಕಣ್ಣಗಲಿಸಿ ನೋಡುವಂತಾಗಿದೆ. (1.59)

197–199.ಆದರೆ ಆ ಸರ್ವನಾಶವೆನ್ನುವುದು ಈಗ ನಿಧಾನವಾಗಿ ಬರುತ್ತಿಲ್ಲ, ಆಟವಾಡುತ್ತ, ಕುಣಿಯುತ್ತ ನಲಿಯುತ್ತ ಸಾವಕಾಶವಾಗಿ ಬರುತ್ತಿಲ್ಲ. ಬದಲಾಗಿ ಬಹು ವೇಗವಾಗಿ ತೀವ್ರವಾಗಿ ಓಡುತ್ತ ಬರುತ್ತಿದೆ. ಆದರೆ ಅದು ಬರುವ ಮೊದಲೇ ಅದರ ಆಗಮನದ ಅರಿವು ವಿಧಿಗೆ ಆಗಿದೆ. ಅದು ಅಟ್ಟಹಾಸ ಗೈಯುತ್ತಿದೆ. ತನ್ನ ಬಂಧಿಗಳ ಆಕ್ರಂದನದಲ್ಲಿ ಸಂತಸವನ್ನು ಕಾಣಲು ಪಂಜು ಹೊತ್ತಿಸಿ ಕಾಯುತ್ತಿದೆ, ಕಾತರಿಸುತ್ತಿದೆ. (1.60)

•ಇದು ತುಸು ವಿಷಯಾಂತರವಾಯಿತು. ತಾತ್ಕಾಲಿಕ ಪ್ರಸಂಗಾವಧಾನ ಇದು. ಮಾನವನ ಸಾಮಾನ್ಯ ಸ್ವಭಾವ ಹೀಗೆಯೇ ಇರುತ್ತದೆ. ಅವನ ಭಾವೋದ್ವೇಗಗಳು

ದಯನೀಯತೆಯನ್ನೋ ದುಃಖವನ್ನೋ ಸದಾ ಅನುಭವಿಸುತ್ತಲೇ ಇರುತ್ತದೆ. ಇದನ್ನು Pathos ಗುಣಧರ್ಮವೆಂದು ಹೇಳಬಹುದು.

ಮತ್ತೆ ಪುನಃ ಕಥಾ ಪ್ರಸಂಗಕ್ಕೆ ಮರಳೋಣ.

ಡೀಫೋಬಸ್ ತನ್ನ ವಾಸದ ಅರಮನೆಯಿಂದ ಪರ್ಗಮಾದ ಹೆಬ್ಬಾಗಿಲಿಗೆ ಬರುತ್ತಾನೆ.

ಅದು ಗ್ರೀಕರಿಗಾಗಲಿ ಟ್ರೋಜನರಿಗಾಗಲಿ ಇಬ್ಬರಿಗೂ ಯುದ್ಧ ವಿರಾಮದ ಸಮಯ.

200–202. ಡೀಫೋಬಸ್ ಬಹು ಗಡಿಬಿಡಿಯಿಂದ ನಡೆದು ಬರುತ್ತಾನೆ. ಅವನಿಗೆ ಗೊತ್ತಿಲ್ಲ ಅಮರರಾದ ದೇವತೆಗಳು ತನ್ನನ್ನು ನೋಡುತ್ತಲಿದ್ದಾರೆ ಎಂಬ ಕಟು ಸತ್ಯ. ಬೆಳ್ಳಂಬೆಳಿಗ್ಗೆ ಅವಸರದಿಂದ ಹೊರಟಿದ್ದರೂ ಯುದ್ಧ ಕವಚ ಧರಿಸುವುದನ್ನು ಮರೆತಿಲ್ಲ. ಸುಂದರವಾದ ಬಹು ಮಹಡಿ ಕಟ್ಟಡಗಳ ಟ್ರಾಯ್ ಪಟ್ಟಣದ ಬೀದಿಗಳಲ್ಲಿ ಹೊರಟಿದ್ದರೆ ಅವನು ಧರಿಸಿದ ಖಿಲ್ಲತ್ತು, ಖಿಲಾಪತ್ತುಗಳ ಸಂಮೋಹಕ ಧ್ವನಿ ಜೋರಾಗಿಯೇ ಕೇಳಿಬರುತ್ತಿದೆ.

ಟ್ರಾಯ್ ಪಟ್ಟಣವನ್ನು ಕವಿ ಹೀಗೆ ವರ್ಣಿಸುತ್ತಾರೆ: ಬಹು ಸುಂದರವಾದ ತೇಜೋಮಯ ನಗರ, ಹೊಳೆಯುವ (ವಜ್ರ ಖಚಿತ ಗೋಡೆಗಳ ಮನೆಗಳ) ವಾತಾವರಣ; ಆದರೆ, ಪಟ್ಟಣ ಬಹು ಮಟ್ಟಿಗೆ ಖಾಲಿಯಾಗಿದೆ, ಅಲೌಕಿಕ ಶಕ್ತಿಯ ದೇವತೆಗಳಿಂದ ಪರಿತ್ಯಕ್ತವಾಗಿ ಕಳಾಹೀನವಾಗಿದೆ. (1.61)

203–206. ಕವಿಯು ಈಗ ಸುಂದರವಾದ ಶುದ್ಧ ವೈಜ್ಞಾನಿಕ ದೃಷ್ಟಾಂತವನ್ನು ಕೊಡುತ್ತ ಟ್ರಾಯ್ ಪಟ್ಟಣದ ಗತ ವೈಭವವನ್ನು ಹೀಗೆ ವರ್ಣಿಸುತ್ತಾರೆ; ಇದು simileಯ ಉತ್ತಮ ಉದಾಹರಣೆಯಾಗಿದೆ.

ಯಾವುದೋ ಒಂದು ನಕ್ಷತ್ರವು ಆಗಸದಲ್ಲಿ ಎಂದೋ ನಶಿಸಿ ಹೋಗಿದೆ; ಆದರೂ ಅದರ ಬೆಳಕು ಆಗಸದಲ್ಲಿ ಪಯಣ ಮುಂದುವರಿಸಿ ನಮ್ಮ ಕಣ್ಣಿಗೆ ಇವತ್ತಿಗೂ ಆ ನಕ್ಷತ್ರ ಇರುವಂತೆ, ಪ್ರಕಾಶಿಸುತ್ತಿರುವಂತೆ ತೋರುತ್ತದೆ. ಆದರೆ ಆ ನಕ್ಷತ್ರ ಮಾತ್ರ ಎಂದೋ ಶೂನ್ಯದಲ್ಲಿ ಕರಗಿಹೋಗಿ ಭೂತ ಕಾಲಕ್ಕೆ ಸೇರಿರುತ್ತದೆ. (ಆ ನಕ್ಷತ್ರವು ಕಪ್ಪು ರಂಧ್ರವಾಗಿ black hole ಪರಿವರ್ತಿತವಾಗಿರುತ್ತದೆ) ವಿಶಾಲವಾದ ಆಗಸಕ್ಕೆ ಮಾತ್ರ ಆ ನಕ್ಷತ್ರದ ಪರಿವೆಯೇ ಇರದು, ಇದ್ದರೂ ಅಷ್ಟೇ

ಇರದಿದ್ದರೂ ಅಷ್ಟೇ ಕಪ್ಪಾದರೂ ಸರಿಯೇ ಶ್ವೇತವಾದರೂ ಸರಿಯೇ. ಶೂನ್ಯದಲ್ಲಿ ಅದಕ್ಕೇನು ವೈಶಿಷ್ಟ್ಯವಿದೆ?

ಅದೇ ರೀತಿ ಡೀಫೋಬಸ್ ಕೂಡ ಕಳೆದುಹೋದ ಗತ್ತಿನಲ್ಲಿಯೇ ಪ್ರಯಾಮ್‌ನ ಅರಮನೆಯತ್ತ ನಡೆದು ಹೊರಟಿದ್ದನು. (1.62)

207. ಕಾಲದ ದೃಷ್ಟಿ, ಅದರ ನೋಟ ಕಾಲರಹಿತವಾದುದು. ಅದು ವರ್ತಮಾನದ ಮೇಲೆ ಏನನ್ನೂ ನಿರ್ಧರಿಸದು. ವರ್ತಮಾನದಾಚೆಗಿನ ಭವಿಷ್ಯದ ಸತ್ಯವನ್ನು ನಿರುಕಿಸುತ್ತದೆ. ಪರಮ ಸತ್ಯದ ಬೆಳಕಿನಲ್ಲಿ ಅದು ಎಲ್ಲವನ್ನು ತೀರ್ಮಾನಿಸುತ್ತದೆ. (1.63)

208–211. ಡೀಫೋಬಸ್‌ನಲ್ಲಿ ನಿಜವಾದ ಬಲ ಉಳಿದಿಲ್ಲ. ಏನೋ ಹಿಂದಿನ ಬಲ ಅವನಲ್ಲಿ ಇನ್ನೂ ಇದೆ. ಅಷ್ಟರ ಮೇಲಿಂದ ಆತ ಇದ್ದೂ ಬಿದ್ದೂ ವರ್ತಮಾನದಲ್ಲಿ (ಸದ್ಯದ ಯುದ್ಧದಲ್ಲಿ) ಬಡಿದಾಡಬಲ್ಲ; ಆದರೆ ಭವಿಷ್ಯವನ್ನು ಕಟ್ಟುವ ಬಲ ಅವನಲ್ಲಿ ಉಳಿದಿಲ್ಲ. ಅದು ಡೀಫೋಬಸ್‌ನಿಗೂ ಚೆನ್ನಾಗಿ ಗೊತ್ತು.

ಶರೀರ ಗಟ್ಟಿಯಾಗಿದೆ, ಹೋರಾಡಬಲ್ಲ ಬಲ ಇದೆ. ಅವನ ಆತ್ಮ ಬಲ ಕಂದಿದೆ, ಕುಂದಿದೆ. ಅವನಲ್ಲಿದ್ದುದು ಕೇವಲ ಬಲದ, ಶಕ್ತಿ ಸಾಹಸಗಳ ಪ್ರತಿಛಾಯೆ eidolon ಅಷ್ಟೇ!

ಹೇಡ್ಸನಲ್ಲಿ ಅಶೀರನ Acheron ಎಂಬ ನದಿ ಇತ್ತು; ಸುಮಾರು 14 ನೆಯ ಶತಮಾನಕ್ಕೂ ತುಸು ಮೊದಲು ಅದು ಬತ್ತಿಹೋಗಿದೆ (ಭಾರತದ ಸರಸ್ವತಿ ನದಿಯಂತೆ ಅದೂ ಸಹ ಗುಪ್ತಗಾಮಿನಿಯಾಗಿ ಹೋಗಿದೆ). ಅದೇ ನದಿಯ ತರಹ ಅವನ ಭವಿಷ್ಯ (ಟ್ರಾಯ್ ಭವಿಷ್ಯ) ಭೂತ ಕಾಲ ಸೇರಿ ಮರೆಯಾಗಲಿದೆ! ಅವನ ಜೀವನ ಹಾಗೂ ಟ್ರಾಯ್ ಬದುಕು ಅಸ್ಪಷ್ಟತೆಯ ಕಡೆಗೆ, ವಿನಾಶದ ಕಡೆಗೆ ಸರಿಯುತ್ತಿದೆ. (1.64)

213–221. ಪರ್ಗಮಾದ ಹೆಬ್ಬಾಗಿಲು ಕಾಯುವ ಭಟರು ಇವನನ್ನು ಕಂಡರು; ಬಾಗಿಲು ತೆರೆಯುವ ಮನಸ್ಸಿಲ್ಲ. ಅದೇ ತಾನೇ ಪಟ್ಟಣ ನಿದ್ರೆ ತಿಳಿದು ಎಚ್ಚರಾಗುತ್ತಿದೆ. ಬೆಳ್ಳಂಬೆಳಿಗ್ಗೆ ಇವನದೇನು ವರಾತ! ಆದರೆ ವೇಗವಾಗಿ ಬರುವ ಅವನನ್ನು ತಡೆಯುವುದೂ ಸಲ್ಲದು, ಆ ಅಧಿಕಾರ ತಮಗಿಲ್ಲ. ಒಲ್ಲದ ಮನಸ್ಸಿನಿಂದ ಬಹು ನಿಧಾನವಾಗಿ ಬಾಗಿಲು ತೆರೆದರು.

ಅರ್ಗೈವ್ Argive (ಗ್ರೀಕ್) ಯೋಧನನ್ನು ತಡೆಯಲಾಗದು. ಅವನು ವೇಗವಾಗಿ ಒಳ ಸರಿದು ಬಂದ.

222–227. ಆ ದಿನ ಬೆಳ್ಳಂಬೆಳಿಗ್ಗೆ ಆಗಿದ್ದು ಗ್ರೀಕ್ ವೀರನ ಪ್ರವೇಶ ಅಲ್ಲ. ಅದು ಟ್ರೋಜನ್‌ರ ವಿಧಿಯ ಸ್ವಾಗತ. ಈಲಿಯನ್ ಅರಮನೆಯ ಒಳಗೆ ಪ್ರವೇಶಿಸಿದ್ದು ಕೇವಲ ಡೀಫೋಬಸ್ ಅಲ್ಲ, ಅವನ ರೂಪದಲ್ಲಿ ಈಲಿಯನ್‌ರ ಸರ್ವ ನಾಶ.

ಡೀಫೋಬಸ್‌ನ ಬೆನ್ನಿನ ಹಿಂದೆಯೇ ಬಾಗಿಲು ಪುನಃ ಕಿರ್ರೆನ್ನುತ್ತ ಮುಚ್ಚಿಕೊಂಡವು. (1.65)

227–230. ಟಾಲ್ಥಿಬಿಯಸ್ ಮುದುಕನಾಗಿದ್ದಾನೆ. ನಡೆಯಲು ಬಹಳ ಶಕ್ತಿ ಇಲ್ಲ. ಕೋಲು ಊರಿ ಅದರ ಮೇಲೆ ಭಾರ ಹಾಕಿ ನಡೆಯುತ್ತಾನೆ. ಆದರೆ ಮುದುಕ ಬಲು ಜಾಣ, ತೋಳದ ಹಾಗೆ ಹೊಂಚು ಹಾಕುವವ, ಕ್ರೂರಿ ಕೂಡ. ಯಾವ ಮಾತೂ ಆಡದೇ ಸಾವಕಾಶವಾಗಿ ನಡೆದು ಬಂದ.

ಮೈಯಲ್ಲಿ ಕಸುವಿಲ್ಲ. ಆದರೆ ಅವನ ನೋಟದಲ್ಲಿ ದ್ವೇಷದ ಪ್ರತೀಕಾರದ ಸೇಡಿನ ಜ್ವಾಲೆ ಎದ್ದು ಕಾಣುತ್ತದೆ. ಸುಂದರವಾಗಿದ್ದ ಟ್ರಾಯ್ ನಗರವನ್ನು ಸಿಟ್ಟಿನಿಂದ ದ್ವೇಷದಿಂದ ನಿರುಕಿಸುತ್ತ ಕೋಲೂರುತ್ತ ನಿಧಾನವಾಗಿ ನಡೆದು ಬಂದ.

•ಇಲ್ಲಿ ಬರುವ ವಾಕ್ಯವನ್ನು ಗಮನಿಸಿ. ಇಲ್ಲಿ ಬಹು ಸುಂದರವಾದ mixed metaphor ಇದೆ. (1.66)

231–232. ಟ್ರಾಯ್ ಬಹು ಸುಂದರವಾಗಿ ನಿರ್ಮಿತವಾದ ನಗರ. ದೇವ ಶಿಲ್ಪಿ ಕಟ್ಟಿದ ನಗರ ಅದು. ಗಗನ ಚುಂಬಿ ಕಟ್ಟಡಗಳು, ದೈತ್ಯರು ವಾಸಿಸಲು ಯೋಗ್ಯವಾದ ಕಟ್ಟಡಗಳು ಅವು. ಅದ್ಭುತ ವಿನ್ಯಾಸ ಲಯಬದ್ಧವೆನಿಸುವ ರೀತಿ ಕಟ್ಟಲಾದ ಬೀದಿಗಳು, ಇಕ್ಕೆಲದಲ್ಲಿ ಮನೆ, ಅರಮನೆ, ಮಹಡಿಗಳು. ದೇವತಾ ಶಿಶುಗಳ ಅಪರೂಪದ ಉಡುಪುಗಳೇನೋ ಅನ್ನುವ ರೀತಿ ವೈವಿಧ್ಯ. ನೋಡಲು ಕಣ್ಣು ಸಾಲವು. ಕೇವಲ ನೋಟದ ಸಾಮರಸ್ಯವನ್ನು ಬಿಂಬಿಸುವ ರೀತಿ ಭವ್ಯ ಸಂರಚನೆ. ಈಲಿಯನ್ ತನ್ನ ದೈತ್ಯ ರಕ್ಷಣಾತ್ಮಕ ವ್ಯೂಹವನ್ನು ಪ್ರದರ್ಶಿಸುತ್ತ ಎದೆ ಎತ್ತಿ ನಿಂತಿರುವ ಹಾಗೆ ಅವನಿಗೆ ತೋರಿತು. (1.67)

(ಸಶೇಷ)

# ಸಾವು; ಒಂದು ವೈಜ್ಞಾನಿಕ ವಿಶ್ಲೇಷಣೆ

(ಸಾವಿನ ವಿಜ್ಞಾನ)*

ಇಂಗ್ಲೀಷ: **ಸರ್ ಜಾನ್ ವುಡ್ರೋಫ್** ಕನ್ನಡ: **ಶ್ರೀ ಪುಟ್ಟು ಕುಲಕರ್ಣಿ**

"Strive after the good before, thou art in danger,
before pain masters thee and thy mind loses its keenness."

– ಕುಲಾರ್ಣವ ತಂತ್ರ 1–97

ಸಾವಿನ ಬಗೆಗಿನ ಜಿಜ್ಞಾಸೆ ಎರಡು ಪ್ರಮುಖ ಪ್ರಶ್ನೆಗಳನ್ನು ಇಡುತ್ತದೆ. ಮೊದಲ ಪ್ರಶ್ನೆ ಎಂದರೆ, ಇಚ್ಛಾಮರಣಿಯಾದವನಿಗೆ ಸಾವು ಸಹಜ ಸಂಗತಿಯಾಗಿದ್ದರೂ ಸಹಿತ ಅದರಿಂದ ತಪ್ಪಿಸಿಕೊಳ್ಳುವದು ಅವನಿಗೆ ಹೇಗೆ ಸಾಧ್ಯವಾಗುತ್ತದೆ? ಈ ರೀತಿಯಲ್ಲಿ ಸಾವಿನಿಂದ ಇಚ್ಛಿಸಿದಷ್ಟು ದೂರವಿರುವ ಅವಕಾಶವನ್ನು ಮತ್ತು ವಾಸ್ತವದ ರಕ್ತ–ಮಾಂಸಗಳ ಬದುಕಿನ ಜೊತೆಗೇ ಇರುವದನ್ನು ಅವನು ಹೇಗೆ ಹಠಯೋಗದ ಮೂಲಕ ಸಿದ್ಧಿಸಿಕೊಳ್ಳುತ್ತಾನೆ.?

ಇದಕ್ಕಿಂತ ಮುಖ್ಯವಾಗಿ ಪಾಶ್ಚಿಮಾತ್ಯ ವೈಚಾರಿಕತೆಯಲ್ಲಿ, ಜೀವನಕ್ಕೆ ಸದಾ ಸಂಪೂರ್ಣ ಶರಣಾಗತಿಯಾಗಿ (Yessaying), ಬದುಕುವದಾಗಿದೆ. ಆದರೆ, ಇದು ತಾತ್ಕಾಲಿಕವಾಗಿ ಜೀವನದ ಒಂದು ನಿಗದಿತ ವಿಧಾನದ ರೀತಿಯಲ್ಲಿ ಒಪ್ಪಂದದಂತೆ ಬದುಕುವದಾಗಿದೆ. ಇಲ್ಲಿ ಈವಾನ್ಸ ಮೆಂಟಿಂಝ್ (ಲೇಖಕರು: ದ ಬುಕ್ ಆಫ್ ಡೆಥ್) ಹೇಳುತ್ತಿರುವದೇನೆಂದರೆ, ಟಿಬೇಟಿನ ಜನಪ್ರೀಯ ನಂಬುಗೆಗಳ ಪ್ರಕಾರವಾಗಿ ಯಾವುದೇ ಸಾವು ನೈಸರ್ಗಿಕವಲ್ಲ. ಇದು ಸಾರ್ವತ್ರಿಕ ಅಭಿಪ್ರಾಯವಿರದೇ ಹೋದರೂ, ಪುರಾತನರಲ್ಲಿ ಇಂತಹ ಅಭಿಪ್ರಾಯಗಳು ಅವರ ಅವರ ಅನುಭವಗಳನ್ನು ಆಧರಿಸಿಕೊಂಡು ರೂಪಿತವಾಗಿವೆ. ಅದಕ್ಕಿಂತ ಹೆಚ್ಚಾಗಿ, ದೇಹಶಾಸ್ತ್ರವೂ ಸಹಿತ – ನಿಜವಾಗಿಯೂ "ನೈಸರ್ಗಿಕ ಸಾವು" ಎನ್ನುವದು ಇದೆಯೇ? ಎಂದು ಅದ್ಭುತವಾದ ಪ್ರಶ್ನೆ ಕೇಳುತ್ತಿದೆ. ಅಂದರೆ ಯಾವುದೇ ಸಾವಿಗೂ ಕಾರಣವಾಗಿರುವ ವ್ರಣ/ಹುಣ್ಣು ಅಥವಾ ಗಂಭೀರವಾದ ವ್ಯಾಧಿಯ ಮೂಲಕ ಕ್ಷಯಿಸಿ ಹೋಗಬಹುದಾದ ದೇಹದ ಘಟನೆಯನ್ನು ಹೊರತು ಪಡಿಸಿದರೆ, "ಸಹಜ ಸಾವು" ಎನ್ನುವದು ಇದೆಯೇ?

ಮಾಂಸ–ಖಂಡಗಳಿಂದ ಕೂಡಿದ ದೇಹದಲ್ಲಿರುವ "ಜೀವ(ನ)ವು" ಈ ಜಗತ್ತಿನಾದ್ಯಂತವೂ ಕಾಣುತ್ತಿದೆ, ಮತ್ತು ಎಲ್ಲರಿಗೂ ತಿಳಿಸಲ್ಪಡುತ್ತಿರುವ

ವಿಷಯವೆಂದರೆ, ಪರಮ ಪವಿತ್ರವಾದ ಜೀವನ ಶೈಲಿಯ ವ್ಯಕ್ತಿಗೂ ಸಾವು ಸಂಭವಿಸುತ್ತದೆ, ಹೀಗಾಗಿ ಸಾವು ಎನ್ನುವದು ಒಂದು ನೈಸರ್ಗಿಕ ಕ್ರಿಯೆಯಾಗಿದೆ. ಅಂದರೆ ಈ ಮಾನವ ಸಂತತಿಯು ಈ ಭವ(ಪ್ರಪಂಚ)ದಲ್ಲಿ ಯಾವುದೇ ಅಡೆ–ತಡೆಯಿಲ್ಲದ ಸ್ವಚ್ಛಂದವಾದ ವಿಹರಣದಲ್ಲಿ, ಅದೂ ಅನಂತಕಾಲದಲ್ಲಿ ವಿಹರಿಸಲು ಸಾಧ್ಯವೇ ಇಲ್ಲ. ಅದಕ್ಕಾಗಿ ಅವರು ದೇವಮಾತೆಯ ಕೃಪೆಯನ್ನು ಪಡೆದುಕೊಂಡು ಅದರ ಮೂಲಕ ಸುಖಕರ ಜೀವನವನ್ನೂ ಮತ್ತು ಯಾವುದೇ ಭಯಾನಕ ಅನುಭವಗಳು ಬಾರದ ತೆರದಲ್ಲಿ ಮತ್ತು ನೋವಿನಿಂದ ಕೂಡಿರದ ಹಂತದಲ್ಲಿ ಸಾವು ಸಂಭವಿಸಲಿ ಎಂದು ಪ್ರಾರ್ಥಿಸಿಕೊಳ್ಳಬೇಕು. [ವಿನಾ ದೈನ್ಯೇನ ಜೀವಿತಂ ಅನಾಯಾಸೇನ ಮರಣಂ]. ಈ ಹುಟ್ಟುಸಾವಿನ ಮೂಲಕವೇ ಮುಕ್ತತ್ವದ (ಬುದ್ಧತ್ವದ) ಹಂತವನ್ನು ಪಡೆಯಲು ಈ ವಿಶ್ವಮಾತೆಯ ಕೃಪೆ ಪಡೆಯಬೇಕು.

ಇನ್ನು ಎರಡನೇ ಪ್ರಶ್ನೆ ಎಂದರೆ, "ಸಾವನ್ನು ಹೇಗೆ ಆಹ್ವಾನಿಸುವದು ಮತ್ತು ಮರಣ ಹೊಂದುವದು?" ಈ ಎರಡನೇ ಪ್ರಶ್ನೆಯ ವಿಷಯವನ್ನು ಪರಿಹರಿಸಲು, ಈ "ದ ಟಿಬೇಟಿಯನ್ ಬುಕ್ ಆಫ್ ಡೆಥ್" ಪುಸ್ತಕವು ವಿವರಣೆಗಳ ಮೂಲಕ ವಿವೇಚಿಸುತ್ತಿದೆ. ಇಲ್ಲಿ "ಸಾವಿನ ತಂತ್ರಗಳು" ಸಾವನ್ನು ಒಂದು ಉದಾತ್ತ, ಉತ್ತಮ ಭವಿಷ್ಯದ ಜೀವನಕ್ಕೆ ಇರುವ ಪ್ರವೇಶ"ವೆಂದು ವಿವರಿಸುತ್ತಿದೆ. ಈ ಜನನ–ಮರಣಗಳ ಮೂಲಕ ಮಾಂಸ–ಖಂಡಗಳಲ್ಲಿನ ಜೀವನದ ವ್ಯವಸ್ಥೆಯಲ್ಲಿಯೇ ನಿರ್ವಾಣತ್ವವನ್ನು ತಲುಪುವದು ಹೇಗೆ ಎನ್ನವುದನ್ನು ವಿವರಿಸುತ್ತಿದೆ.

ಈ "ಸಾವಿನ ಪುಸ್ತಕವು" ವಿಶೇಷವಾಗಿ ಅತ್ಯಾಸಕ್ತಿಯಿಂದಲೇ ಒಂದು ಆಧಾರಗ್ರಂಥವಾಗಿ ಪಥ್ಯವನ್ನೂ ಮತ್ತು ಈ ಸಾವಿನ ಬಗೆಗೆ ಕೂಲಂಕಷವಾದ ಪರಿಚಯವನ್ನೂ ನೀಡುತ್ತಿದೆ. ಸಾವಿನ ನಂತರದಲ್ಲಿ ಸಂಭವಿಸಬಹುದಾದ ಪುನರ್ಜನ್ಮ ಅಥವಾ ಸಾವಿನ ಸಮಯವನ್ನು ಆಧರಿಸಿಕೊಂಡು ರೂಪಣೆಗೊಳ್ಳುವ – ದೀರ್ಘಕಾಲೀನ ಅಥವಾ ಅಲ್ಪಕಾಲೀನ ಸಮಯದ ವರೆಗೆ ಇರಬಹುದಾದ – ಆತ್ಮರೂಪಿ ವ್ಯವಸ್ಥೆಯನ್ನು ಕುರಿತು ವಿಶ್ಲೇಷಿಸುತ್ತದೆ. ಬೌದ್ಧ ವೈಚಾರಿಕತೆಯಲ್ಲಿ ಜೀವನವೆನ್ನುವದು ಮಾನವ–ಚಿತ್ತಿನ (ಚೈತನ್ಯದ–Consciousness) ಯಶಸ್ವೀ ಹಂತಗಳ ಸರಮಾಲೆಯನ್ನು ಒಳಗೊಂಡ ವ್ಯವಸ್ಥೆಯಾಗಿದೆ.

ಚಿತ್ತಿನ ಪ್ರಥಮ ಅವಸ್ಥೆಯಾದ ಜನನದಿಂದ ಪ್ರಾರಂಭಗೊಂಡು ಅದರ ಮತ್ತೊಂದು ಹಂತದ ಅಂದರೆ ಸಾವಿನ ಸಂದರ್ಭದಲ್ಲಿ ಇರುವ ಚಿತ್ತಿನ ಅವಸ್ಥೆ ಮತ್ತು ಈ ಎರಡೂ ಹಂತಗಳ ಮಧ್ಯಂತರದ ಅವಧಿಯಲ್ಲಿನ ಗತಿ–ಸ್ಥಿತಿಯನ್ನು

ಜೀವಿಯೊಬ್ಬನು ಅನುಭವಿಸಲೇಬೇಕಾಗುತ್ತದೆ. ಈ ಎರಡೂ ಹಂತಗಳನ್ನು ಅರಿತುಕೊಳ್ಳುವದನ್ನು "ಸಾವಿನ ಪ್ರಜ್ಞೆ" ಎಂದು ಕರೆಯಬಹುದು. ಈ ಮಧ್ಯಂತರದ ಅವಧಿಯನ್ನು ಅಂತರಾಭಾವ (ಇದನ್ನು ಬೌದ್ಧ ಧರ್ಮದಲ್ಲಿ ಬಾರ್ಡೋ ಅಥವಾ ಮಧ್ಯಂತರ ಹಂತವೆಂದು) ಕರೆಯುತ್ತಾರೆ. ಅದರಲ್ಲೂ ಮತ್ತೆ ಮೂರು ಭಾಗಗಳನ್ನಾಗಿಸಿ ಚಿಕ್ಕಾಯಿ, ಚೌನಿಡ್ ಮತ್ತು ಸಿಡ್ ಪಾ ಅಥವಾ ಸಿರ್ ಪಾ (Sidpa) ಬಾರ್ಡೋಗಳೆಂದು ವಿಂಗಡಿಸುತ್ತಾರೆ.

ಈ ವಿಧಾನವು, ಹಲವು ರೂಪಗಳಲ್ಲಿ ಟಿಬೇಟಿನಾದ್ಯಂತವೂ ಪ್ರಚಲಿತದಲ್ಲಿದೆ. ಅವುಗಳ ಪೈಕಿ ಒಂದು ವಿಧಾನದ ಕುರಿತು, ಡಾ॥ ಇವಾನ್ ಮೆಂಟಿಂಝ್ಸ ಇದರ ಅಧ್ಯಯನದ ಜೊತೆಗೆ ಈಜಿಪ್ತ ದೇಶದ "ಸಾವಿನ ಗ್ರಂಥ" [The Egyptian Book of Death] ಮತ್ತು "ಕಾ" ಗ್ರಂಥ (ಡಬಲ್ ಹೆಸರಿನಿಂದ ಪ್ರಚಲಿತದಲ್ಲಿರುವ ಗ್ರಂಥ), ಅದೇ ರೀತಿಯಲ್ಲಿ De Arte Moriculi ಗ್ರಂಥ ಮತ್ತು ಇದೇ ವಿಷಯವನ್ನು ಚರ್ಚಿಸುತ್ತಿರುವ ಮಧ್ಯಯುಗದ ಸಮಯದಲ್ಲಿ ಪ್ರಚಲಿತವಿದ್ದ "ಸಾವಿನ ರಹಸ್ಯದ ಕಲೆ"ಯ ಬಗೆಗೆ ಪ್ರಚಲಿತವಿದ್ದದ ಭಾಗಗಳನ್ನು, ಜೊತೆಗೆ ಭಾರತೀಯ ಪರಂಪರೆಯಲ್ಲಿ ಇದ್ದ ಗರುಡ ಪುರಾಣದ ಪ್ರೇತಖಂಡವನ್ನೂ ಸಹಿತ ಇಲ್ಲಿ ಚರ್ಚಿಸಿದ್ದಾರೆ. ಬಹು ಮುಖ್ಯವಾಗಿ ಓರ್ಫಿಕ್ ಮ್ಯಾನುವಲ್‌ನ [The Descent into Hades] (**ಅವನು ನರಕಕ್ಕೆ ಇಳಿದನು** - He Descended into Hell.) ಈ ವಿಷಯಗಳನ್ನು ವಿವರಿಸಿದ್ದಾರೆ. ಅದೇ ರೀತಿಯಲ್ಲಿ ಇಂತಹ ಎಲ್ಲ ವಿಷಯಗಳಿಗೂ ಮಾರ್ಗದರ್ಶಿ ಸೂತ್ರಗಳಂತಿದ್ದ ಹಿಂದೂ ಸಂಪ್ರದಾಯದ "ಪ್ರೇತಖಂಡದ" ವಿವರಗಳನ್ನೂ ಸಹಿತ ಇಲ್ಲಿ ವಿಶ್ಲೇಷಿಸಲಾಗಿದೆ. ಇವುಗಳ ಜೊತೆಗೆ ಸ್ವಿಡನ್ ಬೋರ್ಗನ "De Colo et de Inferno", ರೂಸಿಕಾ ಬರೆದಿರುವ Infereno! ಹಾಗೂ 'ಮರಣ–ಸ್ವರ್ಗ–ನರಕ–ದೈವ–ಶಿಕ್ಷೆಗಳ ತತ್ತ್ವ ಶಾಸ್ತ್ರದ (Eschalogical) ಪ್ರಾಚೀನ ಹಾಗೂ ಅರ್ವಾಚೀನ ವಿಷಯಗಳ ವಿವರವಾದ ವಿಶ್ಲೇಷಣೆ ಈ ಪುಸ್ತಕದಲ್ಲಿದೆ.

ಗರುಡ ಪುರಾಣವು ಸಾವಿನ ಸಂದರ್ಭದಲ್ಲಿ ಆಚರಿಸಬೇಕಾಗಿರುವ ಆಚರಣೆಗಳನ್ನು, ಸಾವಿನ ಕ್ಷಣಗಳನ್ನು, ಸಾವಿನ ನಂತರದ ದಹನ/ದಫನದ ವಿಧಿವಿಧಾನಗಳನ್ನು, ಅದರ ಸಂರಚನೆಯೊಂದಿಗೆ ನಿರೂಪಿಸಲ್ಪಟ್ಟಿದೆ. ಅದೂ ಪ್ರೇತಾಧಿಕಾರದ ರಿವಾಜಿನ ಹಿನ್ನೆಲೆಯಲ್ಲಿ ಆಚರಣೆ, ಮತ್ತು ಪ್ರೇತಕ್ಕೆ (ಇನ್ನೂ ಮುಕ್ತಾಯ ಹಂತಕ್ಕೆ ಹೋಗಿರದ ಆತ್ಮದ ಸ್ಥಿತಿ) ದೊರಕಬಹುದಾದ ನೂತನ

ಶರೀರ, ಅದರಲ್ಲೂ ಚಿತೆಯಲ್ಲಿ ದಹನಗೊಂಡಿದ್ದ ದೇಹದಲ್ಲಿದ್ದ ಆತ್ಮಕ್ಕೆ ಸಿಗಬಹುದಾದ ಮುಂದಿನ ರೂಪ, ಹಾಗೂ ಅಂತಿಮ ನಿರ್ಣಯಗಳು, ಮತ್ತೆ ಪುನರ್ಜನ್ಮ ಪಡೆದು ಮತ್ತೊಂದು ದೇಹಧಾರಣೆ ಮಾಡಿಕೊಂಡು ಬರುವದರ ಬಗೆಗೆ ಸವಿವರವಾದ ವಿಚಾರಗಳು ಈ ಪುಸ್ತಕದಲ್ಲಿ ಇವೆ. ಇಲ್ಲಿ ಸಾವಿನ ಗ್ರಂಥದ ಮೂಲ ವಿಷಯಗಳು ಮತ್ತು ಇವಾನ್ ಮೆಂಟಿಂರ್ಝ್‌ನ ಪರಿಚಯಾತ್ಮಕ ವಿಶ್ಲೇಷಣೆಗಳು, ಈ ಸಾವಿನ ವಿಜ್ಞಾನದ ಪಥದಲ್ಲಿ ಒಂದು ಮೌಲ್ಯದಾಯಕ ಕೊಡುಗೆಯಾಗಿದೆ. ಅದರಲ್ಲೂ ಬೌದ್ಧ ಧರ್ಮದ ಮಹಾಯಾನ ಪರಂಪರೆಯಲ್ಲಿ - ಟಿಬೇಟಿನಲ್ಲಿ ಅನುಷ್ಠಾನದಲ್ಲಿರುವ ತಾಂತ್ರಿಕ ಪದ್ಧತಿಯ ವಿವರಣೆಗಳಂತೂ ಈ ವಿಷಯದಲ್ಲಿ ಅಪ್ರತಿಮ ಕೊಡುಗೆಗಳಾಗಿವೆ. ಹಾಗೆಂದು ಈ ಪುಸ್ತಕ ಕೇವಲ ಸಾವಿನ ಕುರಿತೇ ವಿವರಣೆಗಳನ್ನು ಕೊಡುತ್ತಿಲ್ಲ. ಒಂದು ಅಪರೂಪದ ವಿಷಯದ ಬಗೆಗೆ ಅಪರೂಪದ ಘಟನೆಗಳ ಮೂಲಕ ಒದಗಿಸಲಾಗಿರುವ ಈ ಸಂಗತಿಗಳನ್ನು ಕೇವಲ ಸ್ವಾಗತಿಸುವದಷ್ಟೇ ಅಲ್ಲ, ಜೊತೆಗೆ ಯಾವುದೇ ಧರ್ಮದಲ್ಲಿ, ಮತದಲ್ಲಿ ಆಚರಣೆಯಲ್ಲಿರುವ ಧಾರ್ಮಿಕ ವಿಧಿ–ವಿಧಾನಗಳ ವಿಚಾರವಾಗಿ ಮತ್ತು ಅದರ ತತ್ತ್ವಜ್ಞಾನ, ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿಯೂ ಸಹಿತ ಅನುಷ್ಠಾನಗೊಂಡಿರುವ ವಿವರಗಳನ್ನು ಇಲ್ಲಿ ಕಾಣಬಹುದು.

ಈ ಪುಸ್ತಕವು ಮೂಲತಃ ಮೂರು ವಿಶೇಷ ಗುಣಗಳನ್ನು ಹೊಂದಿದೆ. ಮೊದಲನೇಯದಾಗಿ–

1) ಸಾವಿನ ಕಲೆ (The Art of Dying)

ಸಾವಾಗಲೀ ಅಥವಾ ಜೀವನವೇ ಆಗಲಿ ಇವೆರಡೂ ಪರಿಪೂರ್ಣ ಕಲೆಯ ಆಯಾಮಗಳಾಗಿವೆ. ಇವೆರಡೂ, ಸದಾ ಕಾಲದಲ್ಲೂ ದಿಗ್ಭ್ರಮೆಗೊಳಿಸುತ್ತಿದ್ದರೂ ಸಹಿತ, ಇವುಗಳ ಮಧ್ಯದಲ್ಲಿಯೇ ಜೀವನವು ಸಾಗುತ್ತಿರುವದೂ ಒಂದು ಕಲೆಯಾಗಿಯೇ ಇರುವದೂ ಒಂದು ಆಶ್ಚರ್ಯದ ವಿಷಯವೇ ಆಗಿದೆ. ಇದನ್ನು ಅತ್ಯಂತ ಸೂಕ್ತವಾಗಿ ಹೇಳುತ್ತಿರುವ ಬಂಗಾಳೀ ಭಾಷೆಯಲ್ಲಿ ಒಂದು ಮಾತಿದೆ "ಯಾವ ರೀತಿಯಲ್ಲಿ ಸಾವು ಬರುತ್ತದೆ ಎನ್ನುವದನ್ನು ಅರಿತುಕೊಳ್ಳದಿದ್ದರೆ, ಜಪ ಮತ್ತು ತಪಗಳಿಂದ ಯಾವ ಪ್ರಯೋಜನವಿದೆ?"

2) ಸಾವಿನ ಅಂತಿಮ ಘಳಿಗೆಯ ದಾಖಲಾತಿ

ಇದು ಜೀವಿಯೋರ್ವನ ಅಂತಿಮ ಘಳಿಗೆಯ ಧಾರ್ಮಿಕ ವಿಧಾನದ ಭೇಷಜಶಾಸ್ತ್ರ(Therapecitic)ವಾಗಿದೆ. ಮತ್ತೆ ಸಾವಿನ ಘಳಿಗೆಯಲ್ಲಿ

ಇದ್ದಾಗ, ಭೂತೋಚ್ಚಾಟನೆ (Psychiargy Exorcising), ಬೋಧನೆ (Instructing), ಸಂತೈಸುವಿಕೆ ಮತ್ತು ಸುಭದ್ರಗೊಳಿಸುವ (Fortifying) ಕ್ರಿಯೆಗಳ ಮೂಲಕ, ಸಾವಿನ ಹಂತದಲ್ಲಿದ್ದ ವ್ಯಕ್ತಿಯು "ಈ ಹಂತದಿಂದ" ಮುಂದೆ ಯಾವ "ಹಂತದೆಡೆಗೆ" ಸಾಗುತ್ತಿದ್ದಾನೆ ಎನ್ನುವದನ್ನು ದಾಖಲಿಸುವ ವಿವರಗಳನ್ನು ನೀಡುತ್ತಿದೆ.

3) ಮೃತನ ಆತ್ಮದ ಸಂಚಾರದ ಸೂತ್ರಗಳು

ಮೃತನ ಆತ್ಮವು, ಈ ಮಧ್ಯಂತರದ ಹಂತದಲ್ಲಿ ಅನುಭವಿಸುವ ಅನುಭವಗಳನ್ನು ವಿವರಿಸುತ್ತದೆ. ಜೊತೆಗೆ ಈ ವಿಷಯದ ಬಗೆಗಿನ ಸೂತ್ರಗಳನ್ನು ಒಳಗೊಂಡಿದೆ.

ಹೀಗಾಗಿ ಈ ಪುಸ್ತಕವು, ಆತ್ಮರೂಪದಲ್ಲಿ ಪರಲೋಕಕ್ಕೆ (ಅನ್ಯಲೋಕಕ್ಕೆ) ತೆರಳುವವರಿಗೆ ಒಂದು ಮಾರ್ಗದರ್ಶೀ ಪಥ್ಯವಾಗಿದೆ. ಅವತಾರ ಅಥವಾ ಪುನರ್ಜನ್ಮದ ಸಿದ್ಧಾಂತ (ತತ್ವ) ಒಂದು ಕಡೆ ಮತ್ತು ಪುನರುತ್ಥಾನದ ಸಿದ್ಧಾಂತ ಇನ್ನೊಂದು ಕಡೆ ಹೀಗೆ ಎರಡು ವಿಭಾಗಗಳು ಜಗತ್ತಿನಾದ್ಯಂತ ಪ್ರಚಲಿತದಲ್ಲಿವೆ. ಅದರಲ್ಲೂ ಪ್ರಚಲಿತದಲ್ಲಿರುವ ಭಾರತೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ಕರೆಯಲ್ಪಡುವ ಬ್ರಾಹ್ಮಣ ಪಂಥ (ಹಿಂದೂ ಧರ್ಮ), ಬೌದ್ಧ ಮತ, ಕ್ರಿಶ್ಚಿಯನ್ ಮತ ಮತ್ತು ಇಸ್ಲಾಂ ಮತಗಳಲ್ಲೆಲ್ಲ, ಅಲ್ಪ–ಸ್ವಲ್ಪ ವ್ಯತ್ಯಾಸದೊಂದಿಗೆ ಚರ್ಚಿಸಲ್ಪಡುತ್ತಿರುವ ವಿಷಯಗಳಾಗಿವೆ.

ಕ್ರಿಶ್ಚಿಯನ್ ಮತವು, ತನ್ನ ಪೂರ್ವ ಪರಂಪರೆಯ ಕರ್ಮಠತನದ ಹಂತದಲ್ಲಿದ್ದಾಗ ಮತ್ತು ಅತ್ಯಂತ ಪ್ರಾಚೀನವಾದ ಮತ್ತು ಸರ್ವಗ್ರಾಹ್ಯವಾಗಿ ಒಪ್ಪಿಕೊಳ್ಳಲ್ಪಟ್ಟ "ವಿಶ್ವಾಸವಾದದ ಸಂಸಾರ (Kuklos genesison)" ಅಥವಾ ಪುನರ್ಜನ್ಮವನ್ನು ತಿರಸ್ಕರಿಸುವ ವಿಚಾರಧಾರೆಯಲ್ಲಿದ್ದಾಗ, ಮತ್ತು "ಒಂದೇ ವಿಶ್ವ ಒಂದೇ ಜನ್ಮ" ಎನ್ನುವ ಸಿದ್ಧಾಂತವನ್ನು ಒಪ್ಪಿಕೊಂಡಿತ್ತು. ಜನನ ಮತ್ತು ಮರಣ ಇವೆರಡನ್ನೂ "ಪ್ರಥಮ ಹಾಗೂ ಅಂತಿಮ ಹಂತದ ಸಿದ್ಧಾಂತ"ವನ್ನು ಒಪ್ಪಿಕೊಳ್ಳುತ್ತದೆ. ಇವೆರಡರಲ್ಲಿ ಒಂದು ನೈಸರ್ಗಿಕ ದೇಹದಲ್ಲಿ ಇದ್ದು, ಪುನರುತ್ಥಾನದ ಮೂಲಕ ಮತ್ತೆ ಇನ್ನೊಂದು ದೇಹದಲ್ಲಿ ಬದುಕು ಮುಂದುವರೆಸುವ ಹಂತದಲ್ಲಿ ಬರುವ ಸಿದ್ಧಾಂತವನ್ನೂ ಒಪ್ಪಿಕೊಂಡಿತ್ತು.

ಇದನ್ನು ಸಂಕ್ಷಿಪ್ತವಾಗಿ ಹೇಳುವದಾದಲ್ಲಿ, ಅದೇ "ಆತ್ಮದ ಪರಕಾಯ ಪ್ರವೇಶ (Metempsychosis)"ವಾಗಿದೆ. ಅಂದರೆ ಮೊದಲಿದ್ದ ದೇಹವೇ

ಪುನರುತ್ಥಾನದ ಮೂಲಕ ಮತ್ತೂ ಅಧಿಕ ಅವಧಿಯವರೆಗೆ, ನಿಗದಿಗೊಳಿಸಲಾಗಿದ್ದ ಜೀವನಾವಧಿಗಿಂತ ಮತ್ತೆ ಹೆಚ್ಚಿನ ಸಮಯ "ಜೀವನ"ಕ್ಕಾಗಿ ಉಳಿದು ಸೇವೆ ಮಾಡುವ ಕ್ರಿಯೆಯಾಗಿದೆ. ಆದರೆ ತದನಂತರದಲ್ಲಿ ರೂಪಣೆಗೊಂಡ ಧಾರ್ಮಿಕ ನಿಯಮಗಳು, ಈ ರೀತಿಯ ಜೀವನಗಳನ್ನು ಕೇವಲ ಎರಡೇ ಎರಡು ಹಂತಕ್ಕೆ ಸೀಮಿತಗೊಳಿಸಿದವು. ಅದರಲ್ಲೂ ಪ್ರಥಮ ಅಥವಾ ವರ್ತಮಾನದ ಸ್ಥಿತಿಯ ಅವನ ಗುಣಗಳು, ಮುಂದೆ ಕಾಲಾತೀತವಾಗುವ ಹಂತದಲ್ಲಿ ಅಥವಾ ಭವಿಷ್ಯದಲ್ಲಿ ಜರುಗುವ ಎರಡನೇ ಹಂತದ ಘಟನೆಗಳಲ್ಲಿ ಇರುವ ವಿಧಾನವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವ ನಿಬಂಧನೆಗಳು ರೂಪಿಸಲ್ಪಟ್ಟವು.

ಆದರೆ ಅದೇ ಸಮಯಕ್ಕೆ ಬ್ರಾಹ್ಮಣ ಸಿದ್ಧಾಂತದ (ಭಾರತೀಯ ವ್ಯವಸ್ಥೆಯಲ್ಲಿ) ಮತ್ತು ಬೌದ್ಧ ಮತಗಳಲ್ಲಿ ಇವುಗಳನ್ನು ಒಪ್ಪಿಕೊಂಡು "ವೃಕ್ಷವೊಂದು ಉರುಳಿ ಬೀಳುವಂತೆ ಮತ್ತು ಮಲಗುವಂತೆ" ಎನ್ನುವ ಸಿದ್ಧಾಂತದಲ್ಲಿ ಒಪ್ಪಿಕೊಂಡು ಅನುಷ್ಠಾನಕ್ಕೆ ತೊಡಗಿದವು. ಈಗಲೂ ಇದೇ ನಿಬಂಧನೆ ಮುಂದುವರೆದಿದೆ. ಆದರೆ ಉರುಳಿ ಬಿದ್ದ ವೃಕ್ಷವು, ಅದೇ ಸ್ಥಳದಲ್ಲಿ ಅದೇ ರೂಪದಲ್ಲಿ ಬಹುಕಾಲ ಇರಲು ಸಾಧ್ಯವಿಲ್ಲ ಎನ್ನುವ ನಂಬುಗೆಯೂ ಇದೆ. ಈ ತೆರನಾದ "ಆಪ್ತ ವಿಶ್ವಾಸದ" ಆಧಾರದಲ್ಲಿ ಅನುಯಾಯಿಯಾಗಿರುವ ಈ ಎರಡೂ ಪಂಥಗಳಿಗೆ, ಸದ್ಯ ಅಸ್ತಿತ್ವದಲ್ಲಿರುವ ವಿಶ್ವವು ಆದಿಯೂ ಅಲ್ಲ; ಅಂತ್ಯವೂ ಅಲ್ಲ. ಅನಂತಾನಂತ ಸರಣಿಗಳ ವ್ಯವಸ್ಥೆಯಲ್ಲಿ ಈಗಿನದೂ ಒಂದು "ಸ್ಥಿತಿ" ಅಷ್ಟೇ. ಈ ಆದ್ಯಂತರಹಿತವಾದ ಅನಂತಾನಂತವು ಪ್ರತಿಯೊಂದು ಘಟನೆಯಲ್ಲಿಯೂ ಪ್ರಕಟಗೊಳ್ಳುತ್ತ ಮತ್ತೆ ಅದೃಶ್ಯವಾಗುತ್ತ (ಮರಣ ಹೊಂದುತ್ತ/ರೂಪಾಂತರವಾಗುತ್ತ) ಕಾಣದಂತಾಗುತ್ತ ಇರುತ್ತದೆ. ಇದೇ ಸಮಯದಲ್ಲಿ ಈ ಜನನ–ಮರಣಗಳ ಬಂಧ(ಸಂಸಾರ)ದಿಂದ ಸಂಪೂರ್ಣ ಬಿಡುಗಡೆ ಹೊಂದಿ, ಮುಕ್ತಿಯ (ನಿರ್ವಾಣತ್ವ) ಹಂತವನ್ನು ಪಡೆಯುವ ವರೆಗೂ, ಮಮಕಾರ ರಹಿತವಾದ ಜೀವನ ವಿಧಾನವನ್ನು ಅನುಸರಿಸಬೇಕಾದ ನಿಯಮಗಳು ರೂಪಿಸಲ್ಪಟ್ಟಿವೆ. ಉಚ್ಚ ವಿಚಾರಗಳ ಮೂಲಕ ಅನುಷ್ಠಾನಗೊಳ್ಳುವ ಕಾರ್ಯಗಳು ಅದರ ಮೂಲಕ ರೂಪುಗೊಳ್ಳುವ ಜ್ಞಾನ, ಭಕ್ತಿ ಮತ್ತು ನೀತಿಶಾಸ್ತ್ರದ (Morallity) ಕುರಿತು, ಹಲವಾರು ಸಮರ್ಥ, ಯಶಸ್ವೀ ಉದಾಹರಣೆಗಳನ್ನು ಕೊಡುತ್ತ, ಉಪದೇಶ ನೀಡುತ್ತವೆ. ಹೀಗಾಗಿ ಮುಕ್ತಿ ಎನ್ನುವದು "ಜೀವವು ಹೊಂದಬಹುದಾದ ತುರೀಯಾವಸ್ಥೆ"ಯಾಗಿದೆ.

ಇದನ್ನೇ ನಿಶ್ಶೂನ್ಯವೆಂತಲೂ (Void) ನಿರ್ವಾಣವೆಂದೂ ಮತ್ತೆ ಹಲವು ಹೆಸರುಗಳಲ್ಲಿ ಗುರುತಿಸಲಾಯಿತು. ಇದರಿಂದಾಗಿ "ಒಂದೇ ವಿಶ್ವ; ಒಂದೇ ಜನ್ಮ" ಎನ್ನುವ ಸಿದ್ಧಾಂತವನ್ನು ಇವು ಒಪ್ಪುವದಿಲ್ಲ. ಅದರಲ್ಲೂ ಈ ಭೂಮಂಡಲದಲ್ಲಿ ಜನಿಸಿದ ಮಾನವ(ಸಂತತಿಗೆ)ನಿಗೆ ಕೇವಲ ಒಂದೇ ಒಂದು ಜನ್ಮ ಎನ್ನುವದನ್ನಂತೂ ಮೊದಲು ಒಪ್ಪುವದಿಲ್ಲ. ಮತ್ತೂ ಮುಖ್ಯವಾಗಿ ಮಾನವ ಸಂತತಿಯಲ್ಲಿ "ಕೆಲವರಿಗೆ ಮಾತ್ರ" ಸ್ವರ್ಗದ ದಿವ್ಯ ಜೀವನ ಸಿಗುತ್ತದೆ ಎನ್ನುವದನ್ನೂ ಒಪ್ಪುವದಿಲ್ಲ. ಕೆಲವರಿಗೆ ಸದಾ ನರಕದ ಶಿಕ್ಷೆಯೇ (Limbo) ಖಾಯಂ ಎನ್ನುವದನ್ನೂ ತಿರಸ್ಕರಿಸಲಾಗುತ್ತದೆ. ಯಾವುದೇ ವ್ಯಕ್ತಿ ಕೇವಲ ನರಕದಲ್ಲಿಯೇ ಕರಗಿ ಹೋಗುತ್ತಾನೆ ಎನ್ನುವ ಕಲ್ಪನೆಯೇ ಈ ಪಂಥಗಳಲ್ಲಿ ಇಲ್ಲ.

ಆದಾಗ್ಯೂ ಸ್ವರ್ಗದ ದಿವ್ಯಾನುಭಾವವನ್ನಾಗಲೀ ಅಥವಾ ನರಕದ ಘೋರಾತಿಘೋರ ಶಿಕ್ಷೆಯನ್ನು ಅನುಭವಿಸಲು ಸೂಕ್ತವಾದ "ಶರೀರ ವ್ಯವಸ್ಥೆಯ" (ಬದುಕಿರುವ ಶರೀರದ ರೂಪದಲ್ಲಿ ಅಲ್ಲ) ಹಂತವನ್ನು ಮರಣ ಹೊದಿದ ವ್ಯಕ್ತಿಯ ಚೇತನವು ಪಡೆದುಕೊಳ್ಳುತ್ತದೆ ಎನ್ನುವ ವಿಷಯದಲ್ಲಿ ಅಚಲವಾದ ವಿಶ್ವಾಸವಿದೆ. ಏಕೆಂದರೆ ಸ್ವರ್ಗವಾಗಲೀ ಅಥವಾ ನರಕವಾಗಲೀ, ಇವು ಸಾವಿನ ನಂತರದಲ್ಲಿ ಪಂಚಭೂತಗಳಲ್ಲಿ ಸಂಪೂರ್ಣವಾಗಿ ಲೀನವಾಗಿರುವ ಶರೀರಕ್ಕೆ ಅಲ್ಲವೇ ಅಲ್ಲ ಎನ್ನುವದನ್ನೂ ವಿಶ್ವಾಸದಿಂದಲೇ ಒಪ್ಪಿಕೊಂಡಿದ್ದಾರೆ.

ಅದ್ವೈತವಾದದ (ವಿದೇಹಮುಕ್ತಿ) ಅನುಯಾಯಿಗಳನ್ನು ಹೊರತು ಪಡಿಸಿ, ಉಳಿದಂತೆ ಎಲ್ಲರೂ ಹೊಂದಿರುವ ವಿಶ್ವಾಸವೆಂದರೆ "ಕೆಲವು ದೇಹಗಳು ಯಾವಾಗಲೂ ಅಸ್ತಿತ್ವವನ್ನು ಹೊಂದಿರುತ್ತವೆ, ಮತ್ತು ಆ ರೀತಿ ಇರಬೇಕಾದುದು ಅವಶ್ಯವೂ ಹೌದು" ಎಂದು ನಂಬುತ್ತಾರೆ. ಈ ನಾಲ್ಕೂ (ಹಿಂದೂ/ಬೌದ್ಧ/ ಕ್ರಿಶ್ಚಿಯನ್/ಮುಸ್ಲೀಂ) ಧರ್ಮಗಳು ದೃಢೀಕರಿಸುತ್ತಿರುವದೇನೆಂದರೆ, ಪ್ರತಿಯೊಂದೂ ದೇಹದಲ್ಲಿ ಸೂಕ್ಷ್ಮಾತಿಸೂಕ್ಷ್ಮವಾದ (Infinitesimal) ಅಂಶವೊಂದು ಇದ್ದು, ಇದು ಸಾವಿನ ನಂತರದಲ್ಲೂ ಸಹಿತ ಅಸ್ತಿತ್ವವನ್ನು ಉಳಿಸಕೊಳ್ಳುವ ಜೀವಾಳ (Vital) ಮತ್ತು ಆತ್ಮಿಕ ರೂಪ (Psychical) ವಾಗಿ ಈ ಭವ (ಭೌತಿಕ ದೇಹದ /ರಕ್ತ–ಮಾಂಸ ತುಂಬಿ ರಚಿತಗೊಂಡಿರುವ) ದೇಹದಲ್ಲಿಯೇ ಇರುತ್ತದೆ. ಇದು ಶಾಶ್ವತವಾದ ಅಸ್ತತ್ವವಾಗಿಯೋ ಅಥವಾ "ಸ್ವ(ಆತ್ಮ)" ಆಗಿಯೋ ಇರುತ್ತದೆ. ಈ ವಿಷಯವನ್ನು ಎಲ್ಲ ಮತಾನುಯಾಯಿಗಳೂ ಒಪ್ಪಿಕೊಂಡಿದ್ದಾರೆ. ಇದನ್ನೇ ಬ್ರಾಹ್ಮಣ ಪರಂಪರೆಯಲ್ಲಿ (ಭಾರತೀಯ ಅಥವಾ ಹಿಂದೂ ಪಂಥದಲ್ಲಿ)

ಆತ್ಮವೆಂದೂ, ಮುಸ್ಲೀಂ ಪಂಥದಲ್ಲಿ "ರೂಹ (Ruh)" ಎಂದೂ ಮತ್ತು ಕ್ರಿಶ್ಚಿಯನ್ ಪಂಥದಲ್ಲಿ ಸೋಲ್ (Soul) ಎಂದೂ ಕರೆಯಲಾಗುತ್ತಿದೆ. ಈ ಎಲ್ಲ ವಿಷಯಗಳನ್ನು ಒಳಗೊಂಡ ಈ ವ್ಯವಸ್ಥೆಯನ್ನು ಅದರಲ್ಲೂ ಸಂಕೀರ್ಣಮಯವಾದ ಈ ಸೈದ್ಧಾಂತಿಕ ನೆಲೆಯ ಚಟುವಟಿಕೆಗಳಿಂದ ಕೂಡಿದ "ಸ್ಕಂದ"ದಂತೆ, ಮಾನಸಿಕ ಮತ್ತು ಭೌತಿಕ ರೂಪದಲ್ಲಿ, ಆಯಾ ಜೀವನದ ಕರ್ತವ್ಯಗಳೇ ಎನ್ನುವಂತೆ, ನಿರಂತರವೂ ಸಂಕೀರ್ಣಮಯವಾದ ಪರಿವರ್ತನೆ ಹೋದುತ್ತಿರುವ ಮತ್ತು ಇವೆಲ್ಲವೂ ಒಂದರಿಂಲೇ ಒಂದು ಅವಲಂಬಿತವಾಗಿ ಉದ್ಭವಿಸುತ್ತ, ರೂಪಾಂತರವಾಗುತ್ತ ಇರುವ ಎಲ್ಲ ಅವಸ್ಥೆಯನ್ನು ಭೌದ್ಧ ಧರ್ಮ ವಿವೇಚಿಸುತ್ತದೆ.

ಹೀಗಾಗಿ ಇಲ್ಲಿ, ಸಾವು ಎನ್ನುವದು ಅಂತಿಮ ಹಂತ ಅಲ್ಲವೇ ಅಲ್ಲ. ಆದರೆ ಈ ಭೌತಿಕ ಶರೀರದ ವ್ಯವಸ್ಥೆಯಿಂದ ಮುಕ್ತ ನಾಗಿ ಹೊರ ಹೋಗುತ್ತಿರುವ "ಪ್ರಾಣ(Psyche)ದ ಅಸ್ತಿತ್ವದ ಬಗೆಗೆ ಸಂಪೂರ್ಣ ವಿಶ್ವಾಶವಿದೆ. ಇಲ್ಲಿ ಪ್ರಾಣವು (ಆತ್ಮವು) ನೂತನ ಲೋಕವೊಂದನ್ನು ಪ್ರವೇಶಿಸಿ, ಹೊಸ ಜೀವನವನ್ನು ಪಡೆದುಕೊಳ್ಳುತ್ತದೆ. ದೇಹ ಮಾತ್ರ ತನ್ನ ರೂಪಾಂತರವಾಗುವ ತತ್ವವನ್ನು ಕಳೆದುಕೊಂಡು, ಪಂಚಭೂತಗಳಲ್ಲಿ ಲೀನವಾಗುತ್ತದೆ. ಇಲ್ಲಿ "ಜನನ ಎನ್ನುವದು ಆತ್ಮದ ಪುನರುತ್ಥಾನ; ಮರಣ ಎನ್ನುವದು ಆತ್ಮದ ವಿಮೋಚನ" ಎಂದು ಪುಸ್ತಕದ ಲೇಖಕರಾದ ಡಾ॥ ಇವಾನ್ ಮೆಂಟಿಂಗ್ಜರು ಉದ್ದೇಶಪೂರ್ವಕವಾಗಿಯೇ ಪ್ರತಿಪಾದಿಸುತ್ತಿದ್ದಾರೆ. ಹೀಗಾಗಿ ಸಾವು ಎನ್ನುವದು ಒಂದು ಜೀವನ ವ್ಯವಸ್ಥೆಯಿಂದ ಮತ್ತೊಂದು ವ್ಯವಸ್ಥೆಗೆ ಇಡುವ ಪ್ರಪ್ರಥಮ ಹೆಜ್ಜೆಯಾಗಿದೆ. ಈ ಹಿನ್ನೆಲೆಯಲ್ಲಿ ಸಾವನ್ನು ಅಂತಿಮ ಹಂತ ಎಂದು ಪರಿಗಣಿಸಲು ಸಾಧ್ಯವಾಗುವದೇ ಇಲ್ಲ.

ಇನ್ನು ಸಾವಿನ ಭೌತಿಕ ಅಂಶಗಳ ಕುರಿತಾಗಿ ವಿಶ್ಲೇಷಿಸುವಲ್ಲಿ, ಈ "ಸಾವಿನ ಪುಸ್ತಕ"ದಲ್ಲಿ, ಓದುಗರಿಗೆ ಸವಿವರವಾದ ಸಮರ್ಪಕವಾದ ವೈಜ್ಞಾನಿಕ ಸಾಕ್ಷ್ಯಾಧಾರಗಳ ಮೂಲಕವೇ ವಿವರಗಳನ್ನು ಒದಗಿಸುತ್ತಾರೆ. ಸಾವಿನ ಹಂತದ ಸೂಕ್ಷ್ಮಾತಿಸೂಕ್ಷ್ಮ ಹಂತಗಳನ್ನೂ ಸಹಿತ ವಿವೇಚಿಸಲಾಗಿದೆ. ಇದನ್ನೆಲ್ಲ ಸವಿವರವಾಗಿ ಚರ್ಚಿಸಲೇಬೇಕಾದ ಅವಶ್ಯಕತೆ ಇದೆ. ಏಕೆಂದರೆ, ಸಾವಿನ ಸಮೀಪದಲ್ಲಿರುವ ವ್ಯಕ್ತಿ ಅಥವಾ ಅವನ ಸಂಬಂಧಿಗಳು, ಆಗಮಿಸಲಿರುವ ಸಾವಿನ ನಿರ್ಣಯಾತ್ಮಕವಾದ ಘಳಿಗೆಯನ್ನು ಎದುರಿಸಲು ಸಿದ್ಧವಾಗಬೇಕಾಗುತ್ತದೆ. ಇಲ್ಲಿ ಗಮನಿಸಬೇಕಾದ

ಮುಖ್ಯ ಸಂಗತಿ ಎಂದರೆ, "ಸಾವಿನ ಘಳಿಗೆ ಸಮೀಪವಾಗಿರುವಾಗ ಕೇಳಿ ಬರುವ ಧ್ವನಿ"ಗಳ ಕುರಿತು ಈ ಪುಸ್ತಕದ ಲೇಖಕರಾದ ಡಾ॥ ಇವಾನ್ ವೆಂಟಿಂಗ್ಸ್ - ತುಂಬ ವಿವರಗಳನ್ನು ಒದಗಿಸಿದ್ದಾರೆ; "ಆತ್ಮಸಂಬಂಧೀ" ವಿಷಯಗಳಲ್ಲಿ ಪರಿಣಾಮ ಸ್ವರೂಪದಲ್ಲಿ ವಿಘಟನೆಗೊಳ್ಳುತ್ತಿರುವ ಪ್ರಕ್ರಿಯೆಯನ್ನು ಸಾವು ಎಂದು ಕರೆಯಬಹುದಾಗಿದೆ. ಈ ಸಮಯದಲ್ಲಿ ಮನಸ್ಸಿಗೆ (ಚಿತ್ತಕ್ಕೆ) ಅನುರಣನ ಧ್ವನಿ (Humming), ಕೆಲವೊಮ್ಮೆ ಕರ್ಕಶದ ಧ್ವನಿಗಳು ಸಾವಿ ಹದಿನೈದು ತಾಸು ಮೊದಲು ಮತ್ತು ಸಾವಿನ ನಂತರದಲ್ಲಿ ಹದಿನೈದು ತಾಸಿನ ತನಕ ಅವಿರತವಾಗಿ ಕೇಳುತ್ತಿರುತ್ತವೆ. ಈ ಘಟನೆಯನ್ನು 1608 ನೇ ಇಸ್ವಿಯಲ್ಲಿ ಗ್ರೇಯುನ್ ವಾಲ್ಡೀ (Greun Waldi) ಗುರುತಿಸಿದ್ದರು. ತದನಂತರದ ಲೇಖಕರು ಬಹುತೇಕವಾಗಿ ಈ ತಘಟನೆಯನ್ನು ಆಧರಿಸಿಯೇ, ಹಲವಾರು ಸಂಶೋಧನೆಗಳ ಮೂಲಕ ಸಮರ್ಥನೀಯವಾದ ಪುರಾವೆಗಳನ್ನು ಒದಗಿಸಿದರು. ಇದನ್ನೇ ಮುಂದುವರೆಸಿದ ಡಾ॥ ಕಾಲಿಂಗ್ಸ್ (Dr. Collingvas) 1860 ರಲ್ಲಿ, ವಿಶೇಷ ಅಧ್ಯಯನ ಮಾಡಿ ಈ ವಿಷಯವನ್ನು ಒಂದು "ಅಧ್ಯಯನಶೀಲ ಶಾಸ್ತ್ರ"ವನ್ನಾಗಿಸಿದ್ದಾರೆ.

ಈ ಸರಣಿ–ಸರಣಿಗಳ ಸರಮಾಲೆಯು ಸಾವಿನ ಮೂಲಕ ತುಂಡರಿಸಲ್ಪಡುವದಿಲ್ಲ. ಈ ಪ್ರಜ್ಞೆಯಲ್ಲಿರುವ ಶಕ್ತಿ(Phowa)ಯು, ಪ್ರಜ್ಞೆಯ ಹಂತವನ್ನು ನಿಗದಿಗೊಳಿಸುತ್ತ, ಮತ್ತೊಂದು ದೇಹವನ್ನು (ರೂಪವನ್ನು) ಪ್ರವೇಶಿಸುತ್ತ ಸಾಗುತ್ತದೆ. ಭಾರತೀಯ ರಹಸ್ಯ–ವಾದ(ಗುಹ್ಯ–ವಾದ)ವು ಈ ವಿಷಯವಾಗಿ, ಅದರಲ್ಲೂ ಸ್ವೇಚ್ಛೋತ್ಕ್ರಾಂತಿಯ ಕುರಿತು ತಂತ್ರರಾಜ ಗ್ರಂಥವು ವಿವರಿಸುತ್ತದೆ. [ತಂತ್ರರಾಜ; ಪಾಠ; XXVII,VV,45-7/ 72-80]. ಇದು ದೇಹದಲ್ಲಿರುವ (ದಶ) ವಾಯುವಿನ ಕಾರ್ಯಗಳನ್ನು ವಿವರಿಸುತ್ತ, ವಾಯುವಿನ ಧಾರಣೆ ಮತ್ತು ದೇಹದ ವ್ಯವಸ್ಥೆಯ ಬಗೆಗೆ ವಿವರಗಳನ್ನು ಒದಗಿಸುತ್ತದೆ. ಇದು ದೇಹದ ಮುವತ್ತೆಂಟು ಹಂತಗಳಲ್ಲಿ ಅಥವಾ ಸಂಧಿಗಳಲ್ಲಿ ಅಂದರೆ ಮರ್ಮಗಳಲ್ಲಿ ನಡೆಯುವ ಕಾರ್ಯವನ್ನು ಕುರಿತು ಹೇಳುತ್ತಿದೆ. ಇದೇ ತೆರನಾದ ಕಾರ್ಯವು ಪುನರುತ್ಥಾನದ ಅವಧಿಯಲ್ಲಿಯೂ ನಡೆಯುತ್ತದೆಯೆ? ಎನ್ನುವ ಪ್ರಶ್ನೆ ಉದ್ಭವಿಸದರೆ, ಇದಕ್ಕೆ ಇವಾನ್ ವಿವರವಾದ ಸಮರ್ಥನೆಗಳನ್ನು ಕೊಟ್ಟಿರುವದು ಸಂತಸದ ಸಂಗತಿಯಾಗಿದೆ

ಒಂದು ನಿಯಮದಂತೆ (ತತ್ವದಂತೆ), ಸಾವಿನ ನಂತರದಲ್ಲಿ ಪ್ರಜ್ಞೆಯು ಹೇಗೆ ತನ್ನ ಸರಣಿಯನ್ನು ತುಂಡರಿಸಿಕೊಂಡು, ರೂಪಾಂತರವಾಗುತ್ತಿರುವಂತೆಯೇ,

ಇನ್ನೂ ದೇಹಧಾರಣೆ ಮಾಡಿರದ ಸ್ಥಿತಿಗೆ ಪ್ರವೇಶ ಮಾಡುವ ಹಂತದ ಸಂದರ್ಭದಲ್ಲಿ, ಅಂತಹ ಪ್ರವೇಶವು ಮಾತೃಕೆ (ಗರ್ಭ–Matrix) ಎಡೆಗೆ ಇದ್ದ ಹಾಗೆ ತೋರುತ್ತದೆ. ಆದರೆ ಈಗಾಗಲೇ ಜೀವ–ದೇಹ ಹೊಂದಿದ ವ್ಯವಸ್ಥೆಯ ಹಂತದಲ್ಲಿರುವ ದೇಹವನ್ನು ಪ್ರವೇಶಿಸುವ ಸಂದರ್ಭವಿರುವಲ್ಲಿ, ಆ ಶಕ್ತಿಯ ಕಾರ್ಯವು ಅಥವಾ ಅದರ ಶಕ್ತಿಯು(ಸಿದ್ಧಿಯು) "ಆವೇಶದ" ಮೂಲಕವಾಗಿ ಪ್ರಕಟಗೊಳ್ಳುತ್ತದೆ. ಇದು ಮತ್ತೊಂದು ದೇಹ ಮತ್ತು ಪ್ರಜ್ಞೆ ಹೊಂದಿದ ವ್ಯವಸ್ಥೆಗೆ ಪ್ರವೇಶಿಸುತ್ತಿರುವ ಬೇರೆಯದೇ ಆದ ಪ್ರಜ್ಞಾಸ್ಥಿತಿಯಾಗಿರುತ್ತದೆ. ಇದನ್ನೇ ಸರಳೀಕರಿಸಿ ವ್ಯತ್ಯಾಸವನ್ನು ಅರಿತುಕೊಳ್ಳುವದಾದಲ್ಲಿ,ಈ ರೀತಿಯಲ್ಲಿ ರೂಪು ಪಡೆಯುವ ಪ್ರಜ್ಞೆಯು "ಆವೇಶ ಪ್ರಜ್ಞೆ"ಯಾಗಿ ಹೊರ ಬರುವಲ್ಲಿ, ಅದು ಮತ್ತೆ ತನ್ನ ಮೂಲ ದೇಹಕ್ಕೆ ಹೋಗಲು ಸಾಧ್ಯವಾಗುವದಿಲ್ಲ. ಇದನ್ನೇ "ಸಾವು" ಎಂದು ಊಹಿಸಬಹುದಾದ ಹಂತ. ಇಲ್ಲಿ ಪ್ರಜ್ಞೆಯು ಅದನ್ನು ತೊರೆದಿರುತ್ತದೆ.

**ಪ್ರಜ್ಞೆಯ ಸ್ಥಾನಾಂತರ**

ಒಂದು ವೇಳೆ ಈ ಪ್ರಜ್ಞೆಯ ಸ್ಥಾನಾಂತರವು ಘಟಿಸಿದ್ದರೆ (Effected), ಅಂತಹ ಸಂಧರ್ಭವಿರುವಲ್ಲಿ, ಬಹುತೇಕವಾಗಿ ಅದು Bordo ಹಂತವಾಗಿರುವದಿಲ್ಲ. ಅಂತಹ ಸಂದರ್ಭದಲ್ಲಿ, ಪ್ರಜ್ಞೆಯ ಸ್ಥಾನಾಂತರವು ತುಂಡರಿಸಲ್ಪಟ್ಟು ಸಾವಿನ ಹಂತವನ್ನು ಒಳಗೊಂಡ ಘಟನೆಯಾಗಿರುವದಿಲ್ಲ. ಇದನ್ನು ವಿವರವಾಗಿ ತಿಳಿದುಕೊಳ್ಳ ಬೇಕೆಂದರೆ, ಈ "ಸಾವಿನ ಗ್ರಂಥ"ವನ್ನು ಪೂರ್ತಿಯಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಯಾವಾಗ ವ್ಯಕ್ತಿಯ ಉಸಿರಾಟವು ನಿಲ್ಲುವ ಹಂತವನ್ನು ತಲುಪುತ್ತದೆಯೋ, ಆಗ ಆ ವ್ಯಕ್ತಿಗೆ ಕೆಲವೊಂದು ಸೂಚನೆಗಳನ್ನು ಕೊಡಲಾಗುತ್ತದೆ. ಆ ಸೂಚನೆಗಳ ಪ್ರಕಾರವಾಗಿಯೇ ನಿಗದಿಗೊಳಸಿದ ಅಪಧಮನಿ(Arteries)ಗಳನ್ನು ಒತ್ತಿ ಹಿಡಿದು ಸೂಚನೆಗಳನ್ನು ನೀಡಲಾಗುತ್ತದೆ. (ಅಪಧಮನಿ ನಾಳಗಳು ಹೃದಯದಿಂದ ಪ್ರಾಣವಾಯುಯುಕ್ತ ಶುದ್ಧರಕ್ತವನ್ನು ದೇಹದ ಇತರ ಅಂಗೋಪಾಂಗಗಳಿಗೆ ಒಯ್ಯುವ ತೋರಭಿತ್ತಿಯ ಕಿರು ತೆರಪಿನ ನಾಳವಾಗಿದೆ. ಇನ್ನು ಅಭಿಧಮನಿಯ ನಾಳಗಳಲ್ಲಿ ಆಕ್ಸಿಜನ್ ರಹಿತ ರಕ್ತ ಪ್ರವಹಿಸುತ್ತಿರುತ್ತದೆ.) ಈ ರೀತಿಯಾಗಿ, ಅಪಧಮನಿಗಳನ್ನು ಒತ್ತಿ ಹಿಡಿಯುವದರ ಮೂಲಕ ಸಾವಿನ ಸಮೀಪದಲ್ಲಿರುವ ವ್ಯಕ್ತಿಯ ಪ್ರಜ್ಞೆಯನ್ನು ಸೂಕ್ತವಾದ ಸಂಪ್ರಜ್ಞೆಯತ್ತ ನಿರ್ದೇಶಿಸಲಾಗುತ್ತದೆ. ಸಾವಿನ–

ಪ್ರಜ್ಞೆಯ ಗುಣಲಕ್ಷಣವೆಂದರೆ, ಅದು "ಆತ್ಮಸ್ವರೂಪ ಕಾರ್ಯದ" ಭವಿಷ್ಯವನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಅಂದರೆ, ಅಸ್ತಿತ್ವದಲ್ಲಿರುವ ಈ ಜೀವವು ತನ್ನ ಮುಂದಿನ ರೂಪಾಂತರಗಳ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಹೋಗುವ ಸಂಗತಿಯನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿಯೇ ಸಾವಿನ ಸಂದರ್ಭವಿರುವ ಸಮಯದಲ್ಲಿ ಹಿಂದೂ ಮತ್ತು ಕ್ಯಾಥೋಲಿಕ್ ಪರಂಪರೆಯಲ್ಲಿ ದೇವಪೂಜೆ, ದೇವರ ನಾಮ ಪಠಣಗಳು ಇರುತ್ತವೆ.

ಈ ರೀತಿಯಲ್ಲಿ ಒತ್ತಿ ಹಿಡಿಯಲ್ಪಟ್ಟ ಅಪಧಮನಿಗಳು, ಈ ದೇಹದಿಂದ ಹೊರಗೆ ಹೊರಡುತ್ತಿರುವ ಪ್ರಾಣ(Vital Current)ವು ಪಯಣಿಸಬೇಕಾದ ಪಥವನ್ನು ನಿಬಂಧನೆಗೊಳಪಡಿಸುತ್ತದೆ. ಅತ್ಯಂತ ಸೂಕ್ತವಾದ ನಿರ್ಗಮನದ ಪಥವೆಂದರೆ "ಬ್ರಹ್ಮರಂಧ್ರ"ವಾಗಿದೆ. ಇದನ್ನು Foraman ಅಥವಾ Monoro ಎಂದು ಕರೆಯಲಾಗುತ್ತಿದೆ. ಈ ರೀತಿಯಲ್ಲಿ ಬ್ರಹ್ಮರಂಧ್ರದಿಂದ ಪ್ರಾಣೋತ್ಕ್ರಮಣವಾಗಿರುವ ಹಲವಾರು ಘಟನೆಗಳು ದಾಖಲೆಗಳಾಗಿವೆ. ಪಾಶ್ಚಿಮಾತ್ಯ ವ್ಯವಸ್ಥೆಯಲ್ಲಿ ಅತ್ಯಂತ ಪ್ರಾಚೀನ ಘಟನೆಯೆಂದರೆ, ಅತ್ಯಂತ ಕುಗ್ರಾಮವಾಗಿರುವ ಮತ್ತು ಪ್ರಾಚೀನ ಪ್ರದೇಶವೂ ಆಗಿರುವ ಸ್ಯಾನ್ ಕ್ರಿಸ್ಟೋವೆಲ್ (ಫ್ಯಾಸಿಫಿಕ್ ಮಹಾಸಾಗರದ ಸೋಲೋಮನ್ ನಡುಗಡ್ಡೆ)ದಲ್ಲಿ ಒಂದು ಘಟನೆ ದಾಖಲಿಸಲ್ಪಟ್ಟಿದೆ. ಅದೇ ರೀತಿಯಲ್ಲಿ ಧಾರ್ಮಿಕ ವಿಧಿ–ವಿಧಾನಗಳಲ್ಲಿ ಬಳಸುವ "ರಂಧ್ರವಿರುವ ಕಲ್ಲಿನ" ವಿಧಾನದ ಘಟನೆಗಳೂ ಯುರೋಪ್, ದಕ್ಷಿಣ ರಶಿಯಾ, ಮತ್ತು ದಕ್ಷಿಣ ಭಾರತದಲ್ಲಿ ಕಾಣ ಸಿಗುತ್ತವೆ. ಈ ರಂಧ್ರೀಶಿಲೆಯ ವಿಧಾನವು, ಮೃತವ್ಯಕ್ತಿಯ (ಪ್ರಾಣದ) ಮುಂದಿನ ಪ್ರಯಾಣವನ್ನು ಸುಖಕರವಾಗಿಸುವತ್ತ ಹಾಗೂ ಮೂಲ ಗುರಿಯನ್ನು ಸೇರಲಿ ಎನ್ನುವ ಭಾವವನ್ನು ಹೊಂದಿದೆ.

ಭಾರತದ ವ್ಯವಸ್ಥೆಯಲ್ಲಿ, ಗರುಡ ಪುರಾಣದ ಪ್ರೇತಖಂಡದ ವಿವರಣೆಯಂತೆ, ದೇಹಕ್ಕಿರುವ ನವರಂಧ್ರಗಳು ವ್ಯಕ್ತಿ ಬದುಕಿದ್ದಾಗ ಅನುಭವಕ್ಕೆ ದಾರಿ ಮಾಡಿ ಕೊಡುವ ಮಾರ್ಗಗಳಾಗಿವೆ. ಇವು ನೈಸರ್ಗಿಕವಾಗಿ ದತ್ತವಾಗಿರುತ್ತವೆ. ಹೀಗಾಗಿ ಗುರುಸ್ವರೂಪಿಯಾಗಿರುತ್ತವೆ. ಹೀಗಾಗಿ ಅತ್ಯಂತ ಪರಿಶುದ್ಧವಾದ ನಿಷ್ಕ್ರಮಣದ ರೀತಿಯೆಂದರೆ, ಅದು ನಾಭಿಗಿಂತ ಮೇಲಿನ ಹಂತದ ದ್ವಾರಗಳ ಮೂಲಕವೇ ಪ್ರಾಣೋತ್ಕ್ರಮಣವಾಗಬೇಕಾಗುತ್ತದೆ. ಅದರಲ್ಲೂ ತಲೆಬುರುಡೆಯ ಮೇಲ್ಭಾಗದಲ್ಲಿ ಸೀಳು ಉಂಟಾಗುವ ಮೂಲಕ (Fissure on the top of cranium) ಪ್ರಾಣ ನಿರ್ಗಮಿಸಿದಲ್ಲಿ ಶ್ರೇಷ್ಠವೆಂದು

ಪರಿಗಣಿಸಲಾಗುತ್ತದೆ. [ಸಾಧುಗಳು/ಗುರುಗಳು ದೇಹತ್ಯಾಗ ಮಾಡಿದಾಗ ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಪದ್ಧತಿ ಇದನ್ನೇ ಸಂಕೇತಿಸುತ್ತದೆ. ಮಹಾಭಾರತದ ಯುದ್ಧದ ಸಂದರ್ಭದಲ್ಲಿ ಕರ್ಣನ ಸಾವಿನ ಸಂದರ್ಭದಲ್ಲಿ ಅವನ ಸಾವುನ್ನು ಕುರಿತು ಭಾನು ಮಂಡಲವನೊಡೆದು ಅಮಲ ಸ್ವರ್ಗಕ್ಕೆ ಏರಿದ ಎನ್ನುವ ವಿವರಣೆ ಇದೆ]. ಈ ಬ್ರಹ್ಮರಂಧ್ರವು ಮನುಷ್ಯನ ದೇಹದಲ್ಲಿ ಭೌತಿಕ ಅಸ್ತಿತ್ವವನ್ನು ಹೊಂದಿದ್ದು, ಪ್ರಮಸ್ತಿಷ್ಕ(ಮುಮ್ಮಿದಿಳು)ದ ಹಂತಕ್ಕಿಂತಲೂ ಮೇಲೆ ಇರುತ್ತದೆ. ಇದನ್ನೇ ಯೋಗಶಾಸ್ತ್ರವು ಸಹಸ್ರದಳ ಪದ್ಮವೆಂದು ಗುರುತಿಸುತ್ತದೆ. ಈ ಸಹಸ್ರದಳ ಪದ್ಮದಲ್ಲಿರುವ ಆತ್ಮವು (Spirit) ಪ್ರಮುಖ ಅಭಿವ್ಯಕ್ತಿಯಾಗಿದ್ದು (Manifest) ಇದೇ ಸಂಪ್ರಜ್ಞೆಯ ಮೂಲಪೀಠವಾಗಿರುತ್ತದೆ. ಹೀಗಾಗಿಯೇ ಹಿಂದೂಗಳು ಈ ಸ್ಥಳದಲ್ಲಿ ಜುಟ್ಟು ಅಥವಾ ಶಿಖಾ (Crest-lock) ಇಟ್ಟುಕೊಂಡಿರುತ್ತಾರೆ. ಇದರ ಮೂಲಕವೇ ಅವರು ಪ್ರಜ್ಞೆಯ ಪರಮಧಾಮವಾದ ಭಗವಂತನ (ಪರಮಾತ್ಮನ) ಕೃಪೆಗೆ ಪಾತ್ರರಾಗಿ, ಗೌರವಯುತವಾಗಿ, ಮುಕ್ತಿಯನ್ನು ಪಡೆಯಲು ಆಯ್ಕೆಯಾಗುವದನ್ನು ಇಚ್ಛಿಸುತ್ತಾರೆ. ಈ ಶಿಖಾ ಮಾರ್ಗದ ಮೂಲಕವೇ ಸ್ವರ್ಗಕ್ಕೋ ಅಥವಾ ನರಕಕ್ಕೋ ಸಾಗಲು ಸಾಧ್ಯವಾಗುತ್ತದೆ ಎನ್ನುವ ಬಾಲಿಶ ಹೇಳಿಕೆಗಳ ಮೂಲಕ ಅವರನ್ನು ಅವಹೇಳನ ಮಾಡುವದನ್ನು ಬಿಡಬೇಕಾಗಿದೆ.

---

**ಹೆಚ್ಚಿನ ಅಧ್ಯಯನಕ್ಕೆ –**


* The Science of Death; Thanatology; Author; Rosewell Parks [Journal of the American Medical Association 1912/4/2]

1. ತಂತ್ರರಾಜ, ಭಾಗ 17, 15 / ಪುಟ (83–100), ಸಾವು ಸಂಭವಿಸುತ್ತಿರುವಾಗ ತೋರುವ ಸಂಕೇತಗಳು. [ತಾಂತ್ರಿಕ ಪಠ್ಯಗಳು; ಲೇ; ಆರ್ಥರ್ ಎವಿಲಾನ್]

2. ತಾಂತ್ರಿಕ ಗ್ರಂಥಗಳು; ಸಂಪುಟ VII ಪುಟ 23 ಶ್ರೀ ಚಕ್ರಸಂಹಾರ ಗ್ರಂಥ (ಬೌದ್ಧ ಗ್ರಂಥ)


ಈ ಲೇಖನವು “ದಿ ಟಿಬೇಟಿಯನ್ ಬುಕ್ ಆಫ್ ಡೆಥ್’ದ ಮುನ್ನುಡಿಯನ್ನು ಆಧರಿಸಿದೆ.

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ


ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 6ನೇ ನವಂಬರ್ 2022 ಭಾನುವಾರ ಬೆಳಿಗ್ಗೆ 10.30 ಗಂಟೆಯಿಂದ 11.30ರ ವರೆಗೆ ಶ್ರೀ ಭರತ್ ರಾಮ್ (ಆರೋ ಯೂತ್ ಸದಸ್ಯರು) ಇವರು "ಈಶ–ಉಪನಿಷತ್: ಶ್ರೀ ಅರವಿಂದರ ಬೆಳಕಿನಲ್ಲಿ" ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಈ ಸರಣಿ ಉಪನ್ಯಾಸ ಕಾರ್ಯಕ್ರಮ ಇನ್ನು ಮುಂದೆ ಪ್ರತಿ ಶನಿವಾರ ಬೆಳಿಗ್ಗೆ 10.30 ರಿಂದ 11.30ರ ವರೆಗೆ ನಡೆಯುವುದು.

ದಿನಾಂಕ 17ನೇ ನವಂಬರ್ 2022 ಗುರುವಾರ "ಶ್ರೀಮಾತೆಯವರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 6.30 ಗಂಟೆಯವರೆಗೆ ಶ್ರೀ ಭರತ್ ರಾಮ್ (ಆರೋ ಯೂತ್ ಸದಸ್ಯರು) ಇವರು "Love of the Divine Mother" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಅನೇಕರು ಭಾಗವಹಿಸಿದ್ದರು.

ದಿನಾಂಕ 24ನೇ ನವಂಬರ್ 2022 ಗುರುವಾರ "ಶ್ರೀ ಅರವಿಂದರ ಸಿದ್ಧಿ" ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರ ವರೆಗೆ ಸಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 6.30 ಗಂಟೆಯ ವರೆಗೆ ಡಾ॥ ಅಜಿತ್ ಸಬ್ನೀಸ್‌ರವರು "The Mother's Action" ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಅನೇಕರು ಭಾಗವಹಿಸಿದ್ದರು.

ಫೋಟೋ ಚಿತ್ರ ಪ್ರದರ್ಶನ "Sri Aurobindo On Nationalism" ವಿಷಯವಾಗಿ ದಿನಾಂಕ 24ನೇ ನವಂಬರ್ 2022 ಇಂದ 15ನೇ ಫೆಬ್ರವರಿ 2023ರ ವರೆಗೂ ಶ್ರೀ ಅರವಿಂದೋ ಸಂಕೀರ್ಣದ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದೆ.




ಚಿಂತನಾಪೂರ್ಣ ಕಾಲ–ಋತು–ಮೂರು ಉಪರತಿಯ ಹೊಂದಿ
ಜಾಜ್ವಲ್ಯಮಾನ್ಯ ಪಥದಲ್ಲಿ ನಿತ್ಯ ಪದ–ಧ್ವನಿಯನಿರಿಸಿ
ಒಂದಾದ ಮೇಲೆ ಒಂದೊಂದರಂತೆ ಗರ್ಭಸ್ಥ ಘಳಿಗೆಯರಸಿ
ಸೂಕ್ಷ್ಮಾತಿಸೂಕ್ಷ್ಮ ಅವಲೋಕದೊಳಗೆ ಛಂದ–ವಿಶ್ಲೇಷವಿರಿಸಿ
ದೇದೀಪ್ಯಮಾನದಾ ಆಳಗಳಲು ಪರಿವೀಕ್ಷೆಗೊಳುತಲಿರಲು
ಅಗೋಚರದಲ್ಲಿ ತಾನಿದ್ದ ದಿವ್ಯ–ಜ್ವಾಲೆಯಭೀಪ್ಸೆಗೊಳಲು
ಮಾಬಲದ ಜನ್ಮ ಅವತರಣಗೊಂಡು ಆಗಮಿಸಲೆಂದು ತಪಿಸಿ
ಜಾಗರಣೆಯಲ್ಲಿ ಪ್ರಾರ್ಥಿಸುತ ಸತತ ಪೂರ್ಣತೆಯ ಗುರಿಯ ಜಪಿಸಿ

– **ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 1  ಪುಟ 351)**

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಮರಣವೆಂಬುದಿದು ನಮ್ಮ ಚರಣಕ್ಕೆ ಚಾರಣದ ಪಥದ ಹಾಗೆ
ನಮ್ಮ ಗಮನಕಿದು ಗಮ್ಯ ತಾನಲ್ಲ, ಅಂತಿಮದ ಗುರಿಯ ಹಾಗೆ,
ಗಹನ ಭಾವದಲಿ ಆದಿ ಪರಿಶ್ರಮದ ಹಲ–ಕೆಲವು ನಾಡಿ–ಸ್ಪಂದ
ಆ ಗುಪ್ತಪಾಶದಲಿ ನಮ್ಮ ಆತ್ಮಗಳ ಸೆಳೆತಕ್ಕೆ ಚರ್ಮಬಂಧ

– ಪುಟ್ಟು ಕುಲಕರ್ಣಿ
(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6  ಪುಟ 197)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.